12.00 ಪಿ.ಎಂ

ಈಗ ಅವರು ಕರೆಸುವುದಕ್ಕೆ ಹೇಳಿದ್ದಾರೆ. ಅವರು ಬರುವವರೆವಿಗೂ ನಾನು ಮಾತನಾಡುತ್ತೇನೆ ಅವರ ಬಂದ ತಕ್ಷಣ ಅವರು ಪ್ರಾರಂಭಿಸಲಿ. ಹಾಗಾದರೆ ನಾನು ಮಾತನಾಡುತ್ತೇನೆ, ಮಂತ್ರಿಗಳು ಬರದೇ ಇದ್ದರೆ, ಸಾಕು ನನ್ನ ಪಾಲಿಗೆ ಬಂದಿದ್ದೇ ಪಂಚಾಮೃತ, ಮೂರು ಜನ ಇದ್ದಾರೆ ನಾನು ಮಾತನಾಡುತ್ತೇನೆ.

ಛೇರ್ಮನ್: ಕೊನೇಪಕ್ಷ ನೀವು ಕಾರ್ಯದರ್ಶಿಗಳನ್ನಾದರೂ ಕರೆಸಿ.

ಶ್ರೀ ಬಿ. ಸೋಮಶೇಖರ್: ಮುಖ್ಯ ಸಚೇತಕರೇ, ನಾನು ಮಾತನಾಡುವಷ್ಟರಲ್ಲಿ ಅಧಿಕಾರಿಗಳನ್ನು ಕರೆಸಿ.

ಛೇರ್ಮನ್: ಕೊನೇಪಕ್ಷ ಅಧಿಕಾರಿಗಳಾದರೂ ಬರಲಿ.

ಶ್ರೀ ಬಿ. ಸೋಮಶೇಖರ್: ಕೊನೆಯ ಪಕ್ಷ ಆರ್ಥಿಕ ಇಲಾಖೆಯ ಅಧಿಕಾರಿಗಳು ಬಂದರೆ,..

ಛೇರ್ಮನ್: ತಾವು ಪ್ರಾರಂಭಿಸುತ್ತೀರಲ್ಲವೇ? ಓ.ಕೆ. ತಾವು ಮಾತನಾಡಿ.

ಶ್ರೀ ಬಿ. ಸೋಮಶೇಖರ್: ಹೌದು. ಸ್ವಲ್ಪ ಕರೆಸಿದರೆ ಒಳ್ಳೆಯದು.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ: ಇಲ್ಲಿ ಯಾರು ಇರಬೇಕು ಎಂದು ಹೇಳಿ ಅವರಿಗೆ ಹೇಳಿದ್ದಾರೆ. They are there now. It will go on record. ನಿಮಗೆ ಸಮಂಜಸವಾದ ಉತ್ತರವನ್ನು ಸರ್ಕಾರ ಕೊಡುತ್ತದೆ. ಆ ಪ್ರಶ್ನೆಯಿಲ್ಲ...

6. ವಿತ್ತೀಯ ಕಾರ್ಯಕಲಾಪ

2004-05ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

†**ಶ್ರೀ ಬಿ. ಸೋಮಶೇಖರ್**: ಬರೀ ರೆಕಾರ್ಡ್‌ಗೆ ಹೋಗುವುದು ಮಾಡುವುದಾದರೆ.. ಅಧಿಕಾರಿಗಳು ಎಂದರೆ, ಅಡಿಷನಲ್ ಸೆಕ್ರೆಟರಿ ಫೈನಾನ್ಸ್ ಇದ್ದಾರೆಯೇ? ಸೆಕ್ರೆಟರಿ ಫೈನಾನ್ಸ್ ಇದ್ದಾರೆಯೇ? ಯಾರೂ ಒಬ್ಬರೂ ಕಾಣಿಸುತ್ತಿಲ್ಲ. ಬಜೆಟ್ ಮೇಲೆ ಚರ್ಚೆ ಆಗುತ್ತಿರುವ ಸಂದರ್ಭದಲ್ಲಿ ಮುಖ್ಯವಾಗಿ ಫೈನಾನ್ಸ್ ಸೆಕ್ರೆಟರೀಸ್ ಇರಬೇಕಾಗಿತ್ತು. ಅವರೂ ಇಲ್ಲ. ಹೋಗಲಿ ಕೌನ್ಸಿಲ್‌ನಲ್ಲಿ ಚರ್ಚೆ ನಡೆಯುತ್ತದೆ ಅಂದರೆ ಅದೊಂತು ತರಹ, ಅಲ್ಲೊಂದು ಕಡೆ ಇಲ್ಲೊಂದು ಕಡೆ ಹೋಗಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು 2004-05ನೇ ಸಾಲಿನ ಆಯವ್ಯಯವನ್ನು ನಾಲ್ಕು ತಿಂಗಳವರೆಗೆ ಲೇಖಾನುದಾನವನ್ನು ಕೋರಿ ಈ ವರ್ಷ ಮಂಡಿಸಿದ್ದಾರೆ. ಮತ್ತು ಇದು ಈ ಸರ್ಕಾರದ ಕೊನೆಯ ಆಯವ್ಯಯ. ಈಗಾಗಲೇ ನಾಲ್ಕೂವರೆ ವರ್ಷಗಳ ಕಾಲ ಈ ಸರ್ಕಾರ ರಾಜ್ಯವನ್ನು ಆಳಿದೆ. ಐದು ಆಯವ್ಯಯವನ್ನು ಇದುವರೆವಿಗೂ ಮಂಡಿಸಿದೆ. ಈ ವರ್ಷದ ಆಯವ್ಯದಲ್ಲಿ ನೋಡಿದರೆ, ಅವರು ಏನೇನು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಎಲ್ಲಾ ವಿಚಾರದಲ್ಲೂ ಸತ್ಯಕ್ಕೆ ದೂರವಾಗಿರತಕ್ಕಂಥ ಯಾವುದೇ ಅಂಕಿಅಂಶಗಳಿಗೆ ಹೋಲಿಕೆಯಾಗದೇ ಇರತಕ್ಕಂಥ ಮತ್ತು ಏನು ಹೇಳಿದ್ದಾರೆ ಆ ಅಂಕಿಅಂಶಗಳು ಮತ್ತು ಪ್ರಗತಿ, ಯಾವುದೇ ಒಂದು ಅಧ್ಯಯನದ ದಾಖಲಾತಿಗಳ ಆಧಾರದ ಮೇಲಾಗಲಿ, ಅಥವಾ ಸಾಧನೆಯ ಆಧಾರದ ಮೇಲಾಗಲಿ, ಈ ಒಂದು ಡಾಕ್ಯೂಮೆಂಟ್ ಆಗಿಲ್ಲ. ಇದು ಕೇವಲ ಸಾರ್ವಜನಿಕರ ಮನಸ್ಸಿನಲ್ಲಿ ದೊಡ್ಡ ಪ್ರಚಾರವನ್ನು ಗಿಟ್ಟಿಸತಕ್ಕಂಥ ಚುನಾವಣೆಗೆ ಹೋಗುವ ಸಂದರ್ಭದಲ್ಲಿ ಜನರಿಗೆ ಮೋಸ ಮಾಡತಕ್ಕಂಥ ಒಂದು ಬಜೆಟ್ ಇದಾಗಿದೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೇಯದಾಗಿ, ಈ ಸರ್ಕಾರ ಒಂದು Medium

(†ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

term fiscal plan for Karnataka, ಅಂದರೆ ಮಧ್ಯಾಮಾವಧಿಯ ಆರ್ಥಿಕ ಯೋಜನೆ ಹೊರಡಿಸಿದರು. ಅದರಲ್ಲಿ ತಮ್ಮದೇ ಆದಂಥ ಒಂದು ಅಳತೆಗೋಲನ್ನು ಹಾಕಿಕೊಂಡರು. ಅದರಲ್ಲಿ ಆಯವ್ಯಯದ ಕೊರತೆಯನ್ನು ಕಡಿಮೆ ಮಾಡುವುದು, ಸಾಮಾಜಿಕ ವಲಯದಲ್ಲಿ ಹೆಚ್ಚು ಪ್ರಗತಿಯನ್ನು ಕಾಣುವುದು, ಮತ್ತು ನಮ್ಮ ಹಣದುಬ್ಬರವನ್ನು ಕಡಿಮೆ ಮಾಡುವುದು. ಹೀಗೆ ಅನೇಕ ಆರ್ಥಿಕ ನಿಬಂಧನೆಗಳನ್ನು ತಾವೇ ಹಾಕಿಕೊಂಡರು. ಮತ್ತು ಅದನ್ನು ಪ್ರತಿ ವರ್ಷ ನಾವು ಈ ರಾಜ್ಯಕ್ಕೆ ಮಂಡಿಸುತ್ತೇವೆಂದು ಹೇಳಿದ್ದರು. ಅದರಲ್ಲಿ ನಾಲ್ಕೂವರೆ ವರ್ಷಗಳ ಕಾಲ ಈಗಾಗಲೇ ತುಂಬಿದೆ. ಯಾವುದಾದರೂ ಒಂದನ್ನಾದರೂ ಇವರು ಮಾಡಿದ್ದಾರೆಂದು ನೋಡಿದರೆ, ಅದನ್ನು ಮಾಡಿರುವುದರ ಬದಲಾಗಿ, ಅಷ್ಟಕ್ಕಾದರೂ ನಿಲ್ಲಿಸದೇ ಇನ್ನು ಹೆಚ್ಚು ಹೆಚ್ಚು ವ್ಯತ್ಯಾಸಗಳನ್ನು ನಾವು ಕಾಣುತ್ತಿದ್ದೇವೆ. ಮೊದಲನೆಯದಾಗಿ, ಆರ್ಥಿಕ ಕೊರತೆ ಫಿಜಿಕಲ್ ಡಿಫಿಸೀಟ್ 2.4 ಇದೆ, Gross State Domestic Product - GSDP ಜಿಎಸ್‌ಡಿಪಿ ಯನ್ನು 2.4 ಇದ್ದದ್ದು ಇವತ್ತು 2.6 ಆಗಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಅದರಲ್ಲಿ ಯಾವುದೇ ರೀತಿಯ ಕಡಿತವಾಗಿಲ್ಲ. ಬೆಳವಣಿಗೆ, ರಾಜಸ್ವ ನಿವ್ವಳದ ಉದ್ಪಾದನೆ ಪ್ರತಿ ವರ್ಷ ನಾವು ಗಣನೆಗೆ ತೆಗೆದುಕೊಂಡರೆ, 1999–2000ದಲ್ಲಿ ನಮ್ಮ ಸರ್ಕಾರ ಬಿಟ್ಟಂಥ ಅವಧಿಯಲ್ಲಿ ಅದು 7.3 ಇತ್ತು. ಹೋದ ವರ್ಷಕ್ಕೆ 4.4. ಆಗಿದೆ. ರಾಷ್ಟ್ರದ್ದು ಸರಾಸರಿ 5.3 ಇದ್ದರೆ ನಮ್ಮಲ್ಲಿ 4.4 ಆಗಿದೆ. 2003–2004ಕ್ಕೆ ಅದು ಬಹುಶಃ ಇನ್ನು ಕಡಿಮೆಯಾಗಿದೆ ಎನ್ನತಕ್ಕಂಥದ್ದು ಏಕಾನಾಮಿಕ್ ಸರ್ವೇ ಪ್ರಕಾರ ನಾವು ಕಾಣಬಹುದು. ಇದು ಯಾವ ಒಂದು ನನ್ನ ಅಂಕಿಅಂಶವಲ್ಲ, ಏಕಾನಾನಿಕ್ ಸರ್ವೇ ಎಂದು ಪ್ರತಿ ವರ್ಷ ಬಿಡುಗಡೆ ಮಾಡುತ್ತಾರೆ ಅದರಲ್ಲಿ ಬಂದಿರತಕ್ಕಂಥ ಒಂದು ಅಂಕಿಅಂಶ. ಫಿಜಿಕಲ್ ಡಿಫಿಸಿಟ್ ಅನ್ನು 2005–06ಕ್ಕೆ ಶೇಕಡ 2.2 ರಷ್ಟಕ್ಕೆ ಇಳಿಸುತ್ತೇವೆಂದು ಹಾಕಿಕೊಂಡಿದ್ದರು. ಆದರೆ ಅದು ಇನ್ನು ಸುಮಾರು 2.6 ರಷ್ಟು ಇದೆ ಎನ್ನತಕ್ಕಂಥದ್ದು ಈ ವರದಿಯ ಅಂಶ. "ಕುಗ್ಗಿದ ಗ್ರಾಮೀಣ ಆದಾಯ ಮತ್ತು ವಿನಿಯೋಗಗಳ ವೆಚ್ಚಗಳು ಕೈಗಾರಿಕಾ ವಲಯದ ಮೇಲೆ ಸರಣಿ ಪರಿಣಾಮ ಬೀರದ್ದರಿಂದ ಆ ವರ್ಷಗಳಲ್ಲಿ ವಾಸ್ತವ ಬೆಳವಣಿಗೆ ದರವು ಶೇಕಡ 2 ಮತ್ತು ಶೇಕಡ 4ಕ್ಕೆ ಇಳಿಯಿತು. ಆದರೆ ನಂತರ 2003–04ರಲ್ಲಿ ಸತತ ಮೂರನೆ ಮುಂಗಾರಿನ ವೈಫಲ್ಯದ ನಡುವೆಯೂ ಕೈಗಾರಿಕಾ ಉತ್ಪಾದನೆಯು ಚೇತರಿಸಿಕೊಂಡು ಶೇಕಡ 6ರ ಬೆಳವಣಿಗೆ ಕಂಡಿದೆ. ಈ ಚೇತರಿಕೆಗೆ "ಫೀಲ್–ಗುಡ್" ಅಂಶವೊಂದೇ ಕಾರಣವೆಂದು ನನಗೆ ಅನ್ನಿಸುತ್ತದೆ" ಎಂದು ಇಲ್ಲಿ ಒಂದು ಕಡೆ ಹೇಳಿದ್ದಾರೆ. 1998–99ರಲ್ಲಿ 17 ಸಾವಿರ ತಲಾ ಆದಾಯವು 2003–04ಕ್ಕೆ 22 ಸಾವಿರ ಏರಿದೆ, ಇದರಿಂದ ಹಣದುಬ್ಬರವು ನಿಯಂತ್ರಣದಲ್ಲಿದ್ದು, ಶೇಕಡ 4.5 ರಷ್ಟು ಪ್ರಮಾಣದಲ್ಲಿದೆ ಮತ್ತು ಬಡ್ಡಿ ದರಗಳು ಕೆಳಮುಖವಾಗಿದೆ. ಮತ್ತೊಂದು ಆರೋಗ್ಯಕರ ಅಂಶವೆಂದರೆ, 17 ಸಾವಿರದಿಂದ 22 ಸಾವಿರಕ್ಕೆ ಆದಾಯ ಹೆಚ್ಚಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ನಾವು ನೋಡಿದಾಗ, ಈ ರಾಜಸ್ವ ಸ್ವೀಕೃತಿಯಲ್ಲಿ ರೆವಿನ್ಯೂ ರಸೀಟ್ಸ್‌ನಲ್ಲಿ, ಪ್ರತಿ ವರ್ಷ ಕೊರತೆ ಕಾಣುತ್ತಾ ಬಂದಿದ್ದೇವೆ. 2000–01ರಲ್ಲಿ ಒಂದು ಸಾವಿರ ಕೋಟಿ ಕೊರತೆಯನ್ನು ನಾವು ಕಂಡಿದ್ದೇವೆ. ನಂತರ 2001–02ರಲ್ಲಿ ಈ ಸರ್ಕಾರದಲ್ಲಿ ಎರಡು ಸಾವಿರ ಕೋಟಿ ಕೊರತೆಯನ್ನು ಕಂಡಿದ್ದೇವೆ. 2002–03ರಲ್ಲಿ ಸುಮಾರು ಎರಡು ಸಾವಿರ ಕೋಟಿ ರೂ ಕೊರತೆಯನ್ನು ಕಂಡಿದ್ದೇವೆ. 2003–04ರಲ್ಲಿ ಕೂಡ ಹೆಚ್ಚು ಪ್ರೊಜೆಕ್ಟ್‌ನ್ನು ಮಾಡಿಕೊಂಡಿದ್ದಾರೆ. ಇದರಲ್ಲಿ ಯಾವ ರೀತಿ ಪ್ರೊಜೆಕ್ಟ್ ಮಾಡಿಕೊಂಡಿದ್ದಾರೆನ್ನುವುದಕ್ಕೆ ಯಾವುದೇ ಆಧಾರವಿಲ್ಲ. ಅವರು ಹೆಚ್ಚು ಪ್ರೊಜೆಕ್ಟ್ ಮಾಡಿಕೊಳ್ಳುತ್ತಾರೆ,

ಆದರೆ ವಸೂಲಾತಿ ಮಾತ್ರ ಪ್ರತಿ ವರ್ಷ ಕಡಿಮೆಯಾಗುತ್ತಾ ಬಂದಿದೆ. ಅದನ್ನು ಯಾವ ರೀತಿ ಸರಿದೂಗಿಸುತ್ತಾರೆ ಎನ್ನುವುದು ನಮಗೆ ಕಾಣಿಸುತ್ತಿಲ್ಲ. ನನ್ನ ಅನಿಸಿಕೆ ಏನೆಂದರೆ, ಇದು ಒಂದು ಡಿಫೆಕ್ಟೀವ್ ಎಸ್ಟಿಮೇಟ್ ಎಂದು ಹೇಳಬಹುದು. ಇದರಲ್ಲಿ ಸ್ವೀಕೃತಕ್ಕೂ ಮತ್ತು ಖರ್ಚಿಗೂ ಬಹಳ ವ್ಯತ್ಯಾಸ ಇದೆ. It is not based on actual receipts and expenditure. The Recepits are inflated and the expenditure is wrongly projected. ಇದರ ಉದ್ದೇಶ ಏನೆಂದರೆ, ಸಾರ್ವಜನಿಕರಿಗೆ ಮಸಿ ಬಳಿಯತಕ್ಕಂಥ ಒಂದು ಕೆಲಸ. ರೆವಿನ್ಯೂ ಡಿಫಿಸಿಟ್ ತಾವು ಎಷ್ಟು ತೋರಿಸಿದ್ದೀರಿ? 135 ಕೋಟಿ ರೂಪಾಯಿ ತೋರಿಸಿದಿರಿ. ಫಿಜಿಕಲ್ ಡಿಫಿಸಿಟ್ 3757 ರೂ ಕೋಟಿ ತೋರಿಸಿದರಿ. ಇದರಲ್ಲಿ ಯಾವುದೇ ಅಂಕಿಅಂಶಗಳು ಸರಿಯಾಗಿ ಕಾಣುತ್ತಿಲ್ಲ. ಮತ್ತೆ ಇದರ ಜೊತೆಗೆ ಹಿಂದೆ ಇದ್ದಂಥ ನಮ್ಮ ಸರ್ಕಾರವನ್ನು ತಾವು ದೂರಿದ್ದೀರಿ. ಮತ್ತೊಂದು ಪ್ಯಾರಾದಲ್ಲಿ ಕೇಂದ್ರಸರ್ಕಾರವನ್ನೂ ಸಹ ತಾವು ದೂರಿದ್ದೀರಿ. ಕೇಂದ್ರ ಸರ್ಕಾರದ ಬಗ್ಗೆ ನೀವು ಏನು ಹೇಳಿದ್ದೀರೆಂದರೆ, ವಿಶ್ವಬ್ಯಾಂಕ್‌ನಿಂದ 1200 ಕೋಟಿ ರೂಪಾಯಿ ಸಾಲ ಪಡೆಯುವುದಕ್ಕೆ ಕೇಂದ್ರ ಸರ್ಕಾರ ನಿಮಗೆ ಸಹಾಯವನ್ನು ಮಾಡಿಲ್ಲ ಎಂದು ಹೇಳಿದ್ದೀರಿ. ಅಂದರೆ, ವಿಶ್ವಬ್ಯಾಂಕ್‌ನವರು ಸಾಲ ಕೊಡುವುದಕ್ಕೆ ಒಪ್ಪಿಕೊಂಡಿದ್ದರೂ ಸಹಿತ ಕರ್ನಾಟಕ ರಾಜ್ಯಕ್ಕೆ ಸಾಲ ಮಂಜೂರು ಮಾಡಲು ಭಾರತ ಸರ್ಕಾರ ವಿತ್ತ ಸಚಿವಾಲಯದ ಜೊತೆ ಸಮಾಲೋಚಿಸಿ ಸಾಲದ ಬಗ್ಗೆ ಮಾತುಕತೆಗಳ ದಿನಾಂಕವನ್ನು ಸಹ ನಿಗದಿಪಡಿಸಿತ್ತು. ಆದರೆ, ಕೇಂದ್ರ ಸರ್ಕಾರವು ಈ ಮಾತುಕತೆಗಳನ್ನು ರದ್ದುಪಡಿಸಿತು ಎಂದು ಹೇಳಿದ್ದಾರೆ. ಇವತ್ತಿನ ದಿವಸ ಸಾಲ ಪಡೆಯಬೇಕಾದರೆ ಕೆಲವು ಅಳತೆಗೋಲು ಇರುತ್ತದೆ. ಕೇಂದ್ರ ಸರ್ಕಾರ ಇದನ್ನು ಪ್ರೋಸಸ್ ಮಾಡಿ ವಿಶ್ವಬ್ಯಾಂಕ್ ಕಳುಹಿಸಿಕೊಡಬೇಕಾಗುತ್ತದೆ. ಆನಂತರ ವಿಶ್ವಬ್ಯಾಂಕ್‌ನವರು ರಾಜ್ಯ ಸರ್ಕಾರವನ್ನು ಸಾಲವನ್ನು ಮಂಜೂರು ಮಾಡುತ್ತಾರೆ. ಆದ್ದರಿಂದ, ಇದನ್ನು ಯಾವ ಆಧಾರದ ಮೇಲೆ ಕೊಡುತ್ತಾರೆ ಎನ್ನತಕ್ಕಂಥದ್ದನ್ನು ನಾವು ನೋಡಬೇಕಾಗುತ್ತದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಯಾವ ರೀತಿ ಇದೇ ಎನ್ನತಕ್ಕಂಥದ್ದನ್ನು ನೋಡಬೇಕಾಗುತ್ತದೆ. 2000–2001ನೇ ಸಾಲಿನಲ್ಲಿ 1075 ಕೋಟಿ ರೂಪಾಯಿ ಸ್ವೀಕೃತಿಯಾಗಿದ್ದು, ಇದಕ್ಕೆ 576 ಕೋಟಿ ರೂಪಾಯಿ ಬಡ್ಡಿಯನ್ನು ನೀವು ಕೊಡಬೇಕಾಗಿದೆ. 2001–2002ನೇ ಸಾಲಿನಲ್ಲಿ ಇದು 2176 ಕೋಟಿ ರೂಪಾಯಿ ಆಗಿದೆ. ಅಂದರೆ, ಪ್ರಿನ್ಸಿಪಲ್ ಮತ್ತು ಬಡ್ಡಿ ಹಣಕ್ಕೆ 17 ಪರ್ಸೆಂಟ್ ಲೋನ್ ಹಣವನ್ನು ನೀವು ಕೇಂದ್ರ ಸರ್ಕಾರಕ್ಕೆ ಕೊಡಬೇಕಾಗಿದೆ. ಮತ್ತೆ ನಮ್ಮ ರಾಜ್ಯದ ಅವರೇಜ್ ರೆವಿನ್ಯೂ 2461 ಕೋಟಿ ರೂಪಾಯಿ ಇದ. ಹಾಗೆಯೇ ನಮ್ಮ ದೇಶದ್ದು 2044 ಕೋಟಿ ರೂಪಾಯಿ ಇದೆ. ಅಂದರೆ, ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದ ಸರಾಸರಿ ಸುಮಾರು 433 ಕೋಟಿ ರೂಪಾಯಿ ಜಾಸ್ತಿಯಿರುವುದರಿಂದ ಕೇಂದ್ರ ಸರ್ಕಾರ ವಿಶ್ವಬ್ಯಾಂಕ್‌ಗೆ ಶಿಫಾರಸ್ಸು ಮಾಡಲು ಕಷ್ಟವಾಗುತ್ತದೆ. ಮತ್ತೆ ಇವತ್ತಿನ ದಿವಸ ರಾಜ್ಯ ಸರ್ಕಾರ ಗ್ರ್ಯಾಂಟ್–ಇನ್–ಏಡ್‌ನಲ್ಲಿಯೂ ಕೂಡ ಕೇಂದ್ರ ಸರ್ಕಾರದೊಂದಿಗೆ ಹೆಚ್ಚಿಗೆ ಹಣವನ್ನು ಪಡೆದಿದೆ. ಇದಕ್ಕೆ ಸಂಬಂಧಪಟ್ಟಂತೆ ಕೆಲವು ಮಾನದಂಡ ನೋಡಿಕೊಂಡಾಗ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರ ಹೆಚ್ಚು ಹಣವನ್ನು ಪಡೆದುಕೊಂಡಿರುವುದು ಮತ್ತು ಕೊರತೆ ಜಾಸ್ತಿಯಿರುವುದರಿಂದ ಇವರು ವಿಶ್ವಬ್ಯಾಂಕ್‌ನಿಂದ ಸಾಲ ಪಡೆಯುವುದಕ್ಕೆ ಕೇಂದ್ರ ಸರ್ಕಾರದವರು ಶಿಫಾರಸ್ಸು ಮಾಡಿರುವುದಿಲ್ಲ. ಆದ್ದರಿಂದ, ತಮ್ಮ ತಪ್ಪನ್ನು ಮುಚ್ಚಿಕೊಂಡು ಕೇಂದ್ರ ಸರ್ಕಾರವನ್ನು ದೂಷಣೆ ಮಾಡತಕ್ಕಂಥದ್ದು ಸಮಂಜಸವಲ್ಲ ಎನ್ನತಕ್ಕಂಥದ್ದು ನನ್ನ ವಾದವಾಗಿದೆ. ಮತ್ತೆ ಪ್ಯಾರಾ 18ರಲ್ಲಿ ಏನು ಹೇಳಲಾಗಿದೆ ಎಂದರೆ, "ಕಳೆದ ಐದು ವರ್ಷಗಳಲ್ಲಿ ಆಯವ್ಯಯ ಪದ್ಧತಿಗಳಿಗೆ ನಾವು

ಸುಧಾರಣಾ ಚೌಕಟ್ಟನ್ನು ಅಳವಡಿಸಿರುವುದರಿಂದ ರಾಜಸ್ವದ ಕೊರತೆ ಕಡಿಮೆಯಾಗಲು ಕಾರಣವಾಯಿತು; ಮತ್ತು ಆದ್ಯತಾವಲಯಗಳಿಗೆ ಹೆಚ್ಚು ಸಂಪನ್ಮೂಲಗಳನ್ನು ಬಿಡುಗಡೆಗೊಳಿಸಲು ನೆರವಾಯಿತು. ಇದು ಬಡತನ ನಿಯಂತ್ರಿಸಿ ಜನಸಾಮಾನ್ಯರ ಜೀವನ ಗುಣಮಟ್ಟವನ್ನು ಸುಧಾರಿಸಿದೆ." ಎಂದು ಒಂದು ಕಡೆ ಹೇಳಿದ್ದೀರಿ. ಮತ್ತೆ ಹಿಂದಿನ ಸರ್ಕಾರ ಕೊಟ್ಟಿರತಕ್ಕಂಥ ಬಳುವಳಿಯಿಂದ ನಮ್ಮ ಸರ್ಕಾರಕ್ಕೆ ಇವತ್ತು ತೊಂದರೆಯಾಗಿದೆ ಎಂಬುದನ್ನು ಸಹ ಹೇಳಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ಅಂಕಿ-ಅಂಶಗಳನ್ನು ನಾನು ಇಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. 1996-1997ರಲ್ಲಿ ನಮ್ಮ ಸರ್ಕಾರ ಇದ್ದಾಗ ರೆವಿನ್ಯೂ ಡಿಫಿಸಿಟ್ 729 ಕೋಟಿ ರೂಪಾಯಿ ಇತ್ತು. 2000-2001ನೇ ಸಾಲಿನಲ್ಲಿ ಈ ಒಂದು ರೆವಿನ್ಯೂ ಡಿಫಿಸಿಟ್ 3,281 ಕೋಟಿ ರೂಪಾಯಿ ಆಗಿದೆ. ಅಂದರೆ, 2001-2002ನೇ ಸಾಲಿನಲ್ಲಿ 6 ಪಟ್ಟಿನಷು ರೆವಿನ್ಯೂ ಡಿಫಿಸಿಟ್ ಜಾಸ್ತಿಯಾಗಿರತಕ್ಕಂಥದ್ದನ್ನು ನಾವು ನೋಡಬಹುದು. ಅಂದರೆ, ನಮ್ಮ ಸರ್ಕಾರ ಇದ್ದಂಥ ಐದು ವರ್ಷದ ಅವಧಿಯ ಹೋಲಿಕೆಯನ್ನು ಮಾಡಿದಾಗ ಇವತ್ತಿದಿವಸ ರೆವಿನ್ಯೂ ಡಿಫಿಸಿಟ್ 6 ಪಟ್ಟು ಜಾಸ್ತಿಯಾಗಿದೆ. ಮತ್ತೆ 1996-1997ನೇ ಸಾಲಿನಲ್ಲಿ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಆರ್ಥಿಕ ಹೊರೆ 13,495 ಕೋಟಿ ರೂಪಾಯಿ ಇತ್ತು. ಆದರೆ 2001-2002ನೇ ಸಾಲಿನಲ್ಲಿ 32,566 ಕೋಟಿ ರೂಪಾಯಿಗಳಷ್ಟು ಆರ್ಥಿಕ ಹೊರೆಯಿರತಕ್ಕಂಥದ್ದನ್ನು ಕಾಣಬಹುದು. ಹಾಗೆಯೇ 1996-1997ನೇ ಇಸವಿಯಲ್ಲಿ ಬಡ್ಡಿ ಹಣ 2680 ಕೋಟಿ ರೂಪಾಯಿಗಳಿರತಕ್ಕಂಥದ್ದನ್ನು ನೋಡಬಹುದು. ಮತ್ತೆ 1996-1997ನೇ ಇಸವಿಯಲ್ಲಿ ರೆವಿನ್ಯೂ ಎಕ್ಸ್‌ಪೆಂಡಿಚರ್ 10,201 ಕೋಟಿ ರೂಪಾಯಿ ಇತ್ತು. ಆದರೆ, 2001-2002ನೇ ಸಾಲಿನಲ್ಲಿ 18,605 ಕೋಟಿ ರೂಪಾಯಿ ಆಗಿದೆ. ಮತ್ತೆ 1996-1997ನೇ ಇಸವಿಯಲ್ಲಿ ನಾನ್ ಟ್ಯಾಕ್ಸ್ ರೆವಿನ್ಯೂ 1342 ಕೋಟಿ ರೂಪಾಯಿ ಇತ್ತು. ಆದರೆ, 2001-2002ನೇ ಸಾಲಿನಲ್ಲಿ ಇದು 1094 ಕೋಟಿ ರೂಪಾಯಿ ಆಗಿದೆ. ಮತ್ತು ಈ ವರ್ಷ 4,819 ಕೋಟಿ ರೂಪಾಯಿ ನಾನ್ ಟ್ಯಾಕ್ಸ್ ರೆವಿನ್ಯೂವನ್ನು ತೋರಿಸಿದ್ದೀರಿ. ಅಂದರೆ, ಇಷ್ಟೊಂದು ನಾನ್‌ಟ್ಯಾಕ್ಸ್ ರೆವಿನ್ಯೂವನ್ನು ಯಾವ ಆಧಾರದ ಮೇಲೆ ತೋರಿಸಿದ್ದೀರಿ ಎನ್ನತಕ್ಕಂಥದ್ದನ್ನು ಸ್ಪಷ್ಟಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಟ್ಯಾಕ್ಸ್ ಕಂಪ್ಲೈಯೆನ್ಸ್ ಅನ್ನು ಇಂಪ್ರೂವ್ ಮಾಡಿದ್ದೀರಾ ಅಥವಾ ಬೇರೆ ಬೇರೆ ಅಸೆಟ್ಸ್‌ನ್ನು ಮಾರಿ ಈ ನಾನ್‌ಟ್ಯಾಕ್ಸ್ ರೆವಿನ್ಯೂವನ್ನು ಜಾಸ್ತಿ ಮಾಡಿದ್ದೀರಾ ಅಥವಾ ಆನ್ ಲೈನ್ ಲಾಟರಿ ಮುಖಾಂತರ, ಈ ಅನೈತಿಕ ಚಟುವಟಿಕೆಯಿಂದ ಬರತಕ್ಕಂಥ ಹಣದಿಂದ ಸರ್ಕಾರ ಹೆಚ್ಚು ಹಣವನ್ನು ನಾನ್ ಟ್ಯಾಕ್ಸ್ ರೆವಿನ್ಯೂವಿನಲ್ಲಿ ತೋರಿಸಿದೆ ಎನ್ನತಕ್ಕಂಥದ್ದು ನನ್ನ ವಾದವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಉದಾಹರಣೆ ಹೇಳುವುದಾದರೆ, ಈಗ ಎನ್.ಜಿ.ಇ.ಎಫ್. ಮಾರಾಟ ಮಾಡಲಾಗಿದೆ. ಇದರ ಕ್ಯಾಪಿಟಲ್ ಅಸೆಟ್ಸ್‌ನ್ನು ಈ ನಾನ್ ಟ್ಯಾಕ್ಸ್ ರೆವಿನ್ಯೂನಲ್ಲಿ ತೋರಿಸಲಾಗಿದೆಯೇ? ಅಥವಾ ಆನ್‌ಲೈನ್ ಲಾಟರಿಯಿಂದ ಬರತಕ್ಕಂಥ ಹಣವನ್ನು ತೋರಿಸಿದ್ದೀರಾ ಎನ್ನತಕ್ಕಂಥದ್ದನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ 2001-02ನೇ ಸಾಲಿನಲ್ಲಿ ರಾಜ್ಯ ಸರ್ಕಾರದ್ದು 32 ಸಾವಿರ ಕೋಟಿ ರೂಪಾಯಿ ಸಾಲದ ಇದೆ ಎಂಬುದನ್ನು ಇಲ್ಲಿ ತೋರಿಸಿದ್ದೀರಿ. ಆದರೆ ಕಳೆದ ಎರಡು ವರ್ಷಗಳಿಂದ ಇನ್ನು ಎಷ್ಟು ಸಾಲವನ್ನು ತಾವು ಪಡೆದುಕೊಂಡಿದ್ದೀರಿ ಎಂಬ ಲೆಕ್ಕವನ್ನು ಇದರಲ್ಲಿ ತೋರಿಸುತ್ತಿಲ್ಲ. ಏಕೆಂದರೆ, ಅದು ಆನ್ ಬಜೆಟ್ ಬಾರೋಯಿಂಗ್, ಈಗ ಕೇವಲ 32 ಸಾವಿರ ಕೋಟಿ ರೂಪಾಯಿಗಳನ್ನು ತೋರಿಸಿದ್ದೀರಿ. ಆದರೆ, ಇವತ್ತಿನ ದಿವಸ ಹೊಸ ಹೊಸ ಬೋರ್ಡ್ಸ್ ಮತ್ತು ಕಾರ್ಪೋರೇಷನ್‌ಗಳನ್ನು ಪ್ರಾರಂಭ ಮಾಡಿದ್ದೀರಿ. ಆದರೆ, ಈಗಾಗಲೇ ಇರತಕ್ಕಂಥ ಕೆಬಿಜೆಎನ್‌ಎಲ್ ರೀತಿ ಮಾಡಿದ್ದೀರಿ. ಈಗ ಹೊಸದಾಗಿ ಪ್ರಾರಂಭ ಮಾಡಿರುವ ಕಾವೇರಿ ನೀರಾವರಿ

ನಿಗಮ ಮತ್ತು ಕರ್ನಾಟಕ ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಮತ್ತೆ ರೋಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಇರಬಹುದು. ಈ ರೀತಿಯಾಗಿ ಇನ್ನು ಬೇರೆ ಬೇರೆ ಸಂಸ್ಥೆಗಳನ್ನು ಪ್ರಾರಂಭ ಮಾಡಿ ಇದರಿಂದ ಸುಮಾರು 10 ರಿಂದ 12 ಸಾವಿರ ಕೋಟಿ ರೂಪಾಯಿ ಜಾಸ್ತಿ ಮಾಡಿರುವುದರಿಂದ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸುಮಾರು 48 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಇದೇ ಎನ್ನತಕ್ಕಂಥದ್ದನ್ನು ನಾನು ತಿಳಿದುಕೊಂಡಿದ್ದೇನೆ. ಇದನ್ನು ತಾವು ಯಾವ ರೀತಿಯಾಗಿ ಭರಿಸುತ್ತಿದ್ದೀರಿ? ಮತ್ತೆ ಇದಕ್ಕೆ ಎಷ್ಟು ಬಡ್ಡಿಯನ್ನು ಕೊಡುತ್ತಿದ್ದೀರಿ ಎಂಬುದನ್ನು ಮತ್ತು ಇದರಿಂದ ರಾಜ್ಯದ ಬೊಕ್ಕಸಕ್ಕೆ ಯಾವ ರೀತಿಯಾಗಿ ಕೊರತೆಯಾಗಿದೆ ಎಂಬುದನ್ನು ತಾವು ಸ್ಪಷ್ಟಪಡಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲದಿದ್ದರೆ, ಇವತ್ತಿನ ದಿವಸ ನೀವು ಸಾಲವನ್ನು ಮಾಡಿ ಈ ರಾಜ್ಯಕ್ಕೆ ಬಿಟ್ಟು ಹೋಗುತ್ತೀರಿ. ಆದರೆ, ಮುಂದೆ ಬರತಕ್ಕಂಥ ಸರ್ಕಾರಕ್ಕೆ ತೊಂದರೆಯಾಗುತ್ತದೆ. ಅಂದರೆ, ನೀವು ಸಾಲ ಮಾಡತಕ್ಕಂಥದ್ದನ್ನು ವಿಧಾನ ಸಭೆಯ ಮುಂದೆ ಮಂಡಿಸದೇ ಇರುವುದು ಮತ್ತು ಲಿಜಿಸ್ಲೇಚರ್‌ಗೆ ತೋರಿಸುವುದಿಲ್ಲ. ಆದರೆ ಮತ್ತೆ ಕಟ್ಟುವಾಗ ಎಷ್ಟು ಲಯಾಬಿಲಿಟಿ ಇದೆ ಎಂಬುದನ್ನು ಮತ್ತು ಇದಕ್ಕೆ ಎಷ್ಟು ಬಡ್ಡಿ ಹಣವನ್ನು ಕಟ್ಟಲಾಗುತ್ತದೆ ಎನ್ನತಕ್ಕಂಥದ್ದನ್ನು ಬಜೆಟ್ ಪುಸ್ತಕದಲ್ಲಿ ತೋರಿಸಬೇಕಾಗುತ್ತದೆ. ಈ ರೀತಿ ಮಾಡಿದರೆ ಬಹಳ ದೊಡ್ಡ ಹೊಡೆತ ಬೀಳುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ಆ ಎಲ್ಲಾ ಅಂಶಗಳನ್ನು ತೋರಿಸಬೇಕಾಗುತ್ತದೆ ಎಂದು ಕೇಳಿಕೊಳ್ಳುತ್ತೇನೆ. ಮತ್ತೆ ಇವತ್ತಿನ ದಿವಸ ಸಾಮಾಜಿಕ ವಲಯದಲ್ಲಿಯೂ ಕೂಡ ಇಳಿತವನ್ನು ನಾವು ಕಾಣುತ್ತಿದ್ದೇವೆ. ಅಂದರೆ ಆರೋಗ್ಯ ಇರಬಹುದು, ಶಿಕ್ಷಣ ಇರಬಹುದು, ಕುಡಿಯುವ ನೀರು ಇರಬಹುದು, ನೈರ್ಮಲ್ಯ ಇರಬಹುದು, ಈ ಎಲ್ಲಾ ಸಾಮಾಜಿಕ ವಲಯದಲ್ಲಿ ಇವತ್ತು ಕಡಿಮೆ ವೆಚ್ಚವನ್ನು ನಾವು ತೋರಿಸುತ್ತಿದ್ದೇವೆ. ಆದರೆ ಈ ಜನರಲ್ ಎಕ್ಸ್‌ಪೆಂಡಿಚರ್‌ನಲ್ಲಿ ಸಾಲವನ್ನು ತಂದು ಖರ್ಚು ಮಾಡತಕ್ಕಂಥದ್ದು ಇವತ್ತು ಹೆಚ್ಚಾಗುತ್ತಿದೆ. ಆದ್ದರಿಂದ ಸಾಮಾಜಿಕ ವಲಯಗಳಲ್ಲಿ ನಾವು ಯಾವುದೆ ಒಂದು ಜನರಲ್ ಸರ್ವಿಸೆಸ್‌ನಲ್ಲಿ ನಾವು ಹೆಚ್ಚಿಗೆ ತೋರಿಸುತ್ತಿದ್ದೇವೆ ಆದರೆ ಸೋಷಿಯಲ್ ಸರ್ವಿಸೆಸ್‌ನಲ್ಲಿ ಶೇಕಡ 7ರಷ್ಟು ಕಡಿಮೆ ನಾವು ತೋರಿಸುತ್ತಿದ್ದೇವೆ. ಅಂದರೆ ಹೋದವರ್ಷ 200 ಕೋಟಿ ರೂಪಾಯಿಗಳಷ್ಟು ಕಡಿಮೆ ಅದು ಈ ವರ್ಷಕ್ಕೆ 300 ಕೋಟಿ ರೂಪಾಯಿಗಳಷ್ಟು ಕಡಿಮೆಯಾಗುತ್ತದೆ. ಅಂದರೆ ಇದರಿಂದ ಯಾವ ಒಂದು ದುರ್ಬಲ ವರ್ಗದವರಿಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಚೆಪಡುತ್ತೇನೆ. ಇವತ್ತು ಈ ಸರ್ಕಾರದ ಸಾಧನೆ ಏನು ಎಂದರೆ, ಆರ್ಥಿಕ ಬೆಳವಣಿಗೆಯನ್ನು ನೋಡಿದಾಗ ಸಾಮಾಜಿಕ ವಲಯದಲ್ಲಾಗಲಿ, ಆರ್ಥಿಕ ವಲಯದಲ್ಲಾಗಲಿ ಯಾವುದೇ ಒಂದು ಬೆಳವಣಿಗೆಯನ್ನು ನಾವು ಕಾಣುತ್ತಿಲ್ಲ. ಆನ್‌ಲೈನ್ ಲಾಟರಿಯನ್ನು ರದ್ದು ಮಾಡಬೇಕೆಂದು ಹೇಳಿ ನಾವು, ಪ್ರತಿಯೊಬ್ಬರೂ ಸಹಿತಿ ಹೋರಾಟವನ್ನು ಮಾಡಿದೆವು, ವಿರೋಧ ಪಕ್ಷದವರು ಅಲ್ಲದೆ, ನಮ್ಮ ಆಡಳಿತ ಪಕ್ಷದ ಕಾಂಗ್ರೆಸ್‌ನ ಮಂತ್ರಿಗಳು ಇರಬಹುದು, ಮುಖಂಡರುಗಳು ಇರಬಹುದು, ಮತ್ತು ಸಂಘಟನೆಗಳು ಇರಬಹುದು, ವಿರೋಧವನ್ನು ಮಾಡಿದರು. ಆದರೆ ಅದಕ್ಕೆ ಒಂದು ಕಾಸು ಬೆಲೆಯನ್ನೂ ಕೊಡದೆ ಅದನ್ನು ನೀವು ಮುಂದುವರೆಸಿಕೊಂಡು ಹೋಗುತ್ತಿದ್ದೀರಿ. ಇದರ ಉದ್ದೇಶ ಈ ಸರ್ಕಾರ ಹಣವನ್ನು ಕೇವಲ ಅನೈತಿಕ ಚಟುವಟಿಕೆಗಳಿಂದ ನೀವು ಭರಿಸತಕ್ಕಂಥದ್ದಕ್ಕೆ ಇದು ಕಾರಣವಾಗಿದೆ ಎಂದು ನಾನು ಈ

ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತು ಈ ಸರ್ಕಾರ ಕೆಲವೊಂದು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಅದಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎನ್ನತಕ್ಕಂಥದ್ದು ನಾವು ಹೇಳಬೇಕಾಗುತ್ತದೆ. ಹೋದವರ್ಷ ಹೇಳಿದಿರಿ, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ 5 ಸಾವಿರ ಗಂಗಾ ಕಲ್ಯಾಣ ಬೋರ್‌ವೆಲ್‌ಗಳನ್ನು ತೆಗೆಸುತ್ತೇವೆಂದು ಹೇಳಿದ್ದೀರಿ. ಆದರೆ ಅದಕ್ಕೆ ಸರಿಯಾಗಿ ಹಣವನ್ನು ಒದಗಿಸಲಿಲ್ಲ. ಅದಕ್ಕೆ ಸರಿಯಾಗಿ ಹಣವನ್ನು ಒದಗಿಸದೆ ಇದ್ದಾಗಲೂ ಕೂಡ ಇವತ್ತು 10 ಸಾವಿರ ಬೋರ್‌ವೆಲ್‌ಗಳನ್ನು ತೆಗೆಸುತ್ತೇವೆಂದು ಹೇಳಿದ್ದೀರಿ. ಇದು ನಿಜವಾಗಲೂ ನಗೆಪಾಟಲು ಆಗತಕ್ಕಂಥ ಒಂದು ಕಾರ್ಯಕ್ರಮ. ಹೋದ ವರ್ಷ ನೀವು 5 ಸಾವಿರ ಬೋರ್‌ವೆಲ್‌ಗಳಿಗೆ ಹಣವನ್ನು ಕೊಟ್ಟಿಲ್ಲ, ಈ ವರ್ಷ 10 ಸಾವಿರ ಬೋರ್‌ವೆಲ್‌ಗಳನ್ನು ತೆಗೆಸುತ್ತೇವೆಂದು ನೀವು ಜನರಿಗೆ ಮೋಸ ಮಾಡುತ್ತಿದ್ದೀರಿ. ಹಾಸ್ಟೆಲ್ ಬಿಲ್ಡಿಂಗ್ ಕಟ್ಟಿಸುತ್ತೇವೆಂದು ಸುಮಾರು ಹುಡ್ಕೋದಿಂದ ಲೋನ್ ತೆಗೆದುಕೊಂಡು ಸುಮಾರು ಎರಡು ವರ್ಷವಾಗಿದೆ. ಆ ಎರಡು ವರ್ಷದಿಂದ ಇಲ್ಲಿಯವರೆಗೆ ಯಾವ ಒಂದು ಕಾರ್ಯಕ್ರಮವನ್ನು ಹಾಕಿಲ್ಲ, ಒಂದೂ ಹಾಸ್ಟೆಲ್‌ನ್ನು ಕಟ್ಟಿಸಿರುವುದಿಲ್ಲ. ಎಸ್‌ಸಿಪಿ ಮತ್ತು ಟಿಎಸ್‌ಪಿ ನಲ್ಲಿ ಸುಮಾರು ಒಂದು ವರ್ಷಕ್ಕೆ 400 ರಿಂದ 500 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬರುತ್ತದೆ. ಇದರಲ್ಲಿ ರಾಜ್ಯ ಸರ್ಕಾರದ ಪಾಲು ಇರುತ್ತದೆ. ಆದರೆ ಈ ಹಣ ಪ್ರತಿ ವರ್ಷ, ಎಷ್ಟು ಖರ್ಚು ಮಾಡಿದ್ದೀರಿ, ನಿಜವಾಗಲೂ ಆ ಕಾರ್ಯಕ್ರಮಗಳಿಗೆ ಎಷ್ಟು ಬಿಡುಗಡೆಯಾಗಿದೆ ಎನ್ನುವುದರ ಬಗ್ಗೆ ಲೆಕ್ಕವಿಲ್ಲ. ಬಿಸಿಎಂದ ಮತ್ತು ಮೈನಾರಿಟಿ ಸಂಸ್ಥೆಗಳಿಗೆ ಹಣ ಇರತಕ್ಕಂಥದ್ದು ಇರಬಹುದು, ಅ ಇಲಾಖೆವಾರು ಕಾರ್ಯಕ್ರಮಗಳವಾರು ಹಣ ಬಿಡುಗಡೆಯಾಗಬೇಕು, ಆದರೆ ಪೂಲ್‌ಫಂಡ್ಸ್ ಎಂದು ಮಾಡಿ ನೇರವಾಗಿ ಹಣವನ್ನು ಇಲಾಖೆಗಳಿಗೆ ಬಿಡುಗಡೆ ಮಾಡದೆ ಒಂದೇ ಕಡೆ ಇಟ್ಟುಕೊಂಡು ಬೇಕಾದ ಯೋಜನೆಗಳಿಗೆ ಹಣವನ್ನು ಬಿಡುಗಡೆ ಮಾಡಿ ಇವತ್ತು ಆ ಹಣ ಎಷ್ಟು ಖರ್ಚಾಗಿದೆ ಎನ್ನತಕ್ಕಂಥದ್ದು ಯಾವುದೂ ಸಹ ಲೆಕ್ಕವನ್ನು ಇಟ್ಟಿಲ್ಲ. ಅಪೆಂಡಿಕ್ಸ್–ಸಿ ನಲ್ಲಿ ಇಂಥಿಂಥ ಇಲಾಖೆಗಳಿಗೆ ಇಂತಿಷ್ಟು ಹಣವೆಂದು ತೋರಿಸುತ್ತೀರಿ, ಆದರೆ ನಿಜವಾಗಿ ಹಣವನ್ನು ಇಲಾಖೆಗಳಿಗೆ ಬಿಡುಗಡೆ ಮಾಡುವುದಿಲ್ಲ. ಪೂಲ್‌ಫಂಡ್ಸ್ ಎಂದು ಇಟ್ಟುಕೊಂಡು ಅದರಲ್ಲಿ ಎಷ್ಟು ಉಳಿದಿದೆ ಎಷ್ಟು ಖರ್ಚಾಗಿದೆ ಎನ್ನುವ ಲೆಕ್ಕವನ್ನು ತೋರಿಸುತ್ತಿಲ್ಲ. ಅವರು ಮಾಡಿರತಕ್ಕಂಥ ಸಾಧನೆ ಏನೆಂದರೆ, ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದು ಎಸ್‌ಸಿ:ಎಸ್‌ಟಿ ಎಂದು ಸಾವಿರಾರು ಅಪಾಯಿಂಟ್‌ಮೆಂಟ್‌ಗಳಿಗೆ ಇವತ್ತು ಸಕ್ರಮವನ್ನು ಮಾಡಿದ್ದೀರಿ. ಅದಕ್ಕೆ ಕ್ಯಾಬಿನೆಟ್‌ನಲ್ಲಿ ಏನು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ ಎನ್ನುವುದರ ಬಗ್ಗೆ ನನಗೆ ಗೊತ್ತಿಲ್ಲ, ಮಾನ್ಯ ಮಂತ್ರಿಗಳು ಇಲ್ಲಿ ಇದ್ದರೆ, ಎಸ್‌ಸಿ:ಎಸ್‌ಟಿಗಳಿಗೆ ಇರುವ ಬ್ಯಾಕ್‌ಲಾಗ್ ಅಪಾಯಿಂಟ್‌ಮೆಂಟ್‌ಗಳಲಿ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದಿದ್ದಾರೆ ಅಂತಹವರ ನೇಮಕಾತಿಯಾಗಿದೆ, ಅವರು ಕೆಲಸದಲ್ಲಿದ್ದಾರೆ. ಅಂತಹವರ ಬಗ್ಗೆ ವಿಚಾರಣೆಯ ವರದಿ ಬಂದಿದ್ದಾಗ್ಯೂ ಅದಕ್ಕೆ ಕ್ರಮವನ್ನು ಕೈಗೊಳ್ಳುವುದರ ಬದಲಾಗಿ ನೀವು ಅವರನ್ನು ಸಕ್ರಮ ಮಾಡಿದ್ದೀರಿ. ಎಸ್‌ಟಿ ಯವರನ್ನು ಬ್ಯಾಕ್‌ಲಾಗ್ ಅಪಾಯಿಂಟ್‌ಮೆಂಟ್‌ನಲ್ಲಿ ನೀವು ತುಂಬಿರುವುದಿಲ್ಲ. ನಿಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. 460 ಪಾರ್ಟ್‌ಟೈಮ್ ಲೆಕ್ಚರರ್ ಪೋಸ್ಟ್‌ಗಳನ್ನು ತುಂಬುವುದಕ್ಕೆ ನಮ್ಮ ಸರ್ಕಾರ ಇದ್ದಾಗ ನಾವು ಕಾನೂನನ್ನು ಮಾಡಿದೆವು ಅದು ಸುಪ್ರೀಂಕೋರ್ಟಿನವರೆಗೆ ಹೋಗಿ

ಆ ಕಾನೂನಿನ ನಿಯಮಾವಳಿ ಸರಿ ಇದೆಯೆಂದು ಹೇಳಿದ ಮೇಲೆ ಅವುಗಳನ್ನು ನೀವು ಜನರಲ್‌ಗೆ ತುಂಬು ರೆಗ್ಯುಲರೈಸ್ ಮಾಡಿದ್ದಾರೆ. ಅಧಿಕಾರಿಗಳು ಅದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಇದು ಇವರ ಸಾಧನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಹಳ್ಳಿ): ಮಾನ್ಯ ಛೇರ್ಮನ್‌ರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಸೋಮಶೇಖರ್‌ರವರು ಪ್ರಸ್ತಾಪ ಮಾಡಿದ ಹಾಗೆ, ಇವತ್ತು ಸಂವಿಧಾನಾತ್ಮಕವಾಗಿ ಇರತಕ್ಕಂಥ ಎಸ್‌ಸಿ:ಎಸ್‌ಟಿ ಯವರಿಗೆ ಇರತಕ್ಕಂಥ ಅವಕಾಶಗಳು ಏನಿವೆ ಅವುಗಳಿಗೆ ಸಂಬಂಧಪಟ್ಟಂತೆ ಕಾನೂನಿನಲ್ಲಿ ಅವುಗಳಿಗೆ ಅವಕಾಶವಿದೆ. ಆ ವಿಷಯಕ್ಕೆ ಅನುಗುಣವಾಗಿ ಇವತ್ತು ಸರ್ಕಾರ ಇವತ್ತು ಒಂದು ಹೊಸ ಆದೇಶವನ್ನು ಕೆಲವು ತಿಂಗಳುಗಳ ಹಿಂದೆ, ಗೌರ್ನಮೆಂಟ್ ಆರ್ಡರ್ ಡೇಟೆಡ್ 11ನೇ ಮಾರ್ಚ್ 2002, ಹೊರಡಿಸಿರುವುದನ್ನು ನಾವು ಕಾಣುತ್ತಿದ್ದೇವೆ. ಯಾರು ಈ ರಾಜ್ಯದಲ್ಲಿ ಸುಳ್ಳು ಕಾಸ್ಟ್ ಸರ್ಟಿಫಿಕೇಟ್‌ಗಳನ್ನು ಪಡೆದು ಆ ಹುದ್ದೆಯಲ್ಲಿ ಇವತ್ತು ಅವರು ಮುಂದುವರೆಯುತ್ತಿದ್ದಾರೆ ಅವರ ವಿಷಯದಲ್ಲಿ ಸರ್ಕಾರ ಕಾನೂನಿನ ಕ್ರಮವನ್ನು ತೆಗೆದುಕೊಂಡು ಅವರನ್ನು ವಜಾ ಮಾಡುವುದನ್ನು ಬಿಟ್ಟು ಅಕ್ರಮವಾಗಿ ಪಡೆದಿರುವ ಉದ್ಯೋಗವನ್ನು ಸಕ್ರಮ ಮಾಡಿರುವಂಥ ಆದೇಶ ಹೊರಡಿಸಿರತಕ್ಕಂಥದ್ದು ನಿಜವಾಗಿಯೂ ಕೂಡ ಖಂಡನಾರ್ಹ. ಇದರಲ್ಲಿ ಅವರು ಯಾವ ರೀತಿಯಾಗಿ ಮಾಡಿದ್ದಾರೆಂದರೆ.

ಛೇರ್ಮನ್: ಮಾನ್ಯ ಕೃಷ್ಣಮೂರ್ತಿಯವರೆ, ಮಾತನಾಡುವವರ ಲಿಸ್ಟ್‌ನಲ್ಲಿ ತಮ್ಮ ಹೆಸರೂ ಕೂಡ ಇದೆ, ತಾವು ಮಾತನಾಡುವವರು ಇದ್ದೀರಿ.

ಶ್ರೀ ಎ.ಆರ್. ಕೃಷ್ಣಮೂರ್ತಿ: ಮಾನ್ಯ ಸದಸ್ಯರ ವಿಷಯಕ್ಕೆ ಪೂರಕವಾಗಿ 5 ನಿಮಿಷದಲ್ಲಿ ಮುಗಿಸುತ್ತೇನೆ.

ಛೇರ್ಮನ್: ಅದನ್ನು ತಮ್ಮ ಭಾಷಣದಲ್ಲಿ ಸೇರಿಸಿಕೊಂಡು ಬಿಡಿ, ಇಲ್ಲದಿದ್ದರೆ ಸಮಯ ಹಾಳಾಗಿ ಬಿಡುತ್ತದೆ.

ಶ್ರೀ ಎ.ಆರ್. ಕೃಷಮೂರ್ತಿ: ಇಲ್ಲಾ ಸರ್, ಫೈವ್ ಮಿನಿಟ್ಸ್

ಛೇರ್ಮನ್: ಅವು ನಿಮಗೆ ಫೈವ್ ಮಿನಿಟ್ಸ್ ಕೊಡಬೇಕು.

ಶ್ರೀ ಎ.ಆರ್. ಕೃಷ್ಣಮೂರ್ತಿ: ಮಾನ್ಯ ಸದಸ್ಯರು ಯಿಲ್ಡ್ ಆಗಿರುವುದರಿಂದ ದಯಮಾಡಿ ತಾವು ಅವಕಾಶವನ್ನು ಕೊಡಿ. Constitution of India, Article 341 and 342, Scheduled Tribes Order 1950, Entries in Constitution, Scheduled Tribe Order - notification issued under Article 342/1. It says:

> "Specified scheduled tribes can be amended only by law to be made by Parliament. Scheduled Tribes order must be read as it is. It is not open to State Governments or Courts or Tribunals or any Authority to modify, amend or alter the list. It is not permissible to hold any enquiry on that in any evidence to decide or declare

that any tribe or tribal community or part or group within any tribe or tribal communities is included in the general name. Even though it is not specifically mentioned in consonance with the constitution."

ಎಂದು ಹೇಳಿ ಇವತ್ತಿನ ದಿವಸ ಆ ಸಂವಿಧಾನಾತ್ಮವಾಗಿ ಇರತಕ್ಕಂಥ ವಿಷಯವಾಗಿದ್ದರೂ ಕೂಡ ಈ ಒಂದು ಆದೇಶವನ್ನು ಯಾವ ರೀತಿಯಾಗಿ ಸರ್ಕಾರದಲ್ಲಿ ಆದೇಶವನ್ನು ಹೊರಡಿಸಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

"The benefits of reservation in admission to educational institution and educational concessions extended to Parivara, Talawara, Maleyeru, Kuruba communities in Government order read at para 1 and 2 above, Bestha and Koli communities are accordingly ceases. All the persons of these communities who have obtained scheduled tribe caste certificates shall surrender them immediately to the issuing authority for cancellation. They shall not be liable for any penal action provided they surrender their certificates. The issuing authority shall cancel such certificates."

ಎನ್ನುವ ರೀತಿಯಲ್ಲಿ ಆದೇಶ ಏನು ಹೊರಬಿದ್ದಿದೆ, ಇದರಲ್ಲಿ ಕಾನೂನು ಬಾಹೀರವಾಗಿ ಆ ಜಾತಿಗೆ ಸಂಬಂಧಪಡದ ವ್ಯಕ್ತಿಗಳು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದು ಅದು ವಿದ್ಯಾಭ್ಯಾಸಕ್ಕಾಗಲಿ, ಅಥವಾ ಉದ್ಯೋಗಕ್ಕೆ ಬಳಸಿರತಕ್ಕಂಥದ್ದು ಎಷ್ಟರಮಟ್ಟಿಗೆ ಸಂವಿಧಾನಾತ್ಮಕವಾಗಿ ಇಲ್ಲಿ ಸರಿ ಎನ್ನತಕ್ಕಂಥ ಪ್ರಶ್ನೆ ಉದ್ಭವವಾಗುತ್ತದೆ.

1.00 ಪಿ.ಎಂ.

ಒಂದು ಕಡೆ ಸರ್ಕಾರ ನಾವು ದೀನದಲಿತರ ಹಾಗೂ ದುರ್ಬಲರ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಪರವಾಗಿದೆ ಎಂದು ತಿಳಿಸಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಛೇರ್ಮನ್‌ರವರೆ, ಯಾರೂ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರು ಇದ್ದಾರೋ ಅಂತಹವರು ಪರಿಶಿಷ್ಟ ವರ್ಗಕ್ಕೆ ಸೇರಿದ ಬಗ್ಗೆ ಸರ್ಟಿಫಿಕೇಟ್‌ನ್ನು ತೆಗೆದುಕೊಳ್ಳುವುದಕ್ಕೆ ಪ್ರೋತ್ಸಾಹವನ್ನು ನೀಡಿದಂತಹ ಅನೇಕ ನಾಯಕರುಗಳು ನಿಮ್ಮಲ್ಲಿ ಇದ್ದಾರೆ. ಆ ಕಾರಣಕ್ಕಾಗಿ ಈ ಒಂದು ವ್ಯವಸ್ಥೆಯು ನಿರ್ಮಾಣವಾಗಿತ್ತು. ಅದನ್ನು ನಾವು ಕಿತ್ತು ಹಾಕಬೇಕೆಂಬ ಕಾರಣಕ್ಕಾಗಿಯೇ ಅದನ್ನು ಸರಂಡರ್ ಮಾಡಬೇಕು, ಅವರುಗಳು ಯಾವ ಯಾವ ಜಾತಿಗೆ ಸೇರಿದ್ದಾರೋ ಆ ಜಾತಿಯ ಸಹಾಯಗಳನ್ನು ಪಡೆಯಬೇಕೇ ವಿನಃ ನಾವು ಒನ್‌ಟೈಮ್ ಆಪರೇಷನ್ ಎಂದು ಮಾಡಿದ್ದೇವೆ.

SRI B. SOMASHEKAR: They have utilised the backlog vacancies. Backlog vacancies have been created ಈಗ ಅವರಿಗೆ ಏನು ಮಾಡಿದ್ದೀರಿ?

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮ ಕಾಲದಲ್ಲಿ ಕಾಡು ಕುರುಬ ಎಂದು ಸರ್ಟಿಫಿಕೇಟನ್ನು ತೆಗೆದುಕೊಂಡಿರಿ, ಅದು ಕೊಡಿರಿ ಎಂದು ಮಾಡಿದ್ದೀರಿ, ಹೊಡೆತಕ್ಕೆ ನೀವೆಲ್ಲಾ ಕಾರಣ.

SRI B. SOMASHEKAR: They have eaten away certain scheduled caste vacancies. The regularisation process of your Government has created a vacum in the scheduled caste. ಈಗ ಷೆಡ್ಯೂಲ್ ಕಾಸ್ಟ್ ವೇಕೆನ್ಸಿಯನ್ನು ಅವರು ತಿಂದುಕೊಂಡಮೇಲೆ ಎಷ್ಟು ಷೆಡ್ಯೂಲ್ ಕಾಸ್ಟ್ ವೆಕೆನ್ಸಿಗಳು ಲಾಸ್ ಆಯಿತಲ್ಲಾ, ಅದರ ಬಗ್ಗೆ ಏನು ಮಾಡಿದ್ದೀರಿ? ಈಗ ಬ್ಯಾಕ್‌ಲಾಗ್ ಹುದ್ದೆ ಸೃಷ್ಟಿಯಾಯಿತಲ್ಲಾ? ಅದಕ್ಕೆ ಏನು ಮಾಡಿದ್ದಿರಿ?

ಶ್ರೀ ಕಾಗೋಡು ತಿಮ್ಮಪ್ಪ: ಬ್ಯಾಕ್‌ಲಾಗ್ ಹುದ್ದೆ ಎಂದು ಹೇಳುತ್ತಿದ್ದೀರಲ್ಲಾ ನೀವು? ನೀವು ಎಷ್ಟು ಹುದ್ದೆಗಳನ್ನು ತುಂಬಿದ್ದೀರಿ? ನಾವು 17 ಸಾವಿರ ಬ್ಯಾಕ್‌ಲಾಗು ಹುದ್ದೆಗಳನ್ನು ಐಡೆಂಟಿಫೈ ಮಾಡಿ 14 ಸಾವಿರ ಹುದ್ದೆಗಳಿಗೆ ನೇಮಕ ಮಾಡುವಂತಹ ಪ್ರಕ್ರಿಯೆ ಆಗಿದೆ, ಅದು ಅಂತಿಮ ಹಂತದಲ್ಲಿದೆ. ಇದ ಮೊದಲನೆಯ ಬಾರಿಗೆ ಇಂತಹ ಕ್ರಮ ನಡೆದಿದೆ.

ಶ್ರೀ ಎ.ಆರ್. ಕೃಷ್ಣಮೂರ್ತಿ: ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಬೋಗಸ್ ಕ್ಯಾಸ್ಟ್ ಸರ್ಟಿಫಿಕೇಟ್‌ನ್ನು ಪಡಿದಿಗತಕ್ಕಂತಹ ವ್ಯಕ್ತಿಗಳನ್ನು ರಕ್ಷಣೆ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅವರ ಮೇಲೆ ಕಾನೂನುಬದ್ಧವಾಗಿ ಶಿಸ್ತಿನ ಕ್ರಮಪನ್ನು ತೆಗೆದುಕೊಳ್ಳಬೇಕಾಗಿತ್ತು. ಅದರ ಬದಲು ಈ ರೀತಿ ಅಕ್ರಮವಾಗಿ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು. ಅದರ ಬದಲು ಅಕ್ರಮವಾಗಿ ಪಡೆದಿರತಕ್ಕಂತಹ ಉದ್ಯೋಗಗಳನ್ನು ಸಕ್ರಮ ಮಾಡಿರುವುದು ಎಷ್ಟರಮಟ್ಟಿಗೆ ಸರಿ ಎನ್ನುವಂತ ವಾದ ಒಂದು ಕಡೆಯಾದರೆ, ಇವರು ಆದೇಶದಲ್ಲಿ ಅಂತಹವರ ಸಂಖ್ಯೆ:ಎಷ್ಟು? ಇಲಾಖಾವಾರು, ಕೇಡರ್‌ವಾರು, ಮಾಹಿತಿಗಳು ಈ ಪ್ರದೇಶದಲ್ಲಿಲ್ಲ. ಇಲ್ಲಿ ಅವರು ಸಂಖ್ಯೆಗಳೆಷ್ಟು? ಅಂತಹ ಮಾಹಿತಿಗಳನ್ನು ಈ ಆದೇಶದಲಿ ಹೊರಡಿಸಿಲ್ಲ. 'ಇದೇ ರೀತಿಯಾದ ಮತ್ತೊಂದು ಆದೇಶದಲ್ಲಿ ಏನು ಹೇಳುತ್ತಾರೆಂದರೆ, "separate order shall be issued regarding the manner in which the vacancies lost to STs on account of government order read at para 1 and 2 above have to be restored." ರೆಸ್ಟೋರ್ಡ್ ಎಂದು ಹೇಳುತ್ತಾರೆ ಅಷ್ಟೇ ಹೊರತು, ಅವರ ಸಂಖ್ಯೆ ಎಷ್ಟು? ಅಂತಹ ಉದ್ಯೋಗಗಳನ್ನು ಪರಿಶಿಷ್ಟ ವರ್ಗದವರಿಗೆ ಸಂಬಂಧಪಟ್ಟವರಿಗೆ ನಾವು ತುಂಬುತ್ತೇವೆ ಎನ್ನುವಂತಹ ಆದೇಶವನ್ನು ಇಲ್ಲಿಯೇ ಹೊರಡಿಸಬಹುದಾಗಿತ್ತಲ್ಲಾ? ಅವರಿಗೆ ರಕ್ಷಣೆಯನ್ನು ಕೊಡುವುದಾದರೆ ಅದನ್ಯಾಕೆ ಅವರು ಆದೇಶ ಮಾಡಲಿಲ್ಲ? ಇದರಿಂದಾಗಿ ಏನು ತಿಳಿದುಬರುತ್ತದೆಂದರೆ ಇವರು ಏನು ಜನ ಮುಂದೆ ನಾವು ಪರಿಶಿಷ್ಟ ಜಾತಿಯವರ ಪರವಾಗಿದ್ದೇವೆಂಬ ವಾದವನ್ನು ಮಂಡಿಸಿಕೊಂಡು ಮತವನ್ನು ಗಳಿಸುತ್ತಾರೋ ಈ ಆದೇಶದಿಂದ ಅವರು ಜನರಿಗೆ ಇವತ್ತಿನ ದಿವಸ, ಈ ಆದೇಶ ಹೊರಡಿಸಿರುವುದು ಪೂರಕವಾಗುತ್ತದೆ ಈ ವಿಷಯವನನು ನಾನು ಖಂಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಮ್ಮ ಈ ಸರ್ಕಾರದ ತೀರ್ಮಾನವನ್ನು ಇವರು ಸ್ವಾಗತ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಅವರ ಹಿಂದಿನ ಸರ್ಕಾರದಲ್ಲಿ ಮಾಡಿರುವಂತಹ ಪಾಪದ ಕರ್ಮವನ್ನು ತೊಳೆಯುತಕ್ಕಂತಹ ಕೆಲಸದಿಂದಾಗಿ ಈ ಆಜ್ಞೆಯಿಂದ ಮಾಡಿದೆ.

SRI A.R. KRISHNAMURTY: This process is not new. ಸ್ವತಂತ್ರ ಬಂದ ದಿನಸದಿಂದಲೂ ಕೂಡ ಸಮಸ್ಯೆಗಳು ಇವೆ. ಈ ರೀತಿಯಾಗಿ ಅಕ್ರಮ ಮಾಡಿರುವುದನ್ನು ಸಕ್ರಮ ಮಾಡುವುದು ಎಷ್ಟರ ಮಟ್ಟಿಗೆ ಸಮಂಜಸ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಶ್ನೆ ಮಾಡುತ್ತಿದ್ದೇನೆ. ಬರೀ ನಮ್ಮ ಮೇಲೆ ಗೂಬೆ ಕೂರಿಸುವಂತಹದ್ದು ಆಗಬಾರದು.

ಶ್ರೀ ಬಿ. ಸೋಮಶೇಖರ್: ಇಲ್ಲಿ ಸಕ್ರಮ ಮಾಡಿರತಕ್ಕಂಥದ್ದು unconstitutional Regularisation of unauthorised appointments obtaining false certificates is unconstitutional. You have committed an unconstitutional act depriving the legitimate rights for scheduled castes. ಈ ಸರ್ಕಾರ ಮಾಡಿರತಕ್ಕದ್ದು ಎಂದು ತಾವು ಕೇಳಬಹುದು. ಒಂದೇ ಅಲ್ಲ, ಎಲ್ಲಾ ಇಲಾಖೆಗಳಲ್ಲಿಯೂ ಎಷ್ಟು ಸಕ್ರಮ ಮಾಡಿದ್ದೀರೆಂಬ ಬಗ್ಗೆ ಲೆಕ್ಕವನ್ನು ಕೊಟ್ಟಿರುವುದಿಲ್ಲ. ಎಷ್ಟು ಸಕ್ರಮ ಮಾಡಿರುವ ಬಗ್ಗೆ ಬ್ಯಾಕ್‌ಲಾಗ್ ವೇಕೆನ್ಸಿಯನ್ನು : ಎಷ್ಟು ಇಲಾಖೆಗಳಲ್ಲಿ ತುಂಬುತ್ತಿದ್ದೀರಿ? ಅದರ ಬಗ್ಗೆ ಲೆಕ್ಕವನ್ನು ಹೇಳಲಿಲ್ಲ. ಅದಕ್ಕೆ ಪರ್ಯಾಯವಾದಂತಹ ಒಂದು ನಿಯಮಾವಳಿಯನ್ನು ರಚನೆ ಮಾಡಿಲ್ಲ. ಅಂದರೆ ಈ ಸರ್ಕಾರ ಮಾಡಿರುವಂತಹದ್ದು 5 ವರ್ಷಗಳಲ್ಲಿ ನಿಜವಾದಂತಹ ದಲಿತರಿಗೆ ಆಗಿರತಕ್ಕಂತಹ ಅನ್ಯಾಯವನ್ನು ನಾನು ಇಲ್ಲಿ ಎತ್ತಿ ತೋರಿಸುತ್ತಿದ್ದೇನೆ. 4 ವರ್ಷಗಳಲ್ಲಿ ಷೆಡ್ಯೂಲ್‌ಕಾಸ್ಟ್ ಹಾಸ್ಟಲ್‌ಗಳನ್ನು ನಡೆಸುತ್ತಿದ್ದೀರಿ, ಅದರಲ್ಲಿ ಇಬಿಎಲ್ ಚಾರ್ಜ್‌ಸನ್ನು ಎಷ್ಟು ಕಟ್ಟಿದ್ದೀರಿ? 3 ವರ್ಷದಿಂದ ಎಸ್ಟಾಬ್ಲಿಷ್‌ಮೆಂಟ್ ಚಾರ್ಜ್‌ಸನ್ನು ಕಟ್ಟಿಲ್ಲ. ಹುಡುಗರುಗಳು ಓದತಕ್ಕಂತಹ ಹಾಸ್ಟಲ್‌ಗಳಿಗೆ ಕೊಡತಕ್ಕಂತಹ ಎಸ್ಟಾಬ್ಲಿಷ್‌ಮೆಂಟ್ ಚಾರ್ಜ್‌ಸ ಏನಿದೆ, ಇಬಿಎಲ್ ಚಾರ್ಜ್ಸ್, ಅದಕ್ಕೆ ಇನ್ನೂ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಎಲ್ಲಿ?

ಶ್ರೀ ಬಿ. ಸೋಮಶೇಖರ್: ನಿಮ್ಮ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ.

ಶ್ರೀ ಕಾಗೋಡು ತಿಮ್ಮಪ್ಪ: ಅದು ಖಾಸಗಿಯವರದ್ದಾ?

ಶ್ರೀ ಬಿ. ಸೋಮಶೇಖರ್: ಇಲ್ಲಾ, ಸರ್ಕಾರದಕ್ಕೆ ಸಂಬಂಧಿಸಿದಂತೆ. ಯೂನಿವರ್ಸಿಟಿಗಳಿಗೆ ಕೊಟ್ಟಿಲ್ಲ. ಆ ಯೂನಿವರ್ಸಿಟಿಯವರು ಬ್ಯಾಂಕಿನಿಂದ ಲೋನ್ ತೆಗೆದುಕೊಂಡು ಬೇರೆ ಬೇರೆ ಸಂಸ್ಥೆಗಳಿಂದ ಲೋನ್‌ನ್ನು ಕಟ್ಟಿಕೊಂಡು ನಡೆಸುತ್ತಿದ್ದಾರೆ. ಈ ನಾಲ್ಕು ವರ್ಷಗಳಲ್ಲಿ, ಅದರ ಬಗ್ಗೆಯೇ ನಾನು ಹೇಳುತ್ತಿರುವುದು ಈ ಸೋಷಿಯಲ್ ಸೆಕ್ಟಾರ್‌ನಲ್ಲಿ ಶೇಕಡ 40ರಷ್ಟು ನಿಮ್ಮ ಸರ್ಕಾರದಲ್ಲಿ ಕಡಿತವಾಗಿದೆ. ಅದು ಸೋಷಿಯಲ್ ವೆಲ್‌ಫೇರ್ ಇರಬಹುದು, ಹೆಲ್ತ್ ಇರಬಹುದು ಎಜುಕೇಷನ್ ಇರಬಹುದು, ಅಲ್ಲಿ 40 ಪರ್ಸೆಂಟ್ ಹಣ ಕಡಿತವಾಗಿರುವ ಬಗ್ಗೆ ನಾನು ಅಂಕಿಅಂಶಗಳನ್ನು ತೋರಿಸುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಕಾಗೋಡು ತಿಮ್ಮಪ್ಪನವರೆ, ನಿಮ್ಮ ಇಲಾಖೆಯಲ್ಲಿ ಈ ಸಲದ ಬಜೆಟ್‌ನಲ್ಲಿ ಎಷ್ಟು ಕಟ್ ಮಾಡಿದ್ದೀರಿ ಹೇಳಿ ನೋಡೋಣ. ಎಲ್ಲಿ ಡಾಕ್ಟರ್ ಇಲ್ಲಿ ಔಷಧಿ

ಇಲ್ಲ, ಗೋಡೆಗಳಿಗೆ ಬಣ್ಣಹಚ್ಚಿಲ್ಲ, ಈ ಮಾತನ್ನು ಹೇಳುವಾಗ ತಾವು ಸದನದಲ್ಲಿರಲಿಲ್ಲ. ಹಂದಿಯು ಆಪರೇಷನ್ ಥಿಯೇಟರಿನೊಳಗಡೆ ಬಂತು, ಆ ರೀತಿಯಾಗಿ ಅದನ್ನು ಇಟ್ಟಿದ್ದೀರಿ. ಅದನ್ನು ಕಟ್ ಮಾಡಿರಿ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಪಾಟೀಲರೆ, ನಿಮ್ಮನ್ನು ಒಂದು ದಿವಸ ಆಪರೇಷನ್ ಥಿಯೇಟರ್‌ಗೆ ಕರೆದುಕೊಂಡು ಹೋಗುತ್ತೇವೆ ಆಗ ಬನ್ನಿ.

ಶ್ರೀ ಎಸ್.ಎಸ್. ಪಾಟೀಲ್: ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ಬಜೆಟ್‌ನಲ್ಲಿ ಹಣವನ್ನು ಕಟ್ ಮಾಡಿದ್ದೀರಿ. ಈ ಸಲ ಕ್ಯಾಬಿನೆಟ್‌ನಲ್ಲಿ ಈ ಬಗ್ಗೆ ಬಡಿದಾಡುವುದಕ್ಕೆ ಆಗುವುದಿಲ್ಲವೇ? ಸುಮ್ಮನೆ ನೀವು ಏನು ಮಾಡುತ್ತೀರಿ ಪಾಪ.

ಶ್ರೀ ಬಿ. ಸೋಮಶೇಖರ್: ಈ ಸರ್ಕಾರ ದೊಡ್ಡ ದೊಡ್ಡ ಲಾಭ ಮಾಡತಕ್ಕಂತಹ ಕಂಪನಿಗಳನ್ನು ಮುಚ್ಚುವುದು, ಉದಾಹರಣೆಗೆ ಹೇಳುವುದಾದರೆ ಕೆಎಸ್‌ಆರ್‌ಟಿಸಿ. ಕೆಎಸ್‌ಆರ್‌ಟಿಸಿಯ ಬಗ್ಗೆ ಹೇಳುವುದಾದರೆ ಮಾನ್ಯ ಸಿಂಧ್ಯಾರವರು ಮಂತ್ರಿಗಳಾಗಿದ್ದಾಗ ಅದನ್ನು ನಾಲ್ಕು ಭಾಗಗಳನ್ನಾಗಿ ಮಾಡಿ ಅದು ಬಿಎಂಟಿಸಿ, ಎನ್‌ಇಆರ್‌ಟಿಸಿ, ಎನ್‌ಡಬ್ಲ್ಯೂಆರ್‌ಟಿಸಿ ಇರಬಹುದು ಕೆಎಸ್‌ಆರ್‌ಟಿಸಿಯನ್ನು ನಾಲ್ಕೈದು ಭಾಗ ಮಾಡಿ ಅದು ಲಾಭ ಮಾಡತಕ್ಕಂತಹ ಒಂದು ಸಂಸ್ಥೆಯಾಗಿದೆ. ಇವತ್ತು ಅದಕ್ಕೆ ನೀವು 10 ಪರ್ಸೆಂಟ್ ರೋಡ್ ಸೆಸ್‌ನ್ನು ಹಾಕಿದ್ದೀರಿ? ಅದನ್ನು ಹಾಕಿದ ಮೇಲೆ ಸಹಜವಾಗಿ ನೀವು ಪ್ರಯಾಣಿಕರ ಮೇಲೆ ಅದು ಹೊರೆಯಾಗುತ್ತದೆ. ಚಾರ್ಜ್‌ನ್ನು ಜಾಸ್ತಿ ಮಾಡುತ್ತೀರಿ. ಆದರೆ ಪ್ರೈವೇಟ್ ವೆಹಿಕಲ್ಸ್‌ಗಳ ಮೇಲೆ ನೀವು ಸೆಸ್ ಹಾಕಿರುವುದಿಲ್ಲ. ಅದರ ಬದಲು ನೀವು ಫ್ರೀಯಾಗಿ ಪರ್ಮಿಟ್‌ನ್ನು ಕೊಡುತ್ತಿದ್ದಿರಿ, ಇವತ್ತು ಕೆಎಸ್‌ಆರ್‌ಟಿಸಿ ಏನಾಗುತ್ತಿದೆಯೆಂದರೆ ಕೆಎಸ್‌ಆರ್‌ಟಿಸಿ ಹೋಗತಕ್ಕಂತಹ ರೂಟ್‌ಗಳಲ್ಲೆಲ್ಲಾ ಈ ಖಾಸಗಿ ಬಸುಗಳು ಹೋಗಿ ಇವತ್ತು ಕೆಎಸ್‌ಆರ್‌ಟಿಸಿ ಸಂಸ್ಥೆಯು ಮುಚ್ಚತಕ್ಕಂತಹ ಕೆಲಸವನ್ನು ಮಾಡಿದ್ದೀರಿ. ಇದು ಪಾಪದ ಕೆಲಸ ಅಲ್ಲವೇ ನಿಮ್ಮದು? ಎನ್‌ಜಿಇಎಫ್‌ನ್ನು ಮುಚ್ಚತಕ್ಕಂತಹ ಕೆಲಸವನ್ನು ಮಾಡಿದ್ದೀರಿ ಅದು ಪಾಪದ ಕೆಲಸ ಅಲ್ಲವೇ?

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಛೇರ್ಮನ್‌ರವರೆ, ರಾಜ್ಯ ಸರ್ಕಾರದ ಸ್ವಾಮ್ಯಗಳಲ್ಲಿರುವ ಸಂಸ್ಥೆಗಳ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್‌ರವರು ಪ್ರಸ್ತಾಪ ಮಾಡುತ್ತಿದ್ದಾರೆ. ಅವರು ಮುಚ್ಚಿರುವ ಎನ್‌ಜಿಎಫ್ ಬಗ್ಗೆ ಪ್ರಸ್ತಾಪ ಮಾಡಿದರು. ಅದನ್ನು ಮುಚ್ಚಿದ್ದು ಒಂದು ಕಡೆಯಾದರೆ, ಅಲ್ಲಿ ಒಬ್ಬ ಛೇರ್ಮನ್‌ರನ್ನು ನೇಮಕ ಮಾಡಿದ್ದೀರಿ, ಆ ಕಾರ್ಖಾನೆಯು ಮುಚ್ಚಿಹೋಗಿದೆ, ಅಲ್ಲಿ ಛೇರ್ಮನ್‌ಗೆ ಏನು ಕೆಲಸ? ಮಹದೇವ್‌ರವರು ಮಿನಿಸ್ಟ್ರು ಅದನ್ನು ಓಪನ್ ಮಾಡುತ್ತಾರಾ?

ಶ್ರೀ ಎಂ. ಮಹದೇವ (ಪಶುಸಂಗೋಪನಾ ಮತ್ತು ಸಕ್ಕರೆ ಇಲಾಖಾ ಸಚಿವರು): ಎನ್‌ಜಿಎಫ್ ರಿವೈವ್ ಮಾಡಿ ಅದಕ್ಕೆ ಪರಿಹಾರ ಕಂಡು ಹಿಡಿಯತಕ್ಕಂತಹ ಕೆಲಸವನ್ನು ಮಾಡಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್: ಇಲ್ಲಾ ಸಾರ್, ನಿದ್ದೆಯಿಂದ ಎದ್ದಾಗ ಏನೇನೋ ಬರುತ್ತದೆ. ಎನ್‌ಜಿಎಫ್ ಕಾರ್ಖಾನೆಯನ್ನು ಮುಚ್ಚಿಬಿಟ್ಟು ಒಬ್ಬ ಛೇರ್ಮನ್‌ರವರನ್ನು ಒಂದು ವರ್ಷದಿಂದ ನೇಮಕ ಮಾಡಿದ್ದಾರೆ. ಅಲ್ಲಿಗೆ ಒಬ್ಬ ಛೇರ್ಮನ್‌ರನ್ನು ಏತಕ್ಕಾಗಿ ನೇಮಕ ಮಾಡಿದ್ದಿರಿ?

ಶ್ರೀ ಬಿ. ಸೋಮಶೇಖರ್: ಅವರು ರಿಯಲ್ ಎಸ್ಟೇಟ್ ಏಜೆಂಟಾಗಿ ಕೆಲಸ ಮಾಡುವುದಕ್ಕಾಗಿ.

ಶ್ರೀ ಎಸ್. ಸುರೇಶ್‌ಕುಮಾರ್: ಮೈಸೂರು ಲ್ಯಾಂಪ್ಸ್ ಇವತ್ತು ಅಲ್ಲಿಗೆ ಒಬ್ಬ ಛೇರ್ಮನ್.

ಶ್ರೀ ಬಿ. ಸೋಮಶೇಖರ್: ಯಾತಕ್ಕೆ ಗೊತ್ತಾ ಅದು? ಛೇರ್ಮನ್ ಹುಡುಕಿಕೊಂಡು ಹೋಗುತ್ತಾರೆ, ಈ ಲ್ಯಾಂಡ್‌ನ್ನು ಮಾರಬೇಕೆಂದೇ ಇದ್ದೇವೆ. ಇದಕ್ಕೆ ಎಷ್ಟೆಷ್ಟು ರೇಟನ್ನು ಕೊಡಿಸುತ್ತೀರಿ? ರಿಯಲ್ ಎಸ್ಟೇಟ್‌ಗಳನ್ನು ಮಾಡುವುದಕ್ಕಾಗಿ ಛೇರ್ಮನ್‌ಗಳನ್ನು ಅಪಾಯಿಂಟ್‌ಮೆಂಟ್ ಇವರು ಮಾಡುತ್ತಾರೆ.

ಶ್ರೀ ಎಸ್. ಸುರೇಶ್‌ಕುಮಾರ್: ಮೈಸೂರು ಲ್ಯಾಂಪ್ಸ್‌ನಲ್ಲಿ ಪ್ರೊಡಕ್ಷನ್ ಇಲ್ಲ ಸ್ವಾಮಿ. ಪ್ರೊಡಕ್ಷನ್ ಇಲ್ಲ, ಮಾರ್ಕೆಟಿಂಗ್ ಇಲ್ಲ ಅಲ್ಲಿ ಬೀಗ ಹಾಕಿದ್ದಾರೆ. ಅದಕ್ಕೊಬ್ಬ ಛೇರ್ಮನ್? ಅದಕ್ಕೆ ಖರ್ಚು, ಅವರ ದವಲತ್ತು.

ಶ್ರೀ ಕಾಗೋಡು ತಿಮ್ಮಪ್ಪ: ಹೇರಳವಾದಂತಹ ಆಸ್ತಿಯನ್ನು ನೋಡಿಕೊಳ್ಳಬೇಕಾಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್: ಅಲ್ಲಿ ಎಂಡಿಯವರು ಅದನ್ನು ನೋಡಿಕೊಳ್ಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸುರೇಶ್‌ಕುಮಾರ್‌ರವರೆ, ಕೇಳಿ. ಹೇರಳವಾದ ಆಸ್ತಿ ಅಲ್ಲಿ ಇರತಕ್ಕಂಥದ್ದು ಅದನ್ನು ಸಂರಕ್ಷಣೆ ಮಾಡಿದರೆ ನಾಳೆ ದಿವಸ ಅದನ್ನು ಮಾರಾಟ ಮಾಡಿ ಬರತಕ್ಕಂತಹ ಹಣದಲ್ಲಿ ಲಯಾಬಿಲಿಟಿಯನು ಸೇರಿಸುವುದಕ್ಕಾಗುತ್ತದೆ. ಅದನ್ನು ನೋಡಿಕೊಳ್ಳುವುದಕ್ಕೆ ಮೇಲೆ ಒಬ್ಬರು ಇದ್ದರೆ ಏನು ತೊಂದರೆಯಾಗುತ್ತದೆ. ಒಬ್ಬರಿಗಿಂತ ಇನ್ನೊಬ್ಬ ಅಷ್ಟೆ.

SRI S. SURESH KUMAR: Defending the indefensible. ಅದು ನಿಮಗೂ ಕೂಡ ಗೊತ್ತು.

ಶ್ರೀ ಬಿ. ಸೋಮಶೇಖರ್: ಉದಾಹರಣೆಗೆ ಹೇಳುವುದಾದರೆ ಅಡಲ್ಟ್ ಎಜುಕೇಷನ್ ಕೌನ್ಸಿಲ್ ಎಂದು ಮೈಸೂರಿನಲ್ಲಿ ಇದೆ, ಅದನ್ನು ಕ್ಯಾಬಿನೆಟ್ ಡಿಸಾಲ್ವ್ ಮಾಡಬೇಕೆಂದು ತೀರ್ಮಾನ ಮಾಡಿದೆ. ಇನ್ನೊಬ್ಬ ನಾನ್ ಅಫಿಷಿಯಲ್‌ನ್ನು ಅಲ್ಲಿಗೆ ಅಪಾಯಿಂಟ್ ಮಾಡುತ್ತಾರೆ. ಏನು ಆಡಳಿತ ವೈಖರಿ ನನಗಂತೂ ಅರ್ಥವಾಗುತ್ತಿಲ್ಲ. ಕ್ಯಾಬಿನೆಟ್ ತೀರ್ಮಾನವನ್ನು ತೆಗೆದುಕೊಂಡು ಅದು ಅಬಾಲಿಷ್ ಮಾಡಬೇಕೆಂದು, ಡಿಪಿಎಆರ್‌ನಿಂದ ಅಲ್ಲಿಗೆ ಒಬ್ಬರನ್ನು ನೇಮಕ ಮಾಡುತ್ತೀರಿ, ನಾನು ಅಫಿಷಿಯಲ್ ಛೇರ್ಮನ್. ಇದರಲ್ಲಿ ಯಾವ ನ್ಯಾಯ? ಇದು ನಿಮ್ಮ ಆಡಳಿತದ ವೈಖರಿ. ಈ ಸರ್ಕಾರದಲ್ಲಿ ಬಹಳ ಅತ್ಯುತಮವಾದ ಸಾಧನೆಯನ್ನು ತೋರಿಸುವುದು ಯಾವುದೆಂದರೆ ಡಿನೋಟಿಫಿಕೇಷನ್ಸ್, ಅಂದರೆ ಬಿಡಿಎನಲ್ಲಿ ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಇದನ್ನು ಇವರು ಏನು ಮಾಡಿದರೆಂದರೆ ಬಿ.ಎ.ಟಿ.ಎಫ್. ಎಂದು ಅಪಾಯಿಂಟ್ ಮಾಡಿದರು. ಈ ಟಾಸ್ಕ್‌ಫೋರ್ಸ್‌ನವರು Zuran ಕಾರ್ಪೋರೇಷನ್ ಎಂಬ ಸಿಂಗಾಪುರ ಕಂಪನಿಯವರಿಗೆ ಪ್ರಾಜೆಕ್ಟ್ ತಯಾರು ಮಾಡಿ ಎಂದು ಕೆಲಸವನ್ನು ಕೊಟ್ಟರು. ಅವರು ಏನು ಮಾಡಿದರೆಂದರೆ ಹೈಟೆಕ್ ಪ್ರಾಜೆಕ್ಟ್‌ಗಳನ್ನು ಹೈಟೆಕ್‌ಸಿಟಿ, ಎಲೆಕ್ಟ್ರಾನಿಕ್ ಸಿಟಿಯಿಂದ ವೈಟ್ ಫೀಲ್ಡ್‌ವರೆಗೆ ಸುಮಾರು 10 ಸಾವಿರ ಎಕರೆ ಖಾಸಗಿ ಜಮೀನುಗಳನ್ನು ತೆಗೆದುಕೊಂಡು ಈ ಎಲೆಕ್ಟ್ರಾನಿಕ್ ಸಿಟಿ ಮಾಡಬೇಕು ಬೇರೆ ಬೇರೆ ಮಲ್ಟಿನ್ಯಾಷನಲ್ ಕಂಪನಿಗಳನ್ನು ಮಾಡಬೇಕು, ಸಾಫ್ಟ್‌ವೇರ್ ಕಂಪನಿಗಳನ್ನು ಮಾಡಬೇಕು ಇದಕ್ಕಾಗಿ ನೀವು 10 ಸಾವಿರ ಎಕರೆಯನ್ನು ನೀವು ಅಕ್ವೈರ್ ಮಾಡಿಕೊಳ್ಳಿ ಎಂಬ ವರದಿಯನ್ನು ಸರ್ಕಾರಕ್ಕೆ ಕೊಟ್ಟರು. 10 ಸಾವಿರ ಎಕರೆಯ ಬಗ್ಗೆ ವರದಿಯನ್ನು ತೆಗೆದುಕೊಂಡ ಮೇಲೆ, ಅಷ್ಟಕ್ಕೆ ಈ ಸರ್ಕಾರದಿಂದ ನೀವು ಕನ್‌ಸಿಷನ್ ಕೊಟ್ಟಿರುವುದು ಎಷ್ಟು? ಹತ್ತು ಸಾವಿರ ಎಕರೆಯ ವರದಿ ತೆಗೆದುಕೊಂಡು, ನಂತರ ಈ ರೀತಿ ಹತ್ತು ಸಾವಿರ ಎಕರೆಗೆ ಸರ್ಕಾರದಿಂದ ನೀವು

ಕನ್ಸೆಷನ್ ಕೊಟ್ಟಿದ್ದು ಎಷ್ಟು? ರೈತರಿಗೆ ಈ ಯೋಜನೆಯಡಿ ಒಂದು ಎಕರೆಗೆ ಎಷ್ಟು ಕೊಟ್ಟಿದ್ದೀರಿ? ನನ್ನ ಪ್ರಕಾರ ಒಂಬತ್ತೂವರೆ ಲಕ್ಷದಿಂದ ಹತ್ತು ಲಕ್ಷದವರೆಗೆ ಒಂದು ಎಕರೆಗೆ ಕೊಟ್ಟಿದ್ದೀರಿ, ಅದರ ಮಾರುಕಟ್ಟೆ ವ್ಯಾಲ್ಯೂ 75 ರಿಂದ 80 ಲಕ್ಷ ರೂಪಾಯಿ ಒಂದು ಎಕರೆಗೆ ಆಗುತ್ತದೆ. ಹಾಗಾದರೆ ಇದರಿಂದ ಸರ್ಕಾರಕ್ಕೆ ನಾನು ಲೆಕ್ಕ ಹಾಕಿದ ಪ್ರಕಾರ 16,40,000–00 ರೂಪಾಯಿಗಳು ನಷ್ಟವಾಗುತ್ತದೆ. ಅದರಲ್ಲಿ ಟ್ಯಾಕ್ಸ್ ಕನ್ಸೆಷನ್, ಸ್ಟ್ಯಾಂಪ್ ಎಕ್ಸೆಮ್ಷನ್, ಎಲೆಕ್ಟ್ರಿಸಿಟಿ ಕನ್ಸೆಷನ್ ಇರಬಹುದು, ಇದನ್ನೆಲ್ಲಾ ತೆಗೆದುಕೊಂಡರೆ ಸುಮಾರು 16,40,000–00 ರೂಪಾಯಿ ಒಂದು ಎಕರೆಗೆ ತಗಲುತ್ತದೆ. ರೈತರಿಗೆ ಸಿಗುವಂಥದ್ದು ಒಂಬತ್ತೂವರೆಯಿಂದ ಹತ್ತು ಲಕ್ಷ ರೂಪಾಯಿ ಆದರೆ ಮಾರುಕಟ್ಟೆ ಬೆಲೆ 75 ರಿಂದ 80 ಲಕ್ಷ ರೂಪಾಯಿಗಳು. ನೀವು ಅಕ್ವೈರ್ ಮಾಡಿರುವ ಈ ಹತ್ತು ಸಾವಿರ ಎಕರೆಯಲ್ಲಿ ಡಿ–ನೋಟಿಫಿಕೇಷನ್ ಎಷ್ಟು ಎಕರೆಗೆ ಮಾಡಿದ್ದೀರಿ? ಹಾಗೆ ಡಿ–ನೋಟಿಫಿಕೇಷನ್ ಮಾಡಿರುವ ಎಕರೆಗಳು ಎಷ್ಟು ರಿಯಲ್ ಎಸ್ಟೇಟ್ ಏಜೆಂಟ್‌ಗಳಿಗೆ ಹೋಗಿದೆ. ಅದರಲ್ಲಿ ಎಷ್ಟು ಅಡಾಪ್ಟ್ ಮಾಡಿದ್ದಾರೆ? ಸಾವಿರಾರು ಕೋಟಿ ರೂಪಾಯಿಗಳನ್ನು ಮಾಡಿರತಕ್ಕದ್ದು. ಮತ್ತೆ ಇದರಲ್ಲಿ ಜಂಬ ಕೊಚ್ಚಿಕೊಳ್ಳತಕ್ಕದ್ದು ಅಂದರೆ ಈ ನಾಲ್ಕು ವರ್ಷದಲ್ಲಿ ಬಿ.ಡಿ.ಎ. ಸೈಟುಗಳನ್ನು ಮಾರಿ ಸುಮಾರು 125 ಕೋಟಿ ರೂಪಾಯಿಗಳಷ್ಟು ಲಾಭ ಪಡೆದಿದ್ದೇವೆ ಮತ್ತು ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಡಿಮಾಲಿಷ್ ಮಾಡಿ ಸುಮಾರು ನೂರು ಕೋಟಿ ರೂಪಾಯಿಗಳ ರಿಯಲೈಸ್ ಮಾಡಿದ್ದೇವೆಂದು ಹೇಳಿಕೊಳ್ಳುತ್ತಾರೆ. ಆದರೆ ಇವತ್ತು ಹತ್ತು ಸಾವಿರ ಎಕರೆಯಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿ ನಷ್ಟವಾಗಿದೆ, ರಿಯಲ್ ಎಸ್ಟೇಟ್‌ಗಳಿಗೆ ಸಾವಿರಾರು ಕೋಟಿ ರೂಪಾಯಿಗಳ ಲಾಭವಾಗಿದೆ. ಅದರಲ್ಲಿ ಎಷ್ಟು ಆಡಳಿತ ಪಕ್ಷಕ್ಕೆ ಸಿಕ್ಕಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ಇದರಲ್ಲಿ ಡಿ–ನೋಟಿಫಿಕೇಷನ್ ಮಾಡಿ ರಿಯಲ್ ಎಸ್ಟೇಟ್‌ಗಳಿಗೆ ವಾಪಸ್ಸು ಕೊಟ್ಟಿರುವಂಥದ್ದು, ಈ 50 ವರ್ಷಗಳಲ್ಲಿ ಸರ್ಕಾರದ ಆಡಳಿತದಲ್ಲಿ ಮುಖ್ಯಮಂತ್ರಿಗಳು ಎಷ್ಟು ಡಿ. ನೋಟಿಫಿಕೇಷನ್ ಮಾಡಿದ್ದರೋ ಅದಕ್ಕಿಂತ ಹೆಚ್ಚು ಡಿ–ನೋಟಿಫಿಕೇಷನ್ ಈ ಮುಖ್ಯಮಂತ್ರಿಗಳು ಈ ನಾಲ್ಕು ವರ್ಷಗಳಲ್ಲಿ ಮಾಡಿ ಮೀರಿಸಿದ್ದಾರೆ. ಅಂದರೆ ಡಿ–ನೋಟಿಫಿಕೇಷನ್ ಸರ್ಕಾರ, ಇದು ಹೈಯರ್ ರೆಕಾರ್ಡ್. 50 ವರ್ಷಗಳಲ್ಲಿ ಎಷ್ಟು ಡಿ–ನೋಟಿಫಿಕೇಷನ್ ಆಗಿದೆಯೋ ಅದನ್ನು ಮೀರಿಸಿ ಈ 5 ವರ್ಷಗಳಲ್ಲಿ ಹೆಚ್ಚು ಡಿ–ನೋಟಿಫಿಕೇಷನ್ ಮಾಡಿದ್ದಾರೆ. ಹಾಗಾಗಿ ಈ ರೀತಿ ಸಾಧನೆ ಮಾಡಿರುವುದರಿಂದ ಇದನ್ನು ರಿಯಲ್ ಎಸ್ಟೇಟ್ ಸರ್ಕಾರವೆಂದು ನಾನು ಹೇಳಬೇಕಾಗುತ್ತದೆ. ಈಗ ಬರಗಾಲ ಬಂದಿದೆ. ಮೂರು–ನಾಲ್ಕು ವರ್ಷಗಳಿಂದ ಬರಗಾಲವಿದೆ. ಬರಗಾಲವಿರುವುದರಿಂದ ಮಳೆ ಇಲ್ಲ, ಬೋರ್‌ವೆಲ್‌ನ ನೀರು, ನದಿ ನೀರು ಕಡಿಮೆಯಾಗಿದೆ. ಅದನ್ನು ಇವತ್ತು ಹೊಸದಾಗಿ ನದಿ ನೀರನ್ನು ಶೇಖರಣೆ ಮಾಡತಕ್ಕಂಥದ್ದು, ಆ ನೀರಿನಲ್ಲಿ ಲಿಫ್ಟ್ ಇರಿಗೇಷನ್, ಬೇರೆ ಬೇರೆ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿ ನೀರು ಕೊಡುವುದರ ಬದಲಾಗಿ ಅದರಲ್ಲಿ ಇನ್ನೊಂದು ಗಾಯದ ಮೇಲೆ ಬರೆ ಹಾಕಿದ ಹಾಗೆ ನೀರು ಸೌಕರ್ಯ ಒದಗಿಸದೆ ಅಲ್ಲಿ ಮರಳನ್ನು ತೆಗೆಸುವ ಕಾರ್ಯ ಮಾಡುತ್ತಿದ್ದಾರೆ. ಅದಕ್ಕೆ ಲೈಸೆನ್ಸ್‌ಇಲ್ಲ, ಪರ್ಮಿಟ್ ಮಾಡಿಲ್ಲ, ಆದರೂ ಮರಳನ್ನು ಅನಧಿಕೃತವಾಗಿ ಲೂಟಿ ಮಾಡಿಸುತ್ತಿದ್ದಾರೆ. ಅಲ್ಲದೆ ಜಿಲ್ಲೆಯನ್ನೂ ಸಹ ಲೈಸೆನ್ಸ್ ಇಲ್ಲದೆ ಹಲವಾರು ಕ್ರಷರ್ಸ್‌ಗಳಿಂದ ತೆಗೆಸುತ್ತಿರುವುದನ್ನು ನೋಡಿದ್ದರೆ ಸರ್ಕಾರ ಇವತ್ತು ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡುವುದರಲ್ಲಿ ಮೊದಲನೇ ಸ್ಥಾನವನ್ನು ಗಳಿಸಿದೆ. ರಿಯಲ್ ಎಸ್ಟೇಟ್ ಮಾಡಿ ಡಿ–ನೋಟೀಫಿಕೇಷನ್ ಮಾಡಿರುವುದರಲ್ಲಿ ಮೊದಲನೇ ಸ್ಥಾನ ಗಳಿಸಿರುವಂತೆ ನೈಸರ್ಗಿಕ ಸಂಪತ್ತನ್ನು ಲೂಟಿ

ಮಾಡಿರುವುದರಲ್ಲಿ ಮೊದಲನೇ ಸ್ಥಾನವನ್ನು ಗಳಿಸಿದೆಯೆಂದು ನಾನು ಹೇಳುತ್ತೇನೆ. ಇನ್ನು ಪಡಿತರ ಚೀಟಿ ಬಗ್ಗೆ, ನಮ್ಮ ಸರ್ಕಾರ ಇಡೀ ರಾಜ್ಯದಲ್ಲಿ 67 ಲಕ್ಷ ಪಡಿತರ ಚೀಟಿಯನ್ನು ಎಲ್ಲಾ ಕಡೆ ಕೊಟ್ಟಿದ್ದೀರಿ. ಇವರು ಬಂದ ಮೇಲೆ ಸುಮಾರು 34 ಲಕ್ಷ ಅರ್ಹರಿದ್ದಾರೆ ಎಂದು ಹೇಳಿದ್ದೀರಿ. ಆದರೆ ಇವತ್ತು 34 ಲಕ್ಷ ಎಲಿಬಿಲಿಟಿ ಇದ್ದಾರೆ ಎಂದು ಹೇಳಿ 70 ಲಕ್ಷ ಕಾರ್ಡುಗಳನ್ನು ಕೊಟ್ಟಿದ್ದಾರೆ. ಆ ಕಾರ್ಡುಗಳನ್ನು ಯಾರಿಗೆ ಕೊಟ್ಟಿದ್ದಾರೆಂದರೆ, ಪಂಪ್‌ಸೆಟ್ ಇರುವ ರೈತರಿಗೆ, ಗದ್ದೆ ಇರತಕ್ಕವರಿಗೆ, ಒಂದು ಮನೆಯಲ್ಲಿ ಅಧಿಕಾರಿಯಾಗಿರುವವರಿಗೆ ಕೊಟ್ಟಿದ್ದಾರೆ, ಇದನ್ನು ಒಂದು ದೊಡ್ಡ ದಂಧೆಯಾಗಿಸಿದ್ದಾರೆ. ಆದರೆ ನಿಜವಾಗಿ ಶೇಕಡ 50 ರಷ್ಟು ಬಡವರಿಗೆ ಹಸಿರು ಕಾರ್ಡುಗಳು ಸಿಕ್ಕಿಲ್ಲ. ಅಂತ್ಯೋದಯ ಯೋಜನೆಯನ್ನು ಮಾಡಿದ್ದಾರೆ. ಈ ಯೋಜನೆ ಇವತ್ತು ಗದ್ದೆ ಇರುವವರಿಗೆ ಅಫಿಷಿಯಲ್ಸ್‌ಗಳಿಗೆ ಸಿಕ್ಕಿರುವಂಥದ್ದು. ನಮ್ಮ ಸರ್ಕಾರದಲ್ಲಿ ಮೂರು ರೂಪಾಯಿ ಇಪ್ಪತ್ತು ಪೈಸೆ ಇದ್ದುದ್ದನ್ನು ಇವತ್ತು ಆರು ರೂಪಾಯಿ ಐವತ್ತು ಪೈಸೆಗೆ ಹೆಚ್ಚು ಮಾಡಿ ಹಳದಿ ಕಾರ್ಡುಗಳನ್ನು ಪರಿವರ್ತನೆ ಮಾಡಿ ಕೊಟ್ಟಿರುವುದು ಗಣೇಶನನ್ನು ಮಾಡಿ ಎಂದರೆ ಅವರ ಅಪ್ಪನನ್ನು ಮಾಡಿದ ಹಾಗೆ ಆಗಿದೆ. ಹಸಿರು ಕಾರ್ಡುಗಳ ಪಡಿತರ ಚೀಟಿ ವಿತರಣೆಯಲ್ಲಿ ಈ ಸರ್ಕಾರದಿಂದ ಆಗಿರುವ ಸಾಧನೆ. ಅಕ್ಷರ ದಾಸೋಹ ಎಂದು ದೊಡ್ಡ ಬೊಬ್ಬೆ ಹೊಡೆಯುತ್ತಿದ್ದಾರೆ. ಅಕ್ಷರ ದಾಸೋಹದ ಯೋಜನೆಯಿಂದ ಇವತ್ತು 46 ಲಕ್ಷ ವಿದ್ಯಾರ್ಥಿಗಳು ಉಪಯೋಗ ಪಡೆಯುತ್ತಿದ್ದು, ಇದರಿಂದ ಹಾಜರಾತಿ ಹೆಚ್ಚಾಗಿದೆ, ಅದಕ್ಕಾಗಿ 130 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, ಇದೊಂದು ಬಹು ದೊಡ್ಡ ಯೋಜನೆ ಎಂದೆಲ್ಲಾ ಹೇಳುತ್ತಿದ್ದಾರೆ. ಆದರೆ ನೀವು ಒಬ್ಬ ಅಭ್ಯರ್ಥಿಗೆ ಕೊಡತಕ್ಕಂಥ ಚಾರ್ಜು ಒಂದು ರೂಪಾಯಿ. ಆ ಒಂದು ರೂಪಾಯಿಯಲ್ಲಿ ಗ್ಯಾಸ್, ಬೇಳೆ, ಎಣ್ಣೆ, ಅಡಿಗೆ ಮಾಡುವುದಕ್ಕೆ ಚಾರ್ಜು ಇಷ್ಟೆಲ್ಲಾ ಕೊಡಬೇಕಾಗುತ್ತದೆ. ಇದರಲ್ಲಿ ಟೀಚರ್ಸ್, ಎಸ್.ಡಿ.ಎಂ. ಮೆಂಬರ್ಸ್ ಮತ್ತು ಕುಕ್ಸ್, ಆ ಒಂದು ರೂಪಾಯಿಗೆ ರಷ್. ಕುಕ್ ನಾನಾಗಬೇಕು, ಎಸ್.ಡಿ.ಎಂ. ಮೆಂಬರ್ ನಾನಾಗಬೇಕು, ಟೀಚರ್ಸ್ ಈ ಯೋಜನೆಗಳಿಗೆ ನನ್ನನ್ನು ಡೆಪ್ಯೂಟ್ ಮಾಡಿ ಎನ್ನುತ್ತಾರೆ ಉದ್ದೇಶವೇನೆಂದರೆ ಅದನ್ನು ತಿನ್ನುಕೊಳ್ಳುವುದು. ಹೀಗಾಗಿ ಅಕ್ಷರ ದಾಸೋಹ ಯೋಜನೆಗೆ ಕೊಡತಕ್ಕಂತಹ ಒಂದು ರೂಪಾಯಿ ಮೊದಲೇ ಸಾಲುವುದಿಲ್ಲ. ಅಡಿಗೆ ಮಾಡುವವರಿಗೆ ಇನ್ನು ದುಡ್ಡು ರಿಲೀಸ್ ಮಾಡಿಲ್ಲ. ಅದರಲ್ಲಿ ಎಸ್.ಡಿ.ಎಂ. ಮೆಂಬರ್ಸ್ ಟೀಚರ್ಸ್ ಎಷ್ಟು ದುಡ್ಡು ತಿನ್ನುತ್ತಾರೋ ಗೊತ್ತಿಲ್ಲ. ಆದುದರಿಂದ ಹಾಜರಾತಿ ಜಾಸ್ತಿಯಾಗಿದೆ ಎಂದು ನೀವೇನು ಹೇಳಿದ್ದೀರಲ್ಲಾ, ಇದರಿಂದ ಶಿಕ್ಷಣದ ಗುಣಮಟ್ಟ ಎಷ್ಟು ಎಂದೂ ಸಹ ಯೋಚನೆ ಮಾಡಬೇಕಾಗುತ್ತದೆ. ಹಾಜರಾತಿ ಹೆಚ್ಚಾಗಿರುವುದು ಒಂದು ಕಡೆಯಾದರೆ, ಶಿಕ್ಷಣದ ಗುಣ ಮಟ್ಟ ಶಾಲೆಯ ವಾತಾವರಣ ಏನಾಗಿದೆಯೆಂದರೆ ಅಡಿಗೆಯ ವಾತಾವರಣವಾಗಿಬಿಟ್ಟಿದೆ. ಯಾರೂ ಪಾಠವನ್ನು ಮಾಡುತ್ತಿಲ್ಲ. ಅಡಿಗೆ ಮಾಡಲಿಕ್ಕೆ ಚಟುವಟಿಕೆ ಜಾಸ್ತಿಯಾಗಿದ ಮತ್ತೆ ನಿಮ್ಮಲ್ಲಿ ಹೊಸದಾಗಿ ನೇಮಕವನ್ನು ಮಾಡಿರುವ ಅಧಿಕಾರಿಗಳು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಈ ಯೋಜನೆಯಿಂದ ಜಾತೀಯತೆ ಜಾಸ್ತಿಯಾಗಿದೆಯೆಂದು ಹೇಳಿದ್ದಾರೆ. ಈ ಯೋಜನೆಯಿಂದ ಪರಿಶಿಷ್ಟ ಜಾತಿಯವರು ಅಡಿಗೆ ಮಾಡಿದರೆ ಯಾರೂ ಊಟ ಮಾಡುತ್ತಿಲ್ಲ. ಮಕ್ಕಳು ಪಕ್ಕದಲ್ಲಿ ಕುಳಿತುಕೊಳ್ಳುತ್ತಿಲ್ಲ ಎಂದು ನಾವು ನೋದ ಅಧಿವೇಶನದಲ್ಲಿ ಏನು ಆರೋಪ ಮಾಡಿದ್ದೆ ಅದನ್ನು ನಿಮ್ಮ ಅಧಿಕಾರಿಗಳು ಹೇಳಿರುವುದಕ್ಕೆ ಸಾಕ್ಷಿ. ಆದುದರಿಂದ ಜಾತೀಯತೆ ಹೆಚ್ಚಾಗಿರುವುದರ ಜೊತೆಗೆ ಶಿಕ್ಷಣದ ಗುಣಮಟ್ಟ, ಶಿಕ್ಷಣದ ವಾತಾವರಣ ಕಡಿಮೆಯಾಗಿದೆ ಎನ್ನುವುದು ನನ್ನ ಅಭಿಪ್ರಾಯ. ಅದರ ಬದಲಿಗೆ ನಾವು ಕೆ.ಜಿ.ಗೆ ಬದಲಿಗೆ 5-10 ಕೆ.ಜಿ. ಒಂದು ಮನೆಗೆ

ಅಕ್ಕಿಯನ್ನು ಕೊಟ್ಟು, ಅದರ ಆಧಾರದ ಮೇಲೆ ನಾವು ಹಾಜರಾತಿಯನ್ನು ಕೊಡುತ್ತೇವೆಂದು ಹೇಳಿದ್ದರೆ ಈ ಯೋಜನೆ ಯಶಸ್ವಿಯಾಗುತ್ತಿತ್ತು ಎಂಬುದು ನನ್ನ ಅನಿಸಿಕೆ. ಮತ್ತೆ ಇನ್ನೊಂದು ಈ ಸರ್ಕಾರದ ಸಾಧನೆ ಏನೆಂದರೆ ಸುಪ್ರೀಂಕೋರ್ಟ್ ಕಡೆಯಿದ ಹೆಚ್ಚು ಪ್ರೋತ್ಸಾಹ ಪಡೆದಿರತಕ್ಕ ಸರ್ಕಾರವಾಗಿದೆ ಎಂದರೆ ಎಷ್ಟು ಹೊಗಳಿಸಿಕೊಂಡಿದೆ ಅಂದರೆ ಮೊದಲು ಬಂದ ತಕ್ಷಣ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಕಂಟೆಂಪ್ಟ್ ಫೇಸ್ ಮಾಡಬೇಕಾಗಿ ಬಂತು. ಅದಾದ ಮೇಲೆ ಕಾವೇರಿ ನೀರಿನ ಇಷ್ಯೂ, ನೀರು ಬಿಡುವುದಿಲ್ಲ ಎಂದು ಹೇಳಿ ನಂತರ ಕ್ಷಮೆಯನ್ನು ಕೇಳಿಕೊಂಡಿದ್ದು. ಹೈಕೋರ್ಟಿನಲ್ಲಿ ಆಶ್ರಯ ಸಮಿತಿಯನ್ನು ಕ್ವಾಷ್ ಮಾಡಿದರು, ಅದು ಒಂದು ದೊಡ್ಡ ಹೊಡೆತ. ರಾಜ್‌ಕುಮಾರ್ ಅಪಹರಣದ ಹಿನ್ನೆಲೆಯಲ್ಲಿ ಟಾಡಾ ಖೈದಿಗಳನ್ನು ಬಿಡುಗಡೆ ಮಾಡಲೇಬೇಕಾಗುತ್ತದೆ, ಇಲ್ಲದಿದ್ದರೆ ತಾವು ಕಾನೂನು ವ್ಯವಸ್ಥೆಯನ್ನು ಕಾಪಾಡುವುದು ಕಷ್ಟವಾಗುತ್ತದೆಂದು ಸುಪ್ರೀಂಕೋರ್ಟಿಗೆ ಅರ್ಜಿ ಹಾಕಿದಾಗ, ನೀವು ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕಾಪಾಡಿಕೊಳ್ಳುವುದು ನಿಮ್ಮ ರಾಜ್ಯಸರ್ಕಾರದ ಕರ್ತವ್ಯವಾಗಿದೆ, ಅದನ್ನು ನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ ನೀವು ಆಡಳಿತವನ್ನು ಬಿಟ್ಟು ಹೋಗಿ ಎನ್ನುವ ಶಹಭಾಷ್‌ಗಿರಿಯನ್ನು ಈ ಸರ್ಕಾರ ಪಡೆದುಕೊಂಡಿತ್ತು. ಇನ್ನು ಗ್ರಾಮೀಣ ಕೃಪಾಂಕದಲ್ಲಿ 16,500 ಅಭ್ಯರ್ಥಿಗಳ ನೇಮಕಾತಿ ಆದೇಶವನ್ನು ಸುಪ್ರೀಂಕೋರ್ಟ್ ರದ್ದು ಮಾಡಿತು. ಸಿ.ಇ.ಟಿ.ಯ ವ್ಯವಸ್ಥೆಯಲ್ಲಿ ಸರ್ಕಾರ 1997ರ ನಿಯಮಾವಳಿಗಳನ್ನು ರದ್ದು ಮಾಡಿಸದಿರುವುದಕ್ಕೆ ಅವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ, ಇವರು ಆ ಗೊಂದಲವನ್ನು ಸೃಷ್ಟಿಸಿದರು. ಕೆಲವು ಡಿ--ನೋಟಿಫಿಕೇಷನ್‌ಗಳನ್ನು ಹೈಕೋರ್ಟ್ ಕ್ವಾಷ್ ಮಾಡಿ ಸರ್ಕಾರಕ್ಕೆ ಛೀಮಾರಿ ಹಾಕಿರುವುದನ್ನು ನಾವು ನೋಡಬಹುದಾಗಿದೆ. ಮತ್ತೆ ಡಿಸ್ಕ್ರಿನರಿ ಕೋಟಾ ಅಂದರೆ ವಿವೇಚನ್ ಕೋಟಾದಲ್ಲಿ ಏನು ಸೈಟುಗಳನ್ನು ಕೊಟ್ಟಿದ್ದಾರೆ ಅದನ್ನು ಹೈಕೋರ್ಟ್ ಸರ್ಕಾರಕ್ಕೆ ನೋಟಿಸ್ ಕೊಟ್ಟಿದ್ದರೆ, ಯಾವ್ಯಾವ ಅಧಿಕಾರಿಗಳಿಗೆ ನೀವು ಡಿಸ್ಕ್ರಿಷನರಿ ಕೋಟಾ ಅಧಿಕಾರವನ್ನು ಕೊಟ್ಟಿದ್ದೀರಿ, ಬಿ.ಡಿ.ಎ.ನವರಿಗೆ ಹೈಕೋರ್ಟ್ ನೋಟಿಸ್ ಕೊಟ್ಟಿರುವುದನ್ನು ನೋಡಿರಬಹುದು. ಅಷ್ಟೇ ಅಲ್ಲ ಪ್ರಥಮ ಬಾರಿಗೆ ಸುಪ್ರೀಂಕೋರ್ಟ್‌ನವರು ಮುಖ್ಯಮಂತ್ರಿಗಳಿಗೆ ನೋಟಿಸ್ ಕೊಟ್ಟಿರುವುದು ಇತಿಹಾಸದಲ್ಲೇ ಮೊದಲನೆಯದೆಂದು ನಾನು ಹೇಳುತ್ತೇನೆ. ಇಂತಹ ಒಂದು ಹ್ಯುಮಿಲಿಯೇಟಿಂಗ್ ಕಂಡಿಶನ್ ಯಾವ ಮುಖ್ಯಮಂತ್ರಿಗಳಿಗೂ ಬಂದಿರಲಿಲ್ಲ. ಅಂದರೆ ಈ ಒಂದು ಕೃತ್ಯದಿಂದ ಸರ್ಕಾರಕ್ಕೆ ಎಷ್ಟೊಂದು ಅಪಮಾನವಾಗಿದೆ ಎಂದರೆ ಇವತ್ತು ಇಡೀ ರಾಜ್ಯವೇ ತಲೆತಗ್ಗಿಸುವಂಥ ಕೆಲಸವನ್ನು ಮಾಡಿದ್ದಾರೆ. ನಂತರ ಐ.ಎ.ಎಸ್. ಸೆಲೆಕ್ಷನ್ ಆಯಿತು. ರಾಜ್ಯ ಆಡಳಿತ ಸೇವೆಯಿಂದ ಕೇಂದ್ರ ಸರ್ಕಾರದ ಐ.ಎ.ಎಸ್.ಗೆ ಬಡ್ತಿ ಕೊಡತಕ್ಕಂಥ ಪ್ರಕ್ರಿಯೆಯಲ್ಲಿ ಈ ಸರ್ಕಾರ ಕೆಲವು ಅಧಿಕಾರಿಗಳನ್ನು ಭ್ರಷ್ಟಾಚಾರ ಕೃತ್ಯದಿಂದ ಈ ಆಯ್ಕೆ ಮಾಡಿರತಕ್ಕಂಥಾದ್ದನ್ನು ಇವತ್ತು ಕೆಲವರು ಸುಪ್ರೀಂ ಕೋರ್ಟ್‌ಗೆ ಚಾಲೆಂಜ್ ಮಾಡಿದ ಮೇಲೆ ಅದರ ಬಗ್ಗೆ ನೋಟೀಸ್ ಕೊಟ್ಟಿರತಕ್ಕಂಥಾದ್ದು ಇದೆ. ಅವರಲ್ಲಿ ಒಬ್ಬ ಕೇಂದ್ರ ಯು.ಪಿ.ಎಸ್.ಸಿ. ಮೆಂಬರ್, ಅವರ ಹೆಸರು ಸುಭೀರ್‌ದತ್ತ. ಅವರು ಕೇಂದ್ರದ ಸರ್ಕಾರದ ನಿವೃತ್ತ ರಕ್ಷಣಾ ಇಲಾಖೆಯ ಕಾರ್ಯದರ್ಶಿಯಾಗಿದ್ದವರು ಇವತ್ತು ಯು.ಪಿ.ಎಸ್.ಸಿ. ಸದಸ್ಯರಾಗಿದ್ದಾರೆ. ಅವರು 2003ಕ್ಕೆ ಕರ್ನಾಟಕಕ್ಕೆ ಅಲಾಟ್‌ಮೆಂಟ್ ಮಾಡುತ್ತಾರೆ. ಐ.ಎ.ಎಸ್., ಐ.ಪಿ.ಎಸ್. ಸೆಲೆಕ್ಷನ್‌ಗಳಿದ ಆ ವರ್ಷ ಪೂರ್ತಿ ಆ ಅಧಿಕಾರಿ ಅದಕ್ಕೆ ಛೇರ್ಮನ್ ಆಗಿ ಬರುತ್ತಾರೆ. ಇವರು ಐ.ಪಿ.ಎಸ್. ಸೆಲೆಕ್ಷನ್ ಅಧಿಕಾರಿಯಾಗಿ ಬಂದ ತಕ್ಷಣ ಅವರನ್ನು ಬುಕ್

ಮಾಡುವುದಕ್ಕೋಸ್ಕರ, ಮುಂದೆ ಐ.ಪಿ.ಎಸ್. ಬರುತ್ತಾ ಇದೆ, ಅವರೇ ಇರುತ್ತಾರೆ ಎಂದು ತಿಳಿದುಕೊಂಡು ಅವರಿಗೆ ಎಷ್ಟು ಲಕ್ಷ ರೂಪಾಯಿಗಳದ್ದು ಸೈಟು ಕೊಟ್ಟಿದ್ದಾರೆ ಎಂದರೆ, ಹತ್ತು ಲಕ್ಷ ಬೆಲೆ ಬಾಳುವ ಸೈಟನ್ನು ಕೊಟ್ಟಿದ್ದಾರೆ. ಎಂಭತ್ತು ಲಕ್ಷ ರೂಪಾಯಿ ಬೆಲೆಬಾಳತಕ್ಕಂಥ ಸೈಟ್‌ನ್ನು ಹತ್ತು ಲಕ್ಷ ರೂಪಾಯಿಗೆ ಅವರಿಗೆ ಕೊಟ್ಟರು. ಅವರ ಜತೆಗೆ ಇನ್ನೊಬ್ಬರು ಟಿ.ಆರ್. ಪ್ರಸಾದ್ ಎಂದು ನಿವೃತ್ತ ಕ್ಯಾಬಿನೆಟ್ ಕಾರ್ಯದರ್ಶಿಯವರಾಗಿದ್ದು ಅವರಿಗೂ ಒಂದು ಸೈಟ್‌ನ್ನು ಕೊಟ್ಟಿದ್ದಾರೆ. ಅದರ ಬಗ್ಗೆಯೂ ಸುಪ್ರೀಂ ಕೋರ್ಟ್‌ನವರು ಛೀಮಾರಿ ಹಾಕಿ ನಿಮಗೆ ನೋಟೀಸ್ ಕೊಟ್ಟಿರುತ್ತಾರೆ. ನನಗನ್ನಿಸುತ್ತಿದೆ ಏನೆಂದರೆ ಇದರಲ್ಲಿ ಯಾವುದಾದರೂ ಒಂದು ಯೋಜನೆಯನ್ನು ಕಾನೂನಿನ ಒಳಗಡೆ, ನಿಯಮಾವಳಿ ಪ್ರಕಾರ ಮಾಡದಿದ್ದರೆ ಅದು ಯಾವುದೂ ಸಹ ಹೈಕೋರ್ಟಿನಲ್ಲಾಗಲೀ, ಅಥವಾ ಸುಪ್ರೀಂ ಕೋರ್ಟಿನಲ್ಲಾಗಲೀ ಪ್ರಶ್ನೆಯಾಗುತ್ತಿರಲಿಲ್ಲ. ಇವತ್ತು ನೀವು ಇಷ್ಟೊಂದು ಏನೇನು ಕ್ರಮ ತೆಗೆದುಕೊಂಡಿದ್ದೀರಿ, ಪ್ರತಿಯೊಂದು ಕೂಡ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನೆಯಾಗಿ ಇವತ್ತು ಸರ್ಕಾರವನ್ನು ಪೇಚಿಗೆ ಸಿಕ್ಕಿಸಿದ್ದೀರಿ. ನಾನು ಹೇಳಿದ ಹಾಗೆ ಅದು ಕೃಷ್ಣಾ ಪ್ರೊಜೆಕ್ಟ್ ಇರಬಹುದು, ಕಾವೇರಿ ಇಶ್ಯು ಇರಬಹುದು, ಆಶ್ರಯ ಕಮಿಟಿಯನ್ನು ರದ್ದುಮಾಡಿರತಕ್ಕಂಥಾದ್ದು ಇರಬಹುದು, ರಾಜಕುಮಾರ್ ಅವರನ್ನು ಬಿಡುಗಡೆ ಮಾಡಿರತಕ್ಕಂಥಾದ್ದು ಇರಬಹುದು, ಗ್ರಾಮೀಣ ಕೃಪಾಂಕದ್ದು ಇರಬಹುದು, ಸಿ.ಇ.ಟಿ. ವಿಚಾರದಲ್ಲಿ ಇರಬಹುದು, ಐ.ಎ.ಎಸ್. ಸೆಲೆಕ್ಷನ್ ಇರಬಹುದು, ಡಿನೋಟಿಫಿಕೇಶನ್‌ನಲ್ಲಿ ಇರಬಹುದು, ಮತ್ತೆ ಮೊನ್ನೆ ಮೊನ್ನೆ ಪತ್ರಿಕಾ ವರದಿಗಾರರಿಗೆ ಡಿಸ್ಕ್ರಿಶನರಿ ಕೋಟಾದಲ್ಲಿ ಸೈಟುಗಳನ್ನು ಕೊಟ್ಟಿರತಕ್ಕಂಥಾದ್ದನ್ನು ಇವತ್ತು ಚಾಲೆಂಜ್ ಮಾಡಿದ್ದಾರೆ. ಇದು ಯಾವ ಕ್ರಮದಲ್ಲಾಗಲೀ, ಇವತ್ತು ನಿಯಮಾವಳಿ ಪ್ರಕಾರ ಡೆಮಾಕ್ರಟಿಕ್ ಪ್ರಿನ್ಸಿಪಲ್ ಆಧಾರದ ಮೇಲೆ ಕಾನ್ಸ್ಟಿಟ್ಯೂಶನ್ ಪ್ರಕಾರ ಇವತ್ತು ಈ ಸರ್ಕಾರ ಕೆಲಸ ಮಾಡಿಲ್ಲ. This four and half years governace is totally unconstitutional, irrespective of all moral values, irrespective of all democratic values. ಇದು ನಿಮ್ಮ ಸರ್ಕಾರ ನಡೆದುಕೊಂಡಿರತಕ್ಕಂಥ ರೀತಿ. ಇದನ್ನು ಸರ್ಕಾರ ಇವತ್ತು ಜನರ ಮುಂದೆ ಹೇಳುತ್ತಿದೆ. ನಾನು ಮೊನ್ನೆ ಒಂದು ಹೇಳಿದ್ದೆ. ಇಂದು ಅನೈತಿಕ ಚಟುವಟಿಕೆಗಳಿಗೆ ಈ ಸರ್ಕಾರ ಉತ್ತೇಜನ ಕೊಟ್ಟಿರತಕ್ಕಂಥಾದ್ದಕ್ಕೆ ಇತ್ತೀಚೆಗೆ ನಡೆದುಕೊಂಡಿರತಕ್ಕಂಥ ದಾರಿಯೇ ಸಾಕ್ಷಿ. ಅದು ನಾಗಮಂಗಲದಲ್ಲಿ ಇರಬಹುದು, ಮತ್ತು ಶಿಡ್ಲಘಟ್ಟದ್ದು ಇರಬಹುದು, ಇದೊಂದು ಆಯಿತು. ನಮ್ಮ ಗುಲ್ಬರ್ಗಾದಲ್ಲಿ ಕೆಲವು ಲಂಬಾಣಿ ಮಕ್ಕಳನ್ನು ಮಾರಾಟ ಮಾಡಿರತಕ್ಕಂಥ ಕೃತ್ಯ ಈ ಸರ್ಕಾರದಲ್ಲಿ ಆಯಿತು. ಅದು ದುಡ್ಡಿಲ್ಲದೆ ಹಸಿವಿನಿಂದ ಮಕ್ಕಳನ್ನು ಮಾರಾಟ ಮಾಡಿರುವಂಥಾದ್ದು... ತಾವು ಸಮಾಜ ಕಲ್ಯಾಣ ಮಂತ್ರಿಯಾಗಿದ್ದೀರಿ. ಇಷ್ಟಾದ ಮೇಲೆ ಇವತ್ತು ಹೊಟ್ಟೆಪಾಡಿಗೋಸ್ಕರ ಜಾತ್ರೆಗಳಲ್ಲಿ ಇವತ್ತು ಅರೆಬೆತ್ತಲೆ ನೃತ್ಯ ಪ್ರದರ್ಶನ ಮಾಡುತ್ತಿದ್ದಾರೆ. ಈ ಮಟ್ಟಕ್ಕೆ ಇವತ್ತು ನಮ್ಮ ಸಮಾಜದ ವ್ಯವಸ್ಥೆ ಬಂದಿದೆ.

ಶ್ರೀ ಕಾಗೋಡ ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ತಾವು ತಪ್ಪಾಗಿ ಗ್ರಹಿಸಬೇಡಿ. ಈ ಪವಿತ್ರವಾದ ಈ ಸದನದಲ್ಲಿ ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ವಸ್ತುಸ್ಥಿತಿಯನ್ನು ಮರೆಮಾಚಿ ಹೇಳಬಾರದು. ಅಲ್ಲಿ ಹೊಟ್ಟೆಗೆ ಇಲ್ಲ ಎಂದು ಹೇಳಿ ಮಕ್ಕಳನ್ನು ಮಾರಾಟ ಮಾಡಿದಂಥ ಪ್ರಕರಣ ಇಲ್ಲ. ಅನೇಕ ಕಡೆಗಳಿಗೆ ನಾನು ಹೋಗಿ ಬಂದು ತಿಳಿದುಕೊಂಡಿದ್ದೇನೆ. ಈಗ ಹೆಣ್ಣು ಮಕ್ಕಳು ಹುಟ್ಟಿದರೆ ಅಥವಾ ಮಕ್ಕಳು ಬೇಡ ಎನ್ನುವ ಕಾರಣಕ್ಕೆ ಮಾಡಿರಬಹುದು.

ಆದರೆ ಹೊಟ್ಟೆಗಿಲ್ಲ ಎಂದು ಹೇಳಿ ಆ ರೀತಿಯಾದಂಥ ಪ್ರಕರಣಗಳು ಅಲ್ಲಿ ಆ ರೀತಿ ಬೇರೆ ಕಡೆ ಕೊಟ್ಟಿರುವುದು ನಿಜ ಅದು ಬೇರೆ ಬೇರೆ ಕಾರಣಗಳಿಗಾಗಿ ಮಾಡಿದ್ದಾರೆ. ಹೊಟ್ಟೆಗಿಲ್ಲದೇನೆ ಮಕ್ಕಳನ್ನು ಕೊಟ್ಟಿರತಕ್ಕಂಥ ಪ್ರಕರಣಗಳು ಯಾವುದೂ ಇಲ್ಲ.

ಶ್ರೀ ಎಸ್. ಎಸ್. ಪಾಟೀಲ್: ನೀವು ಹೇಳಿದ ಹಾಗೂ ಕೆಲವು ಇರಬಹುದು. ಹೊಟ್ಟೆಗಿಲ್ಲದೇನೂ ಮಾರಿದ್ದು ಕೆಲವು ಇರಬಹುದು.

ಶ್ರೀ ಕಾಗೋಡು ತಿಮ್ಮಪ್ಪ: ಇಲ್ಲ ಎಂದು ನಾನು ಹೇಳುತ್ತಿದ್ದೇನಲ್ಲಾ ಹೊಟ್ಟೆಗಿಲ್ಲದೇ ಮಾರಾಟ ಮಾಡಿದಂಥ ಪ್ರಕರಣಗಳು ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್: ನೀವು ಹೇಳಿದ ಹಾಗೆ ಎಲ್ಲವೂ ಇಲ್ಲ. ಹೊಟ್ಟೆಗಿಲ್ಲದೆಯೂ ಮಾರಿದ್ದಾರೆ. ಅದೂ ಇದೆ.

ಶ್ರೀ ಕಾಗೋಡು ತಿಮ್ಮಪ್ಪ: ಅದು ನಿಮ್ಮ ವಾದ.

ಶ್ರೀ ಎಸ್.ಎಸ್. ಪಾಟೀಲ್: ಇಲ್ಲದಿದ್ದರೆ ಮಾರುವ ಪ್ರಸಂಗ ಹೇಗೆ ಬಂತು?

ಶ್ರೀ ಬಿ. ಸೋಮಶೇಖರ್: ಏಕೆಂದರೆ ನೀವು ಬಹಳ ಸಮೃದ್ಧಿಯಿಂದ ರಾಜ್ಯವನ್ನು ನಾವು ನಡೆಸಿಕೊಂಡಿದ್ದೇವೆ, ಬಹಳ ಆರ್ಥಿಕ ಬೆಳವಣಿಗೆಯಾಗಿದೆ, ಯಾವುದೇ ರೀತಿಯ ಕಾನೂನು ಸುವ್ಯವಸ್ಥೆ ಕೆಟ್ಟಿಲ್ಲ ಎಂದು ಏನು ಹೇಳಿದ್ದೀರಲ್ಲಾ, ಇದೆಲ್ಲಾ ಎಷ್ಟೆಷ್ಟು ಅನೈತಿಕ ಚಟುವಟಿಕೆಗಳು ಈ ಅವಧಿಯಲ್ಲಿ ಆಗಿವೆ. ನಿಮ್ಮ ಪೊಲೀಸ್ ಇಲಾಖೆ ಎಷ್ಟು ಹಗುರವಾಗಿದೆ ಎಂದು ನಾನು ಇದನ್ನು ಹೇಳತಕ್ಕಂಥಾದ್ದು. ಅದರ ಬಗ್ಗೆ ಇಂತಹ ಕೃತ್ಯಗಳು ಬಹಳ ನಡೆದಿವೆ. ಇನ್ನು ನಮ್ಮ ಪಟ್ಟಣಗಳಲ್ಲಿ ಅದು ವೀಡಿಯೊ ಗೇಮ್ಸ್ ಇರಬಹುದು, ಮತ್ತೆ ಇನ್ನೊಂದು ಲೈವ್‌ಬ್ಯಾಂಡ್ ಇರಬಹುದು, ಅನೈತಿಕ ಚಟುವಟಿಕೆಗಳ ಅನಧಿಕೃತ ಕ್ಲಬ್‌ಗಳು ಇರಬಹುದು, ಇವುಗಳು ಈ ಸರ್ಕಾರದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಾ ಇರುವಂಥಾದ್ದು....

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮ ಸರ್ಕಾರದಲ್ಲಿ ಇರಲಿಲ್ಲವೆ? ನೀವು ಸ್ವರ್ಗವನ್ನೇ ನಿರ್ಮಾಣ ಮಾಡಿದ್ದಿರಲ್ಲಾ?

ಶ್ರೀ ಎಸ್. ಸುರೇಶ್‌ಕುಮಾರ್: ನನಗೆ ಚೆನ್ನಾಗಿ ನೆನಪಿದೆ ಶ್ರೀ ಸಿಂಧ್ಯ ಅವರು ಗೃಹಸಚಿವರಾಗಿದ್ದಾಗ ಬೆಂಗಳೂರಿನ ಎಲ್ಲಾ ಲೈವ್‌ಬ್ಯಾಂಡ್‌ಗಳ ಮೇಲೆ ಧಾಳಿ ಮಾಡಿ ಬೆಂಗಳೂರಿನಲ್ಲಿ ಒಂದೇ ಒಂದು ಲೈವ್ ಬ್ಯಾಂಡ್ ಕೂಡ ನಡೆಯುತ್ತಿರಲಿಲ್ಲ ಎನ್ನುವುದು ಬೆಂಗಳೂರಿನಲ್ಲಿ ಎಲ್ಲರಿಗೂ ಕೂಡ ಗೊತ್ತಿದೆ. ನಾನು ನಿಜವಾಗಿಯೂ ಈ ಸಂದರ್ಭದಲ್ಲಿ ಮಾನ್ಯ ಸಿಂಧ್ಯರವರಿಗೆ ಮತ್ತು ಆ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಇವತ್ತು ಬೆಂಗಳೂರಿನಲ್ಲಿ ಲೈವ್‌ಬ್ಯಾಂಡ್‌ಗಳು ರಾರಾಜಿಸುತ್ತಿವೆ. ಎಲ್ಲಾ ಲೈವ್‌ಬ್ಯಾಂಡ್‌ಗಳೂ ಅಪರಾಧಿಗಳ ತಾಣ ಎನ್ನುವುದು ಪೊಲೀಸರಿಗೂ ಗೊತ್ತಿದೆ. ಪೊಲೀಸ್‌ನವರೆ ಹೇಳುತ್ತಾರೆ. ನೀವು ಒಂದು ಕೆಲಸ ಮಾಡಿ. ನೀವು ನಮಗೆ ಅಪ್ಲಿಕೇಶನ್ ಕೊಡಿ. ನಾವು ನಿಮ್ಮ ಅಪ್ಲಿಕೇಶನ್‌ನ್ನು ರಿಜೆಕ್ಟ್ ಮಾಡುತ್ತೇನೆ. ನೀವು ಹೈಕೋರ್ಟಿಗೆ ಹೋಗಿ. ಹೈಕೋರ್ಟಿನಿಂದ ಆರ್ಡರ್ ತನ್ನಿ ಮತ್ತು ಲೈವ್ ಬ್ಯಾಂಡ್ ಪ್ರಾರಂಭ ಮಾಡಿ ಎಂದು ಅವರೇ ಹೇಳಿಕೊಡುತ್ತಾರೆ. ಇವತ್ತು ಬೆಂಗಳೂರಿನ ಪೊಲೀಸ್‌ನವರು ಕೊಡುತ್ತಿರುವ ಮಾರ್ಗದರ್ಶನ ಮೇಲೆ ಈ ಲೈವ್‌ಬ್ಯಾಂಡ್‌ಗಳು ನಡೆಯುತ್ತಿವೆ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ತಾವು ದಯವಿಟ್ಟು ಇದನ್ನು ಅರ್ಥಮಾಡಿಕೊಳ್ಳಿ. ರೆಸಿಡೆನ್ಸಿಯಲ್ ಏರಿಯಾಗಳಲ್ಲಿ ಇವತ್ತು

ಲೈವ್‌ಬ್ಯಾಂಡ್‌ಗಳು ನಡೆಯುತ್ತವೆ. ರಾತ್ರಿ ಹನ್ನೊಂದು-ಹನ್ನೊಂದೂವರೆ ಗಂಟೆಯವರೆಗೂ ಲೈವ್‌ಬ್ಯಾಂಡ್‌ಗಳು ನಡೆದು ಈಚೆಗೆ ಬರುವಾಗ ಉನ್ಮತ್ತರಾಗಿರುತ್ತಾರೆ ಮತ್ತು ಆ ಜನ ಏನು ಮಾಡಬೇಕು? ಸುತ್ತಮುತ್ತ ಇರುವ ಹೆಣ್ಣುಮಕ್ಕಳು ಏನು ಮಾಡಬೇಕು? ಇದನ್ನು ಕೂಡ ನಿಯಂತ್ರಿಸುವುದಿದ್ದಕ್ಕೆ ಸರ್ಕಾರಕ್ಕೆ ಆಗುವುದಿಲ್ಲ ಎಂದರೆ, ಕೋರ್ಟಿನ ಆದೇಶ ಇದೆ ಎಂದು ಹೇಳಿದರೆ ಇದಕ್ಕೆ ಏನು ಹೇಳಬೇಕು? ನಿಮಗೆ ಅಧಿಕಾರ ಇದೆ, ಆ ಲೈವ್‌ಬ್ಯಾಂಡ್‌ನಲ್ಲಿ ನಡೆಯುತ್ತಿರುವ ಬೇರೆಬೇರೆ ಚಟುವಟಿಕೆಗಳನ್ನು ನಿಯಂತ್ರಣದಲ್ಲಿ ಇಡುವುದಕ್ಕೆ ನಿಮಗೆ ಶಕ್ತಿ ಇದೆ. ಅದನ್ನೂ ಕೂಡ ಮಾಡುವುದಕ್ಕೆ ಆಗುವುದಿಲ್ಲ ಅಂತಂದರೆ ಅವರು ಹೇಳಿದ ಹಾಗೆ You have no normal authority to continue. ದಯವಿಟ್ಟು ಈಗಲಾದರೂ ಕೂಡ ನೀವು ತೀರ್ಮಾನವನ್ನು ತೆಗೆದುಕೊಳ್ಳಿ. ಈ ಚಟುವಟಿಕೆಗಳನ್ನು ನಡೆಸುವುದಕ್ಕೆ ನಾವು ಬಿಡುವುದಿಲ್ಲ ಎಂದು ಈಗಲಾದರೂ ಕೂಡ ತೀರ್ಮಾನ ತೆಗೆದುಕೊಂಡು ನೀವು ಘೋಷಿಸಿ.

ಚೇರ್ಮನ್: ಒಂದು ನಿಮಿಷ. ಮಾನ್ಯ ಸುರೇಶ್‌ಕುಮಾರ್ ಅವರು ಈ ಲೈವ್‌ಬ್ಯಾಂಡ್‌ಗಳು ಎಲ್ಲಾ ಒಳ್ಳೆಯ ಕ್ಷೇತ್ರದಲ್ಲಿ ನಡೆಯುತ್ತಿವೆ ಎಂದು ಈಗ ಪ್ರಸ್ತಾಪ ಮಾಡಿದರು. ಅವರು ಹೈಕೋರ್ಟಿನ ಆರ್ಡರ್‌ನ್ನು ತೆಗೆದುಕೊಂಡು ಬರುತ್ತಾರೆ, ಇದನ್ನು ಕಂಟ್ರೋಲ್ ಮಾಡುವ ಸ್ಥಿತಿಯಲ್ಲಿ ಇವರು ಇಲ್ಲ ಎಂದು ತಾವೇನೋ ಪ್ರಸ್ತಾಪ ಮಾಡಿದಿರಿ. ಎಲ್ಲೆಲ್ಲಿ ಲೈವ್‌ಬ್ಯಾಂಡ್‌ಗಳು ನಡೆಯುತ್ತಿವೆಯೋ ಆ ಲೋಕ್ಯಾಲಿಟಿಯವರಿಂದ ಏನಾದರೂ ಸರ್ಕಾರಕ್ಕೆ ದೂರು ಬಂದಿದೆಯಾ?

ಶ್ರೀ ಎಸ್. ಸುರೇಶ್‌ಕುಮಾರ್: ಈಗ ಉದಾಹರಣೆಗೆ ಬಸವೇಶ್ವರ ನಗರದಲ್ಲಿ ನಾವು ನಾಗರೀಕರನ್ನು ಸೇರಿಸಿಕೊಂಡು ಆವತ್ತು ಒಂದು ಹೋರಾಟವನ್ನು ಮಾಡಿ ಒಂದು ಪಿಟಿಶನ್‌ನ್ನು ಪೋಲೀಸ್ ಕಮಿಷನರ್ ಅವರಿಗೆ, ಪೋಲೀಸ್ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ನಾವು ಇನ್ನು ಹದಿನೈದು ದಿವಸಗಳಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅಧಿಕಾರಿಗಳು ಹೇಳಿದರು. ಆದರೆ ಹದಿನೈದು ದಿವಸ ಆದಮೇಲೆ ನಮಗೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ನನ್ನ ಪ್ರಕಾರ ಪೋಲೀಸರಿಗೆ ದೂರು ಕೊಟ್ಟರೆ ಅದು ಸರ್ಕಾರವೆಂದು ನನ್ನ ಭಾವನೆ. ಆದ್ದರಿಂದ ಸರ್ಕಾರಕ್ಕೆ ನಾವು ತಿಳಿಸಿದ್ದೇವೆ ಮತ್ತು ನಾಗರಿಕರಿಗೂ ತಿಳಿಸಿದ್ದಾರೆ.

ಚೇರ್ಮನ್: ಪೋಲೀಸರಿಗೆ ಕೊಡಲೇಬೇಕು. ಸರ್ಕಾರಕ್ಕೆ ಎಂದು ಮುಖ್ಯಮಂತ್ರಿಗಳಿಗೆ ಬಂದು ಯಾರೂ ಕೊಡುವುದಿಲ್ಲ. ಆದರೆ ಮಾನ್ಯ ಸುರೇಶ್‌ಕುಮಾರ್ ಅವರು ಜನರನ್ನು ಕರೆದುಕೊಂಡು ಬಂದು ಕೊಟ್ಟರೆ ಅದು ರಾಜಕೀಯ ಆಗುತ್ತದೆ. ಆ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ಗಣ್ಯರು ಇದರ ಬಗ್ಗೆ ಏನಾದರೂ ಆಕ್ಷೇಪಣೆಯನ್ನು ಎತ್ತಿದ್ದಾರಾ?

ಶ್ರೀ ಕಾಗೋಡು ತಿಮ್ಮಪ್ಪ: ಇದನ್ನು ವಿಚಾರ ಮಾಡಿಕೊಂಡಿ ನಾಳೆ ಹೇಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್: ಇಲ್ಲ. ನಾನೇನು ಸರ್ಕಾರದಲ್ಲಿದ್ದೇನಾ ಟೈಮ್ ತೆಗೆದುಕೊಳ್ಳುವುದಕ್ಕೆ? ಈ ಕ್ಷೇತ್ರದ ಗಣ್ಯವ್ಯಕ್ತಿಗಳು, ಹೆಣ್ಣುಮಕ್ಕಳು ಸ್ಥಳೀಯ ಪೋಲೀಸ್ ಠಾಣೆಗೆ ಹೋಗಿ ಸ್ಥಳೀಯ ಡಿ.ಸಿ.ಪಿ. ಹತ್ತಿರ ಹೋಗಿ ದಯವಿಟ್ಟು ನಮ್ಮನ್ನು ಈ ಒಂದು ಕಾಟದಿಂದ ಪಾರು ಮಾಡಿ, ಈ ಕಷ್ಟದಿಂದ ಪಾರು ಮಾಡಿ ಎಂದು ಬೇಡಿಕೊಂಡು ಪತ್ರವನ್ನು ಕೊಟ್ಟಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ: ಕರ್ನಾಟಕ ರಾಜ್ಯದಲ್ಲಿ ಲೈವ್‌ಬ್ಯಾಂಡ್‌ಗಳು ಅಧಿಕೃತವಾಗಿಯೇ ನಡೆಯುತ್ತಿವೆ. ಈಗಂತೂ ಇನ್ನೂ ಅಧಿಕೃತ ಆಗಿಬಿಟ್ಟಿತು. ಈಗ ಕಾಂಗ್ರೆಸ್ ಪಕ್ಷದ ಚುನಾವಣಾ

ಪ್ರಚಾರ ಸಭೆಗೆ ಕ್ಯಾಬರೆ ಮಾಡುವವರನ್ನು, ಲೈವ್‌ಬ್ಯಾಂಡ್‌ನವರನ್ನೆಲ್ಲ ಅಧಿಕೃತವಾಗಿ ಆಹ್ವಾನ ಮಾಡುತ್ತಿದ್ದಾರೆ. ಅಂದಮೇಲೆ ಇಡೀ ದೇಶದ ಮೂಲೆ ಮೂಲೆಯಿಂದೆಲ್ಲಾ ಇಲ್ಲಿಗೆ ಬರಬಹುದು. ಬಹುಶಃ ಹೀಗಾಗಿ ಇದೇನೂ ತೊಂದರೆ ಇಲ್ಲ.

ಚೇರ್ಮನ್: ಒಂದು ನಿಮಿಷ. ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಕ್ಯಾಬರೆ ನಡೆಯಿತು ಎಂದು ಹೇಳುತ್ತಾ ಇದ್ದೀರಲ್ಲಾ, ಅಲ್ಲಿ ನೋಡುತ್ತಾ ಕೂತಿದ್ದವರು ಯಾರು ಎಂದು ಹೇಳಲಿಲ್ಲವಲ್ಲಾ?

1.30 ಪಿ.ಎಂ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಸುರೇಶ್‌ಕುಮಾರ್‌ರವರು ಹೇಳಿದಂತಹ ಮಾತು ಕೇಳಿದರೆ ಆ ನಗರಕ್ಕೆ ಹೆಸರು ಯಾವುದು ಇದೆ, ಆ ಬಸವೇಶ್ವರ ನಗರದಲ್ಲಿ ಇದು ನಡೆಯುತ್ತದೆ. ಮೊದಲನೇಯದು. ಆಮೇಲೆ ಬಸವಣ್ಣನವರು ಸೂಳೆಯರನ್ನೆಲ್ಲಾ ಬದಲಾವಣೆ ಮಾಡಿ ಶರಣೀಯರನ್ನಾಗಿ ಮಾಡಿದ್ದಾರೆ. ಅಂತಹ ನಗರದಲ್ಲಿ ಇವರು ಈ ಕೆಲಸ ನಡೆಸಿದ್ದಾರೆ.

ಶ್ರೀ ಎಂ. ಮಹದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೇ ಒಂದು ನಿಮಿಷ. ಇಷ್ಟೆಲ್ಲಾ ವ್ಯವಹಾರ ನಡೆಯುತ್ತಿರತಕ್ಕಂಥ ಊರಿಗೆ ಬಸವೇಶ್ವರ ನಗರ ಎಂದು ಏಕೆ ಹೆಸರು ಇಡುವುದಕ್ಕೆ ಹೋದಿರಿ? ನಾವು ಪಶು ವಿಶ್ವವಿದ್ಯಾನಿಲಯಕ್ಕೆ ಬಸವೇಶ್ವರ ಎಂದು ಹೆಸರು ಇಡಲು ಹೋದರೆ ನೀವು ಅಬ್ಜೆಕ್ಟ್ ಮಾಡುತ್ತೀರಿ. ಇಷ್ಟೆಲ್ಲಾ ನಡೆಯುತ್ತಿರುವ ಊರಿನಲ್ಲಿ ಬಸವೇಶ್ವರ ನಗರ ಎಂದು ಇಟ್ಟಿರುವುದಕ್ಕೆ ನೀವು ಏಕೆ ಅಬ್ಜೆಕ್ಟ್ ಮಾಡಲಿಲ್ಲ?

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಮಾನ್ಯ ಅಧ್ಯಕ್ಷರೇ, ಇದು ಸರಿಯಲ್ಲ. ಮಾನ್ಯ ಸಚಿವರಾದ ಮಹದೇವ್‌ರವರು ಹೇಳುವುದು. ಅದಕ್ಕೂ ಇದಕ್ಕೂ ಹೋಲಿಸಬೇಡಿ. ಬಸವೇಶ್ವರ ನಗರ ಅಂತ ಹೆಸರು ಇಟ್ಟಿದ್ದಾರೆ, ಅಲ್ಲಿಂದ ವ್ಯವಹಾರಗಳು ನಡೆಯುತ್ತಿವೆ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ. ಅದು ಬಸವೇಶ್ವರ ನಗರ ಎಂದು ಇಡಬೇಕಾದರೆ ಆಗ ಒಳ್ಳೆಯ ಅಭಿಪ್ರಾಯ ಇತ್ತು.

ಶ್ರೀ ಎಂ. ಮಹದೇವ್: ಒಂದು ಸಣ್ಣ ನಗರಕ್ಕೆ ಬಸವೇಶ್ವರರ ಹೆಸರು ಇಡಬೇಡಿ ಎಂದು ನೀವು ಯಾವತ್ತಾದರೂ ಅಬ್ಜೆಕ್ಟ್ ಮಾಡಿದ್ದೀರಾ? ಇಲ್ಲ. ಮಾಡಬೇಕಾಗಿತ್ತು. ಏಕೆ ಮಾಡಲಿಲ್ಲ ನಾವು ಏನೋ ಒಂದು ಬಸವೇಶ್ವರ ವಿಶ್ವವಿದ್ಯಾನಿಲಯ ಎಂದು ಮಾಡಿದರೆ ನೀವು ಏಕೆ ಆ ಹೆಸರನ್ನು ಸಣ್ಣ ವಿಶ್ವವಿದ್ಯಾನಿಲಯಕ್ಕೆ ಇಡುತ್ತೀರಿ ಎಂದು ನೀವು ಮತ್ತು ಮಾನ್ಯ ಎಸ್.ಎಸ್. ಪಾಟೀಲರು ಕೇಳುತ್ತೀರಿ.

ಛೇರ್ಮನ್: ಮಾನ್ಯ ಬೆಲ್ಲದ್‌ರವರೇ, ನಾನು ಹೇಳುವುದನ್ನು ಕೇಳಿ. ಬಸವೇಶ್ವರರ ಹೆಸರನ್ನು ಆ ಜಾಗಕ್ಕೆ ಸಂಬಂಧಪಟ್ಟ ಹಾಗೆ ಬಸವೇಶ್ವರರ ಹೆಸರನ್ನು ಇಟ್ಟಿರಬಹುದು, ಸದಾಶಿವ ನಗರ ಎಂದು ಹೆಸರು ಇಟ್ಟಿರಬಹುದು. ದೇವರಾಜ ಅರಸ್‌ನಗರ ಎಂದು ಹೆಸರು ಇಟ್ಟಿರಬಹುದು, ಇಲ್ಲಿ ಇವೆಲ್ಲಾ ನಡೆಯಬಾರದು, ಅವರು ಹೇಳಿದ ವಿಚಾರಗಳು ನಡೆಯಬೇಕು. ಆದರೆ ಬಸವೇಶ್ವರರ ಬಗ್ಗೆ ಏನಾದರೂ ಅಗೌರವವಾಗುಂತಹ ವ್ಯವಸ್ಥೆ ಅವರ ಜನ್ಮ ಸ್ಥಳದಲ್ಲಿ ಆಗಲಿ ಅಥವಾ ಬೇರೆ ಎಲ್ಲಿಗಾದರೂ ಆಗಲಿ ನಡೆದರೆ ಆಕ್ಷೇಪಣೆ ಮಾಡಬೇಕು. ನಗರ ಅಥವಾ ಊರಿಗೆ ಯಾವುದೇ ಹೆಸರನ್ನು ಇಟ್ಟುಕೊಳ್ಳಬಹುದು.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಮಾನ್ಯ ಅಧ್ಯಕ್ಷರೇ, ಇಂತಹ ನಗರದಲ್ಲಿ, ಇಂತಹ ಏರಿಯಾದಲ್ಲಿ ಇಂತದ್ದು ನಡೆಯುವುದರಿಂದ ಅಲ್ಲಿನ ಪರಿಸರ ಎಲ್ಲಾ ಹಾಳಾಗುತ್ತಿದೆ.

ಛೇರ್ಮನ್: ಬಸವೇಶ್ವರರ ಹೆಸರನ್ನು ....

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಮಾನ್ಯ ಅಧ್ಯಕ್ಷರೇ, ತಾವು ಅಧ್ಯಕ್ಷರ ಪೀಠದಲ್ಲಿ ಕುಳಿತುಕೊಂಡು ಸರ್ಕಾರ ಹೇಳಬೇಕಾದ ಮಾತನ್ನು ತಾವು ಹೇಳಬಾರದು. ತಾವು ಅಧ್ಯಕ್ಷರ ಸ್ಥಾನದಲ್ಲಿದ್ದೀರಿ. ಈಗ ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ. ಒಳ್ಳೆಯ ನಾಗರೀಕರು ಇರುವಂತಹ ಜಾಗದಲ್ಲಿ ಇಂತಹ ಅವ್ಯವಹಾರಗಳು ನಡೆಯುತ್ತಿವೆ ಇದರಿಂದ ಪರಿಸರ ಹಾಳಾಗುತ್ತದೆ, ಜನರಿಗೆ ಅಲ್ಲಿ ತೊಂದರೆಯಾಗಿ ಅಲ್ಲಿ ಹೋರಾಟ ಮಾಡುತ್ತಿದ್ದಾರೆ. ಸಂಬಂಧಿಸಿದ ಪೊಲೀಸ್ ಅಧಿಕಾರಿಗಳಿಗೆ ಅವರು ಮನವಿ ಕೊಟ್ಟಿದ್ದಾರೆ. ಆದರೂ ಅವರು ಅದನ್ನು ಕಂಟ್ರೋಲ್ ಮಾಡಿಲ್ಲ. ಇವತ್ತು ಕೊಲೆ ಸುಲಿಗೆ ಆಗಲಿಕ್ಕೆ ಇಂತಾದ್ದೆಲ್ಲಾ ನಡೆಯುತ್ತಿರುವುದೇ ಕಾರಣ. ಇವತ್ತು ದರೋಡೆ, ಸುಲಿಗೆ ಮಾಡುತ್ತಿದ್ದಾರಲ್ಲಾ ಯುವಕರು, ಇವರಿಗೆ ಇವೆಲ್ಲಾ ಪ್ರಚೋದನೆ ಮಾಡುವಂತಹ ಕಾರ್ಯಕ್ಕೆ ಸರ್ಕಾರ ಒತ್ತು ಕೊಡುತ್ತಿದೆ ಎಂದು ನಾನು ಹೇಳಬೇಕಾಗುತ್ತದೆ. ದಯವಿಟ್ಟು ಅವುಗಳನ್ನು ಬಂದ್ ಮಾಡಬೇಕಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್: ನನಗೆ ಒಂದೇ ಒಂದು ಸಮಾಧಾನ, ಮಾನ್ಯ ಕಾಗೋಡು ತಿಮ್ಮಪ್ಪನವರು ನನ್ನ ಮಾತನ್ನು ಕೇಳಿಸಿಕೊಂಡು ಹೊರಟು ಹೋಗಿದ್ದಾರೆ. ಇವತ್ತು ಮಧ್ಯಾಹ್ನದಿಂದ ನಿಲ್ಲಿಸುತ್ತಾರಾ ನೋಡೋಣ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಧ್ಯಕ್ಷರೇ, ಮಾನ್ಯ ಸುರೇಶ್ ಕುಮಾರ್‌ರವರು ಬಹಳ ಮುಖ್ಯವಾದುದ್ದನ್ನು ಹೇಳಿದರು. ಲೈವ್ ಬ್ಯಾಂಡ್ ಒಂದೇ ಅಲ್ಲ. ಇಡೀ ಬೆಂಗಳೂರು ನಗರದಲ್ಲಿ ಲೈವ್ ಬ್ಯಾಂಡ್ ವೈನ್ ಸ್ಟೋರ್ಸ್ ಹಗಲು ರಾತ್ರಿ ನಡೆಯುತ್ತಿದೆ. ತಮಗೂ ಗೊತ್ತಿದೆ ಎಂ.ಟಿ.ಆರ್. ಒಂದು ಪ್ರಸಿದ್ದವಾದ ಹೆಸರು ಇರುವ ಹೊಟೇಲ್ ಇದೆ. ಅದರ ಎದುರಿಗೆ ಪಕ್ಕದಲ್ಲಿ ಲೈವ್ ಬ್ಯಾಂಡ್, ರಾತ್ರಿ ಹಗಲು ನಡೆಯುತ್ತಿದೆ. ಮಾನ್ಯ ಗೃಹ ಮಂತ್ರಿಗಳು ಇಲ್ಲ. ಮಾಮೂಲಿ ಎಲ್ಲರಿಗೂ ಕೊಡುತ್ತಿದ್ದಾರೆ. ಮಾಮೂಲಿ. ಯಾರ್‍ಯಾರಿಗೆ ಎಂದು ನಾನು ಹೇಳಬೇಕಾದ್ದು ಇಲ್ಲ. ಮೇಲಿನವರೆಗೂ ಕೊಡಬೇಕು ಸ್ವಾಮಿ ಎಂದು ಅವರು ಹೇಳುತ್ತಾರೆ. ಏನು ನಡೆಯುತ್ತಿದೆ ಅಂದರೆ ಈ ಮಾಮೂಲಿ ವಸೂಲಿ ಮಾಡಿ ಪೊಲೀಸಿನವರು ರಾತ್ರಿ ಹಗಲು ಲೈವ್ ಬ್ಯಾಂಡ್ ನಡೆಸುವುದಕ್ಕೆ ಅನುವು ಮಾಡಿ ಕೊಟ್ಟಿದ್ದಾರೆ. ನಾನು ಒಂದು ಹೇಳುತ್ತೇನೆ ನೋಡಿ, ಇನ್‌ಫ್ಯಾಕ್ಟ್ ಈ ವೈನ್ ಸ್ಟೋರ್ಸ್‌ನಲ್ಲಿ ಹಗಲು ರೀಟೇಲ್ ಸೇಲ್ ಮಾಡುವಂತಿಲ್ಲ. ಅಂದರೆ ಹಗಲು ಅಷ್ಟೇ ರಾತ್ರಿ ಅಷ್ಟೇ. ರೀಟೇಲ್ ಅಂದರೆ ಬಾರ್‌ಗೆ ಹೋಗಬೇಕು. ಆದರೆ ನಮ್ಮ ಬಸವನಗುಡಿ ಕ್ಷೇತ್ರದಲ್ಲಿ ನಾನು ಹೇಳುತ್ತಿದ್ದೇನೆ. ಬಹಳ ದುಃಖಕರವಾದ ಸಂಗತಿ, ಅಲ್ಲಿ ಯಾವತ್ತೂ ವೈನ್ ಸ್ಟೋರ್‌ಗಳು ಇರಲಿಲ್ಲ. ವೈನ್ ಸ್ಟೋರ್‌ಗಳನ್ನು ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ಜಾಸ್ತಿಯಾಗಿವೆ. ಕೇಳುವವರು ಯಾರು? ನಾನು ಕಮೀಷನರ್‌ಗೆ ಹೇಳಿದೆ. ಎಕ್ಸೈಜ್ ಕಮೀಷನರ್‌ಗೆ ಹೇಳಿದೆ, ಡೆಪ್ಯೂಟಿ ಕಮೀಷನರ್‌ಗೆ ಹೇಳಿದೆ, ಅವರು ಆಯಿತು ನೋಡುತ್ತೇವೆಂದು ಹೇಳುತ್ತಾರೆ ಏನೂ ಮಾಡುತ್ತಿಲ್ಲ. ವೈನ್ ಸ್ಟೋರ್ಸ್ ಓಪನ್ ಮಾಡುವಂತಿಲ್ಲ. ಆಮೇಲೆ 9 ಗಂಟೆ 10 ಗಂಟೆ ಎಂದು ಹೇಳುತ್ತಾರೆ. ಟೈಮಿಂಗ್. ಆ ಟೈಮಿಂಗ್ ಯಾರೂ ಫಾಲೋ ಮಾಡುತ್ತಿಲ್ಲ. ಏಕೆಂದರೆ ಪೊಲೀಸಿನವರಿಗೆ ಮಾಮೂಲಿ ಕೊಡುತ್ತಾರೆ. ಈ ರೀತಿ ಬಹಳ ದುಃಖಕರವಾದ ಸಂಗತಿ ಈ ಸರ್ಕಾರದಲ್ಲಿ ನಡೆಯುತ್ತಿದೆ. ನಿಜವಾದ ಒಂದು ಸಂಗತಿ ಎಂದರೆ ಬೆಂಗಳೂರು ಅಂತೂ ಕ್ರೈಮ್ ಸಿಟಿಯಾಗುತ್ತದೆ ಮುಂದೆ.

ಶ್ರೀ ಎಸ್.ಎಸ್. ಪಾಟೀಲ್: ಲೈವ್ ಬ್ಯಾಂಡ್ ಎಲ್ಲೋ ಒಂದು ಕಡೆ ನಡೆದಿದೆ ಕಾಂಗ್ರೆಸ್ ಸಭೆಯಲ್ಲಿ ಅವರು ಕ್ಯಾಬರೆ ಮಾಡಿಸುತ್ತಾರೆ. ಈ ಮಟ್ಟಕ್ಕೆ ಇಳಿದಿದ್ದಾರೆ.

ಛೇರ್ಮನ್: ಮಾನ್ಯ ಪಾಟೀಲರೇ, ಮೊನ್ನೆ ಶ್ರೀಮತಿ ರಾಣಿ ಸತೀಶ್‌ರವರು ತಮ್ಮ ಬಗ್ಗೆ ಏನೋ ಒಂದು ಮಾತು ಹೇಳಿದರು. ತಾವೇಕೆ ಈ ವಯಸ್ಸಿನಲ್ಲಿ ಅದನ್ನೆಲ್ಲಾ ಯೋಚನೆ ಮಾಡುತ್ತೀರಿ ಎಂದು.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮಾನ್ಯ ಪಶು ಸಂಗೋಪನಾ ಸಚಿವರು ಬಸವಣ್ಣನವರ ಹೆಸರನ್ನು ಇಟ್ಟರೆ ನಾವು ಏಕೆ ವಿರೋಧ ಮಾಡುತ್ತೀರಿ ಎಂದು ಕೇಳಿದರು. ಮಾನ್ಯ ಅಧ್ಯಕ್ಷರೇ, ಇವರಿಗೆ ಏನಾದರೂ ಬದ್ಧತೆ ಇದ್ದರೆ ಗುಲ್ಬರ್ಗ ಯೂನಿವರ್ಸಿಟಿಗೆ ಬಸವಣ್ಣನವರ ಹೆಸರು ಇಡಿ ಆ ರೀತಿ ತೀರ್ಮಾನ ಮಾಡಿದ್ದೆವು ನಮ್ಮ ಸರ್ಕಾರವಿದ್ದಾಗ. ಆಗ ವಿರೋಧ ಮಾಡಿದವರು ಇವರೇ. ಇಲ್ಲಿ ಆಗಿ ಕುಳಿತಿದ್ದರು. ಅದು ನಮ್ಮ ವಾದ ಇರುವದು. ನಿಮಗೆ ಏನಾದರೂ ಬದ್ಧತೆ ಇದ್ದರೆ ಗುಲ್ಬರ್ಗ ಯೂನಿವರ್ಸಿಟಿಗೆ ಬಸವಣ್ಣನವರು ಹೆಸರು ಇಡಿ. ಸುಮ್ಮನೆ ಏನೋ ಒಂದು ಮಾಡುವುದಕ್ಕೆ ಹೋಗಬೇಡಿ. ಇದು ನಮ್ಮ ವಾದ ಇರುವುದು.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಮಾನ್ಯ ಮಹದೇವ್ ಅವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಬಹಳ ದಿವಸದಿಂದ, ಧಾರವಾಡ ಕೃಷಿ ವಿಶ್ವವಿದ್ಯಾಲಯ ಇದೆ. ಇಲ್ಲಿ ಯಾವಾಗ ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಬಸವೇಶ್ವರರ ಹೆಸರನ್ನು ಇಡಲು ವಿರೋಧ ಮಾಡಿದರೋ ಅಂದಿನಿಂದ ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಪ್ರಾರಂಭವಾಯಿದೋ ಅದು ಸತ್ಯ ಶುದ್ಧ ಕಾಯಕ ಮಾಡುವಂತಹ ಬಹು ಸಂಖ್ಯಾತರಿಗೆ ಅನುಕೂಲ ಮಾಡಿಕೊಡುವಂತಹ ಕೃಷಿ ವಿಶ್ವವಿದ್ಯಾಲಯ. ಮತ್ತು ಅದು ಎಲ್ಲಾ ಶರಣರ ಜಿಲ್ಲೆಗಳಿಗೆ ಒಳಗೊಂಡಂತಹ ಕೃಷಿ ವಿಶ್ವವಿದ್ಯಾಲಯ. ಅಂತಹ ಒಂದು ಒಂದು ವಿಜ್ಞಾನದ ಕೊಡುಗೆಯನ್ನು ಕೊಡುವಂತಹ ವಿಶ್ವವಿದ್ಯಾಲಯಕ್ಕೆ ಅವರ ಹೆಸರು ಇಡಿ ಎಂದು ನಾವು ಆಗಿನಿಂದಲ್ಲೂ ಕೇಳಿಕೊಂಡಿದ್ದೇನೆ. ಅದನ್ನು ಬಿಟ್ಟು ಇವತ್ತು ಏನೂ ಬೆಳವಣಿಗೆ ಆಗದೇ ಇರುವಂಥಾದ್ದು. ಮತ್ತು ಪಶು ವಿಶ್ವವಿದ್ಯಾಲಯಕ್ಕೆ ಅವರ ಹೆಸರು ಇಡುವಂಥಾದ್ದು ಸರಿಯಾದುದು ಅಲ್ಲ. ಏಕೆಂದರೆ ಬಸವಣ್ಣನವರ ವಿಚಾರದಲ್ಲಿ ಯಾವ ವಿಶ್ವವಿದ್ಯಾಲಯಕ್ಕೂ ಅವರ ಹೆಸರು ಇಡುವ ಅವಶ್ಯಕತೆ ಇಲ್ಲ.

ಛೇರ್ಮನ್: ಮಾನ್ಯ ಬೆಲ್ಲದ್‌ರವರು ದಯವಿಟ್ಟು ಪಶುವನ್ನು ಅಷ್ಟು ಕಡೆಗಣಿಸಬೇಡಿ. ಅದು ಬಸವ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಅದೇ ತಪ್ಪಾಗಿದೆ ಎಂದು ನಾವು ಹೇಳುವುದು. ಪಶುವನ್ನು ನಾವು ಎಂದೂ ಕಡೆಗಣಿಸಿಲ್ಲ. ಬಸವಣ್ಣ ಇಡೀ ವಿಶ್ವಮಾನವ.

ಛೇರ್ಮನ್: ಒಂದು ನಿಮಿಷ. ಅವರು ಏನು ಹೇಳುತ್ತಿದ್ದಾರೆಂದರೆ ಅನೇಕ ಜನ ಮಾನ್ಯ ಸದಸ್ಯರು ಈ ಲೈವ್ ಬ್ಯಾಂಡ್ ಬಗ್ಗೆ ಮಾತನಾಡಿದ್ದಾರೆ. ನಾನು ಇಲ್ಲಿ ಕುಳಿತುಕೊಂಡು ಕೆಲವು ವಿಚಾರಗಳನ್ನು ಕೇಳಿದೆ ಅಷ್ಟೇ ಹೊರತು ನಿಜವಾಗಿಯೂ ಸರಿಯಾದುದು ಅಲ್ಲ. ಅದರ ಬಗ್ಗೆ ಕಠಿಣವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಹದೇವ್: ಒಂದು ನಿಮಿಷ. ಬೀದರ್ ಬಸವಣ್ಣನವರ ನಾಡು. ಅಲ್ಲಿ ನಾವು ಪಶು ವಿಶ್ವವಿದ್ಯಾಲಯವನು ಸ್ಥಾಪನೆ ಮಾಡಿದ್ದು ಒಂದು ಸದುದ್ದೇಶದಿಂದ. ನಾವು ಮಾಡಿದ್ದೆವೆ. ಅದು ಇಡೀ ಭಾರತದೇಶದಲ್ಲಿಯೇ ಒಂದು ಉತ್ತಮವಾದ ಪಶು ವಿಶ್ವವಿದ್ಯಾಲಯವಾಗುತ್ತದೆ. ಬಸವಣ್ಣನವರು ಹೇಳಿದ್ದಾರೆ ನಾನು ಎಲ್ಲರಿಗಿಂತ ಕಿರಿಯ ಎಂದು ಅವರು ತಮ್ಮ ವಾಕ್ಯದಲ್ಲಿ ಅಪ್ಪಣೆ ಕೊಟ್ಟಿದ್ದಾರೆ. ಅದು ಮಾನ್ಯ ಎಸ್ ಎಸ್ ಪಾಟೀಲರಿಗೂ ಗೊತ್ತಿದೆ. ಇದು ನಾಡಿನ ಜನತೆಗೆ ದೇಶದ

ಜನತೆಗೆ, ಮತ್ತು ದಯೇಯೇ ಧರ್ಮದ ಮೂಲವಯ್ಯ ಎಂದು ಬಸವಣ್ಣನವರು ಹೇಳಿದ್ದಾರೆ. ಇದು ಎಲ್ಲರಿಗೂ ಗೊತ್ತಿದೆ. ಇದು ದಯೇ ತೋರಿಸತಕ್ಕಂಥ ಪಶು ವಿಶ್ವವಿದ್ಯಾಲಯ ಇದು. ಮತ್ತು ಅವರು ಎಲ್ಲರಿಗಿಂತ ಕಿರಿಯರು ನಾನು ಎಂದು ಹೇಳಿದ್ದಾರೆ. ಇವರು ಈ ವಿಶ್ವವಿದ್ಯಾಲಯ ಚಿಕ್ಕದು ಎಂದು ತೆಗೆದುಕೊಂಡರೂ ಬಸವಣ್ಣನವರ ಹೆಸರನ್ನು ನಾವು ಇಟ್ಟರೆ ಏನು ತಪ್ಪು? ಇವರು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಬೇಕು. ಬಸವಣ್ಣನವರ ನಾಡಿನಲ್ಲಿ ಪಶು ವಿಶ್ವವಿದ್ಯಾಲಯ ಸ್ಥಾಪನೆ ಮಾಡಿ ಬಸವಣ್ಣನವರ ಹೆಸರನ್ನು ಆ ವಿಶ್ವವಿದ್ಯಾಲಯಕ್ಕೆ ಇಟ್ಟಿದೆ ಎಂದು ಸಂತೋಷ ಎಂದು ಹೇಳಬೇಕು. ಈಗ ನೀವು ಬಸವೇಶ್ವರ ಕಲ್ಯಾಣ ಮಂಟಪ. ಬಸವೇಶ್ವರ ಊಟದ ಹೋಟೆಲ್ ಬಸವೇಶ್ವರರ ನಗರ, ಎಲ್ಲದ್ದಕ್ಕೂ ಬಸವೇಶ್ವರ ಎಂದು ಹೇಳುತ್ತೀರಿ. ಈಗ ಒಂದು ಕೆಲಸ ಮಾಡಿ. ಬಸವೇಶ್ವರ ಪಂಥದವರು, ಬಸವೇಶ್ವರ ವಾದದವರು ಇದ್ದಾರಲ್ಲಾ ಇವರು ಬಸವೇಶ್ವರರ ಹೆಸರನ್ನು ದೊಡ್ಡದಕ್ಕೆ ಮಾತ್ರ ಇಡಬೇಕು ಹೊಟೇಲ್‌ಗಳಿಗೆ ಕಲ್ಯಾಣ ಮಂಟಪಕ್ಕೆ ಅವರ ಹೆಸರನ್ನು ಇಡಬಾರದು ಎಂದು ಹೋರಾಟವನ್ನು ಮಾಡಲಿ.

ಶ್ರೀ ಎಸ್.ಎಸ್. ಪಾಟೀಲ್: ದಯವಿಟ್ಟು ಕೇಳಿ. ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರನ್ನು ಬಿಡಿ. ಆಮೇಲೆ ನಿಮ್ಮ ವಿಶ್ವವಿದ್ಯಾಲಯ ಏನು ಇದೆ ಅಲ್ಲಿಯೂ ಸಹ ಒಬ್ಬ ಶರಣರು ಇದ್ದಾರೆ. ತುರಗಾವಿ ರಾಮಣ್ಣ ಎಂದು ಬರುತ್ತಾರೆ ಅದಕ್ಕೆ ಅವರ ಹೆಸರು ಇಡಿ.

(ಗೊಂದಲ)

ಶ್ರೀ ಎಂ. ಮಹದೇವ್: ಬಸವಣ್ಣನವರು ಯಾವ ಕಾಯಕ ಮಾಡುತ್ತಿದ್ದರು ಅವರ ಯಾವ ಸಿದ್ಧಾಂತಗಳು ಇದ್ದವು ಅದನ್ನು ಎತ್ತಿ ಹಿಡಿಯಲಿಕ್ಕೆ ನಾವು ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರು ಇಟ್ಟಿದ್ದೇವೆ.

ಛೇರ್ಮನ್: ಬಸವಣ್ಣನವರ ಬಗ್ಗೆ ಚರ್ಚೆ ಏಕೆ? ಬಸವಣ್ಣನವರ ಬಗ್ಗೆ ಚರ್ಚೆ ಬೇಡ. ಅವರು ಹೇಳಿದರು, ನೀವು ಕೇಳಿ ಆಯಿತಲ್ಲಾ, ಕುಳಿತುಕೊಳ್ಳಿ.

ಶ್ರೀ ಎಂ. ಮಹದೇವ್: ಅವರು ವೆಟರ್ನರಿ ಯೂನಿವರ್ಸಿಟಿ ವಿಚಾರ ಎತ್ತಿದರಲ್ಲಾ, ಅದಕ್ಕೆ ಬಸವೇಶ್ವರ ಯೂನಿವರ್ಸಿಟಿ ಎಂದು ಹೆಸರಿಟ್ಟಿದ್ದಕ್ಕೆ ಆಕ್ಷೇಪ ವ್ಯಕ್ತ ಮಾಡಿದರು, ಅದಕ್ಕೆ ಹೇಳಬೇಕಾಯಿತು.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಬಸವಣ್ಣನವರನ್ನು ಸರಿಯಾಗಿ ಅರ್ಥ ಮಾಡಿಕೊಂಡೇ ಇಲ್ಲ. ಆ ದೃಷ್ಟಿಯಿಂದ ಅದರ ಬಗ್ಗೆ ಹೆಚ್ಚು ಚರ್ಚೆ ಮಾಡುವಂತ ಅವಶ್ಯಕತೆ ಇಲ್ಲ.

ಶ್ರೀ ಆರಗ ಜ್ಞಾನೇಂದ್ರ: ಸದನದಲ್ಲಿರತಕ್ಕ ಎಲ್ಲಾ ಶರಣರೂ ಇದರಲ್ಲಿ ಭಾಗವಹಿಸಲಿ.

ಶ್ರೀ ಎಂ. ಮಹದೇವ್: ಗಾಡ್ರೇಜ್ ಬೀರುವಿನಲ್ಲಿ ಬಸವಣ್ಣನವರನ್ನು ಹಾಕಿ, ನೀವು ಬೀಗ ಹಾಕಿದ್ದೀರಿ. ನೀವು ಬಸವಣ್ಣನವರನ್ನು ಪ್ರಪಂಚಕ್ಕೆ ಬಿಟ್ಟಿಲ್ಲ. ಪ್ರಪಂಚಕ್ಕೆ ಬಿಟ್ಟಿದ್ದರೆ ಸರಿಯಾಗುತ್ತಿತ್ತು. ನೀವು ನಾಲ್ಕು ಗೋಡೆ ಮಧ್ಯದಲ್ಲಿ ಬಸವಣ್ಣನವರನ್ನು ಕೂರಿಸಿಬಿಟ್ಟಿದ್ದೀರಿ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಬಸವಣ್ಣನವರನ್ನು ಯಾರೂ ಬೆನ್ನುತಟ್ಟುವ ಅವಶ್ಯಕತೆ ಇಲ್ಲ. ಯಾರೂ ಬೀಗ ಹಾಕಿಲ್ಲ. ಅವರನ್ನು ಸರಿಯಾಗಿ ಯಾರೂ ಅರ್ಥ ಮಾಡಿಕೊಂಡಿಲ್ಲ.

ಛೇರ್ಮನ್: ಏಕೋ ಶರಣರ ಗೊಂದಲ ಪ್ರಾರಂಭವಾಯಿತಲ್ಲಾ. ಶರಣರು ಸ್ವಲ್ಪ ಸಮಾಧಾನವಾಗಿರಬೇಕು. ಮಹದೇವ ಪ್ರಸಾದ್‌ರವರು ಏನು ಹೇಳುತ್ತಾರೆಂಬುದನ್ನು ಕೇಳೋಣ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಪಶುಸಂಗೋಪನಾ ಸಚಿವರು ಬಸವಣ್ಣನವರ ವಚನ ಹೇಳುತ್ತಾ, ಈಗಿನ ಕಾಲಕ್ಕೆ ತಕ್ಕಂತೆ ಅರ್ಥೈಸಿ ಹೇಳುತ್ತಾ ಇದ್ದರು. ಏಕೋ ಮೊನ್ನೆಯಿಂದ ಶ್ರೀಕಂಠೇಶ್ವರ, ಶ್ರೀಕಂಠೇಶ್ವರ ಎಂದು ಪ್ರಾರಂಭವಾಗಿ, ಬಸವಣ್ಣನವರನ್ನು ಅವರು ಮರೆತುಬಿಡುವ ಹಾಗೆ ಕಾಣುತ್ತಾರೆ.

ಛೇರ್ಮನ್: ಇಲ್ಲ, ಯಾರೂ ಮರೆಯುವುದಿಲ್ಲ.

ಶ್ರೀ ಎನ್. ಚಲುವರಾಯಸ್ವಾಮಿ: ಸರ್ಕಾರದವರೇ ತೀರ್ಮಾನ ತೆಗೆದುಕೊಂಡಿದ್ದಾರೆ, 2004ರ ಚುನಾವಣೆಯಲ್ಲಿ ಸೋಲುತ್ತೇವೆಂದು ಕಾಂಗ್ರೆಸ್‌ನವರು ತೀರ್ಮಾನ ತೆಗೆದುಕೊಂಡು ನಾಗಮಂಗಲದಲ್ಲಿ ಹಾಗೂ ಶಿಡ್ಲಘಟ್ಟದಲ್ಲಿ ಓಪನ್ ಆಗಿ ಕ್ಯಾಬರೆ ಮಾಡಿದ್ದಾರೆ. ನೀವು ನಾಲ್ಕು ಗೋಡೆ ಮಧ್ಯದಲ್ಲಿ ನಡೆಯುವಂಥ ಲೈವ್ ಬ್ಯಾಂಡ್ ನಿಲ್ಲಿಸುತ್ತಾರೆಯೇ ಎಂಬ ಅನುಮಾನ ನನಗಿದೆ.

ಛೇರ್ಮನ್: ಕಾದು ನೋಡೋಣ.

ಶ್ರೀ ಬಿ. ಸೋಮಶೇಖರ್: ನನ್ನ ಒಂದು ಕಳಕಳಿಯ ಮನವಿ ಏನೆಂದರೆ, ಏನು ಮಹಾನ್ ನಾಯಕರಿದ್ದಾರೆ, ಮಾರ್ಗದರ್ಶಕರಿದ್ದಾರೆ ಅವರನನು ಸಂಕುಚಿತಗೊಳಿಸತಕ್ಕಂಥಾದ್ದನ್ನು ಮೊದಲು ತಪ್ಪಿಸಬೇಕು. ನಾವು ಅವರನ್ನು ಬೇಕೆಂದೇ ನಮ್ಮ ನಮ್ಮ ಸಂಕುಚಿತ ಭಾವನೆಗಳಿಂದ ಅವರನ್ನೇ ಸಂಕುಚಿತ ಮಾಡುತ್ತಿದ್ದೇವೆ. ಉದಾಹರಣೆಗೆ ಬಸವೇಶ್ವರರನ್ನು ತಂದು ಒಂದು ಜಾತಿಯಯವರು ಗುತ್ತಿಗೆ ತೆಗೆದುಕೊಳ್ಳತಕ್ಕಂಥಾದ್ದು, ಅಂಬೇಡ್ಕರ್‌ರವರನ್ನು ತಂದು ಒಂದು ಜಾತಿಯವರು ಗುತ್ತಿಗೆ ತೆಗೆದುಕೊಳ್ಳತಕ್ಕಂಥಾದ್ದು. ಇತ್ತೀಚೆಗೆ, ನಾನು ಹಳ್ಳಿಗಳಿಗೆ ಹೋದಾಗ ಯಾವ ಬೀದಿಯಲ್ಲೂ ಯಾರ ಹೆಸರುಗಳೂ ಕಾಣಿಸುತ್ತಾ ಇಲ್ಲ. ಇವತ್ತು ಎಸ್.ಸಿ. ಎಸ್.ಟಿ. ಬೀದಿಯಲ್ಲಿ ಡಾ॥ ಅಂಬೇಡ್ಕರ್ ಸಂಘಗಳು, ಇನ್ನೊಂದು ಬೀದಿಯಲ್ಲಿ ಜಗಜೀವನರಾಮ್ ಸಂಘಗಳು, ಇನ್ನೊಂದು ಬೀದಿಯಲ್ಲಿ ಮೀನುಗಾರರ ಗಂಗಾಪರಮೇಶ್ವರಿ ಸಂಘಗಳು, ಇನ್ನೊಂದು ನಾಯಕರ ಮದಕರ ನಾಯಕರ ಸಂಘಗಳು, ಇನ್ನೊಂದು ಉಪ್ಪಾರರ ಭಗೀರಥಿ ಸಂಘಗಳು, ಇನ್ನೊಂದು ಸಂಗೊಳ್ಳಿ ರಾಯಣ್ಣನವರ ಸಂಘ, ಇನ್ನೊಂದು ಕುರುಬರ ಕನಕದಾಸರ ಸಂಘಗಳು ಹೀಗೆ ಒಂದೊಂದು ಬೀದಿಗೆ ಹೋದರೆ ಒಂದೊಂದು ಸಂಘಗಳು. ಹಾಗಾದರೆ, ಸಂಗೊಳ್ಳಿ ರಾಯಣ್ಣ ಇರಬಹುದು, ಕನಕದಾಸರು ಇರಬಹುದು ಇವರು ಒಂದೇ ಜಾತಿಗೆ ಸೀಮಿತವಾಗಿದ್ದವರೇ? ಅವರ ವಚನಗಳು ಇಡೀ ಸರ್ವ ಕಾಲಕ್ಕೂ ವೇದ್ಯವಾಗಿವೆ.

ಛೇರ್ಮನ್: ಬಸವೇಶ್ವರರಾಗಲೀ, ಅಂಬೇಡ್ಕರ್‌ರವರಾಗಲೀ, ಕ್ರಿಸ್ತ ಆಗಲೀ, ಮಹಮದ್ ಪೈಗಂಬರ್‌ರವರಾಗಲೀ, ಕನಕದಾಸರಾಗಲೀ ಇವರು ಯಾರದೇ ಒಂದು ವ್ಯಕ್ತಿಯನ್ನು ಸ್ವತ್ತಲ್ಲ. ಇದು ರಾಷ್ಟ್ರದ ಸ್ವತ್ತು. ನಮ್ಮೆಲ್ಲರ ಸ್ವತ್ತು. ಕೆಲವರು ಈಗ ಇವರನ್ನು ಅವರವರ ಸ್ವತ್ತು ಮಾಡಿಕೊಂಡುಬಿಟ್ಟಿದ್ದಾರೆ.

ಶ್ರೀ ಬಿ. ಸೋಮಶೇಖರ್: ನನ್ನ ಕಳಿಕಳಿಯ ಮನವಿ ಏನೆಂದರೆ, ನಾನು 1996–97ರಲ್ಲಿ ಉನ್ನತ ಶಿಕ್ಷಣ ಸಚಿವನಾಗಿದ್ದೆ. ಆಗ ಇದೇ ವಿಚಾರ ಬಂತು. ನಾವು ಒಂದು ವರ್ಗಕ್ಕೆ ಸೇರಿರುವುದರಿಂದ ದಲಿತರಲ್ಲಿ ಡಾ॥ ಅಂಬೇಡ್ಕರ್ ಹೆಸರಿಡಬೇಕೆಂದು ಒಂದು ವರ್ಗ ಹೊರಟಿತು. ಇನ್ನೊಂದು ಗುಲ್ಬರ್ಗಾ ಯೂನಿವರ್ಸಿಟಿಗೆ ಬಸವೇಶ್ವರರ ಹೆಸರಿಡಬೇಕೆಂದು ಹೊರಟಿತು. ನಾನು ಹೇಳಿದೆ, 'ಯಾರ ಹೆಸರೂ ಬೇಡ, ಗುಲ್ಬರ್ಗಾ ಯೂನಿವರ್ಸಿಟಿ ಎಂದೇ ಇರಲಿ ಎಂದು. ಬಸವೇಶ್ವರರ ತತ್ವ,

ಅವರ ಅನುಯಾಯಿ ಅಂಬೇಡ್ಕರ್. ನಾವು ಇವರಿಬ್ಬರ ಹೆಸರು ತಂದು ಸಂಘರ್ಷಗಳನ್ನು ಸೃಷ್ಟಿ ಮಾಡುತ್ತಾ ಇದ್ದೇವೆ. ದಯವಿಟ್ಟು ಯಾರ ಹೆಸರೂ ಬೇಡ. ಈ ದೊಡ್ಡ ದೊಡ್ಡ ಆದರ್ಶ ಪುರುಷರನ್ನು ನಾವು ಸಂಕುಚಿತ ಮಾಡುವುದು ಬೇಡ. ವಿವಾದಕ್ಕೆ ಎಳೆಯುವಂಥಾದ್ದು ಬೇಡ ಎಂದು ನನ್ನ ಕಳಕಳಿಯ ಮನವಿ. ಏಕೆಂದರೆ, ಈಗಾಗಲೇ ಸಾಕಾದಷ್ಟು ಚರ್ಚೆ ಮಾಡಿದೆವು. ಆದ್ದರಿಂದ, ಇದನ್ನು ಅಷ್ಟಕ್ಕೇ ನಿಲ್ಲಿಸಿ, ಈ ಸರ್ಕಾರ ನಾಲ್ಕೈದು ವರ್ಷಗಳಿಂದ ಪ್ರಚಾರವನ್ನು ಗಿಟ್ಟಿಸಿಕೊಳ್ಳುವುದಕ್ಕೆ ಈ ತಂತ್ರಗಳನ್ನು ಉಪಯೋಗಿಸಿದೆ. ಮತ್ತೆ ಆಡಳಿತ ಯಂತ್ರಕ್ಕೂ ಮತ್ತು ಬೇರೆ ಸಮಾಜಘಾತುಕ ಶಕ್ತಿಗಳಿಗೂ ವ್ಯತ್ಯಾಸವೇ ಇಲ್ಲ. Nexus between criminals and administration. ಅನೇಕ ಸಂದರ್ಭಗಳಲ್ಲಿ ಹೇಳಬಹುದು. ಇವತ್ತು ಲೈವ್ ಬ್ಯಾಂಡ್‌ಗೆ ಲೈಸೆನ್ಸ್ ಕೊಟ್ಟಿರತಕ್ಕಂಥಾದ್ದು ಇರಬಹುದು, ಶಿಡ್ಲಘಟ್ಟದಲ್ಲಿ ಇವತ್ತು ಏನು ನಡೆದಿದೆ, ಅದಕ್ಕೆ ಗ್ರಾಮ ಪಂಚಾಯ್ತಿ ಸೆಕ್ರಟರಿ ಲೈಸೆನ್ಸ್ ಕೊಟ್ಟಿರತಕ್ಕಂಥಾದ್ದು ಇರಬಹುದು. ಇದಕ್ಕೆಲ್ಲಾ ಎಲ್ಲಿಂದ ಬಂದಿದೆಯೆಂದರೆ, ಈ ಚಟುವಟಿಕೆಗಳಿಗೆ ಸರ್ಕಾರದಿಂದಲೇ ಕುಮ್ಮಕ್ಕು. ನಾನು ಹೇಳುವುದು, ಕಾನೂನುಬಾಹಿರವಾದಂಥ ಕ್ರಮಗಳನ್ನು ತೆಗೆದುಕೊಂಡು ನಿವೇಶನ ವಿತರಣೆಯಾಗಿರತಕ್ಕಂಥಾದ್ದು ಇರಬಹುದು, ಮತ್ತೆ ಇವತ್ತು ಇನ್ನೊಂದು ಪತ್ರಿಕೆಯಲ್ಲಿ ಓದಿದೆ. ಮೈಸೂರಿನಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷರು ಪತ್ರಕರ್ತರಿಗೆ ಲಂಚ. ಇದು ಪತ್ರಿಕೆಯಲ್ಲಿ ಬಂದುಬಿಟ್ಟಿದೆ.

> "ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಎಚ್. ಸುಬ್ಬಯ್ಯ, ಸೋಮವಾರ ಮಧ್ಯಾಹ್ನ ಸುದ್ದಿಗೋಷ್ಠಿ ನಡೆಸಿದ ನಂತರ ಕವರ್‌ನಲ್ಲಿ ಐದುನೂರು ರೂಪಾಯಿಗಳ ನಗದು ಹಣ ಮತ್ತು ಒಂದೊಂದು ವಾಚ್ ಕೊಡುಗೆ ನೀಡಿ ಛೀಮಾರಿ ಹಾಕಿಸಿಕೊಂಡರು. ವೀಕ್ಷಕರಾಗಿ ಬಂದಿದ್ದ ಆಂಧ್ರಪ್ರದೇಶದ ಕಾಂಗ್ರೆಸ್ ಮುಖಂಡ ಚಿನ್ನಸ್ವಾಮಿ ಸುದ್ದಿಗೋಷ್ಠಿ ಜಲದರ್ಶಿನಿಯಲ್ಲಿ ನಡೆಯುತ್ತದೆ ಎಂದು ಪತ್ರಕರ್ತರಿಗೆ ಮಾಹಿತಿ ನೀಡಲಾಗಿತ್ತು. ಸುದ್ದಿಗೋಷ್ಠಿಯ ನಂತರ ಒಂದು ಪ್ಯಾಕ್ ಹಾಗೂ ಮತ್ತೊಂದು ಕವರ್ ನೀಡಲಾಯಿತು. ಕವರ್ ತೆಗೆದಾಗ ಅದರಲ್ಲಿ ಐದು ನೂರು ರೂಪಾಯಿ ನೋಟು ಮತ್ತು ಪ್ಯಾಕೆಟಿನಲ್ಲಿ ವಾಚು ಕಂಡು ಬಂತು. ತಿರುಗಿ ಬಿದ್ದ ಸುದ್ದಿಗಾರರು ಸುಬ್ಬಯ್ಯ ಮತ್ತು ಇನ್ನಿತರರಿಗೆ ಛೀಮಾರಿ ಹಾಕಿದರು. ನಾಗಮಂಗಲದ ಸಾರ್ವಜನಿಕ ಸಭೆಯಲ್ಲಿ ಅರೆಬೆತ್ತಲೆ ನೃತ್ಯ ನಡೆಸಿ ಅಭ್ಯಾಸ ಮೂಡಿಸಿದ್ದ ಕಾಂಗ್ರೆಸ್ಸಿಗರು, ಈಗ ಸುದ್ದಿಗಾರರಿಗೆ ಲಂಚದ ಆಮಿಷ ಒಡ್ಡಿ ಮುಜುಗರದ ಸನ್ನಿವೇಶ ಸೃಷ್ಟಿ ಮಾಡಿದ್ದಾರೆ.
>
> ಕೋಟಿ ಪ್ರತಿಕ್ರಿಯೆ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ರಾಜಶೇಖರಕೋಟಿ, ಪತ್ರಕರ್ತರಿಗೆ ಲಂಚ ಕೊಡಲು ಹೋದ ರಾಜಕಾರಣಿಗಳ ವರ್ತನೆ ಬಗ್ಗೆ ಜಿಗುಪ್ಸೆ ವ್ಯಕ್ತಮಾಡಿದ್ದಾರೆ. ಮುಂದೆ ನಡೆಯಲಿರುವ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು ಎಂದು ಕೋಟಿ ತಿಳಿಸಿದ್ದಾರೆ.
>
> ಶಿವಕುಮಾರ್ ಪ್ರತಿಕ್ರಿಯೆ: ಮೈಸೂರು ವರದಿಗಾರರ ಕೂಟದ ಅಧ್ಯಕ್ಷರಾದ ಶಿವಕುಮಾರ್ ಪ್ರತಿಕ್ರಿಯೆ ನೀಡಿ ಇದೊಂದು ಕೆಟ್ಟ ಘಟನೆ ಎಂದಿದ್ದಾರೆ. ಇನ್ನು

ಮುಂದೆ ಯಾವುದೇ ರಾಜಕೀಯ ಪಕ್ಷದವರು ಹೀಗೆ ಹಣದ ಆಮಿಷ ಒಡ್ಡಿದ್ದರೆ ಅಂತಹವರ ಸುದ್ದಿಗೋಷ್ಠಿ ಮತ್ತು ಸುದ್ದಿಗಳನ್ನು ಬಹಿಷ್ಕರಿಸುವ ತೀರ್ಮಾನ ಮಾಡಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಅಂದರೆ, ಅಮಿಷ ಒಡ್ಡಿ ಸುದ್ದಿಗೋಷ್ಠಿ ಮಾಡಿದರೆ ಅದನ್ನು ಎಲ್ಲರೂ ಬಹಿಷ್ಕರಿಸಬೇಕೆಂಬ ತೀರ್ಮಾನ ಮಾಡಿದ್ದಾರೆ. ಇದು ಬಹಳ ಸಂತೋಷ, ನಾನು ಸ್ವಾಗತ ಮಾಡುತ್ತೇನೆ. ಈ ರೀತಿ ಅಮಿಷ ಒಡ್ಡತಕ್ಕತಕ್ಕಂಥಾದ್ದು ಎಲ್ಲಿಂದ ಹುಟ್ಟಿತು? ಇನ್ನೊಂದು ಕಾಂಗ್ರೆಸ್ ಕಛೇರಿಯಲ್ಲೇ ನಡೆಯುತ್ತಾ ಇದೆಯೆಂದು ಸುದ್ದಿ ಬಂದಿತ್ತು. ಇಲ್ಲಿ ಕಾಂಗ್ರೆಸ್ ಕಛೇರಿಯಲ್ಲಿ ಮತ್ತು ಜಿಲ್ಲಾ ಡಿ.ಸಿ.ಸಿ. ಆಫೀಸಿನಲ್ಲಿ ಪತ್ರಕರ್ತರಿಗೆ ಇದು ಎಲ್ಲಿಂದ ಹುಟ್ಟಿತು? ರಾಜ್ಯಸರ್ಕಾರದಿಂದ–ಸೈಟುಗಳನ್ನು ಕೊಟ್ಟಿದ್ದನ್ನು ಆಮಿಷ ಎನ್ನುವುದಿಲ್ಲವೇ? ನೀವು ಅವರಿಗೆ ಯಾವ ಆಧಾರದ ಮೇಲೆ ಸೈಟುಗಳನ್ನು ಕೊಟ್ಟಿರಿ? ಇದು ಕೂಡ ಆಮಿಷವೇ. ನಾನು ಇವತ್ತು ಹೇಳುತ್ತೇನೆ. ಪತ್ರಕರ್ತರ ಕ್ರಮವನ್ನು ನಾನು ಸ್ವಾಗತ ಮಾಡುತ್ತೇನೆ. ಈ ನೈತಿಕತೆ ಮತ್ತು ಡೆಮೋಕ್ರಟಿಕ್ values ನಲ್ಲಿ ಎಡಿಕ್ಸ್‌ನ್ನು ಕಾಪಾಡಿಕೊಳ್ಳಬೇಕೆಂಬುದಕ್ಕೆ ಯಾವುದೇ ಪತ್ರಿಕಾ ಗೋಷ್ಠಿಯನ್ನು ರದ್ದು ಮಾಡಬೇಕು, ನಾವು ಹೋಗಬಾರದು, ಆಮಿಷ ಒಡ್ಡುತ್ತಾರೆ ಎಂದು ಹೇಳಿದ್ದಾರಲ್ಲಾ, ಈ ರೀತಿ ಆಮಿಷ ಒಡ್ಡಿ ಸೈಟುಗಳನ್ನು ಕೊಟ್ಟಿದ್ದಾರಲ್ಲಾ, ಅವರು ಈ ತೀರ್ಮಾನ ತೆಗೆದುಕೊಳ್ಳಬೇಕೆಂಬುದು ನನ್ನ ಆಗ್ರಹ. ಮತ್ತೆ ಇನ್ನೊಂದು, ಒಂದೊಂದು ಸಂಸ್ಥೆ ಅಧ್ಯಕ್ಷರುಗಳು ವಾಚ್ ಕೊಡುವುದು, ಪ್ಯಾಕೆಟ್ ಕೊಡುವುದು, ಸೈಟ್ ಕೊಡುವುದು, ಏತಕ್ಕೆ ನಂಬರ್ ಒನ್ ಎಂದು ಬರೆಸಿಕೊಳ್ಳುವುದು? ಎಲ್ಲಿಗೆ ಹೋಯಿತು ಈ ಪ್ರಜಾಪ್ರಭುತ್ವ? ಎಲ್ಲಿಗೆ ಹೋಯಿತು ಈ ಮೌಲ್ಯಗಳು? ಇದನ್ನು ಕೆಡಿಸಿದವರು ಯಾರು?

ಶ್ರೀ ಎಂ. ಮಹದೇವ್: ಇಂಪಾರ್ಶಲ್ ಆಗಿ ವರದಿಯನ್ನು ಮಾಡಿ, ಪರ್ತಕರ್ತರು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರಲ್ಲಾ ಎನ್ನುವ ಸಂತೋಷಕ್ಕೆ, ಅವರೇನೋ ಒಂದು ಪ್ರೆಸೆಂಟೇಷನ್ ಕೊಟ್ಟರೆ, ದೊಡ್ಡ ಅಪರಾಧ ಎಂದು ಹೇಳುವುದಲ್ಲ. ಅವರು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ. ಇಂಪಾರ್ಶಲ್ ಆಗಿ ನಡೆದುಕೊಂಡಿದ್ದಾರೆ. ಇದನ್ನು ದೊಡ್ಡ ಅಪರಾಧ ಎಂದು ಹೇಳಿದರೆ, ನಾವೇನು ಹೇಳುವುದಕ್ಕಾಗುತ್ತದೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಾನ್ಯ ಸಚಿವರು ಇದನ್ನು ಡಿಪೆಂಡ್ ಮಾಡಿಕೊಳ್ಳುವುದಾದರೆ, ಅವರಿಗೂ ಆ ಪ್ರಾಕ್ಟೀಸ್ ಇದೆಯೆಂದು ಆಯಿತು.

ಶ್ರೀ ಎಂ. ಮಹದೇವ್: ರಾಜಕೀಯ ಜೀವನದಲ್ಲಿ ನಾನು ಕಾಂಟ್ರವರ್ಷಿಯಲ್ ಆಗಿ ಬಂದಿದ್ದೇನೆಯೇ ಹೊರತು ನಾನು ಯಾವತ್ತೂ ಇಂತಹ ವಿಚಾರದಲ್ಲಿ ಕಾಂಪ್ರಮೈಸ್ ಮಾಡಿಕೊಂಡವನಲ್ಲ. ಆ ರೀತಿಯ ರಾಜಕೀಯ ಮಾಡಿದವನೂ ನಾನಲ್ಲ.

ಛೇರ್ಮನ್: ವಾಚ್ ಕೊಟ್ಟರೆ, ಪೆನ್ ಕೊಟ್ಟರೆ ಅದು ಗಿಫ್ಟ್. ಆದರೆ, ದುಡ್ಡು ಕೊಟ್ಟರೆ ಗಿಫ್ಟ್ ಆಗುವುದಿಲ್ಲ.

ಶ್ರೀ ಎಂ. ಮಹದೇವ್: ವಾಚ್, ಪೆನ್ ಕೊಟ್ಟಿರತಕ್ಕಂಥಾದ್ದು ಒಂದು ಸೌಹಾರ್ದಯುತವಾಗಿ, ಇಂಪಾರ್ಶಲ್ ಆಗಿ ಅವರು ನಡೆದುಕೊಂಡಿದ್ದಾರೆ ಎಂಬುದಕ್ಕೆ ಮತ್ತು ಪ್ರಾಮಾಣಿಕವಾಗಿ ವರದಿ ಮಾಡಿರುವುದು, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದಿರುವ ವಿಚಾರದಲ್ಲಿ ಸಂತೋಷವನ್ನು ಗಿಫ್ಟ್ ಕೊಟ್ಟಿರಬಹುದು.

ಛೇರ್ಮನ್: ನೀವು ಎಷ್ಟು ವಾದ ಮಾಡಿದರೂ ದುಡ್ಡು ಗಿಫ್ಟ್ ಆಗುವುದಿಲ್ಲ. ಏಕೆ ಸುಮ್ಮನೆ ವಾದ ಮಾಡುತ್ತೀರಿ. ಸೋಮಶೇಖರ್‌ರವರೇ, ಎರಡು ಗಂಟೆ ಮುಗಿಸಿಬಿಡಿ. ತಾವು ಯಾರಿಗೂ ಯೀಲ್ಡ್ ಆಗಬಾರದು.

ಶ್ರೀ ಬಿ. ಸೋಮಶೇಖರ್: ಯಾವಾಗಲೂ ಶಹಭಾಸ್‌ಗಿರಿ ಯಾವುದರಿಂದ ಬರಬೇಕೆಂದರೆ ನಿಜವಾದಂಥ ಕೃತ್ಯದಿಂದ ಬರಬೇಕು. ಮೌಲ್ಯಗಳನ್ನು ಎತ್ತಿಹಿಡಿಯುವುದರಿಂದ ಬರಬೇಕು. ಕಾರ್ಯಕ್ರಮಗಳಿಂದ ಬರಬೇಕು. ಸಾಧನೆಯಿಂದ ಬರಬೇಕು. ಅದೂ ಸಾಧನೆ ಅಂಕಿಅಂಶಗಳ ಆಧಾರದ ಮೇಲೆ ಇರಬೇಕು ಮತ್ತು ಭೌತಿಕ ಪ್ರಗತಿಯಲ್ಲಿ ಕಾಣಬೇಕು. ನೀವು ಯಾವ ಒಂದು ಕಾರ್ಯಕ್ರಮವನ್ನು, ಯಾವ ಒಂದು ಯೋಜನೆಗಳನ್ನು ಕಾನೂನು ಬದ್ಧವಾಗಿ, ನಿಯಮಗಳ ಪ್ರಕಾರವಾಗಿ, ರಾಜ್ಯಾಂಗ ಬದ್ಧರಾಗಿ ಮಾಡಿದ್ದೀರಿ? ಆರ್ಥಿಕ ಪ್ರಗತಿಯನ್ನು ನೀವೇನಾದರೂ ರಾಜ್ಯಾಂಗ ಬದ್ಧರಾಗಿ ಮಾಡಿದ್ದೀರಾ? ಅವುಗಳೆಲ್ಲವನ್ನೂ ಮಾಡದೆ ಕೇವಲ ಶಹಭಾಸ್‌ಗಿರಿಯನ್ನು ತೋರಿಸಬೇಕೆಂದು ಕೃತಕವಾಗಿ ಯಾರ್‍ಯಾರಿಗೋ ಏನೇನೋ ಆಮಿಷವನ್ನು ಒಡ್ಡಿ, ಬರೆಸಿಕೊಂಡು, ಪ್ರಚಾರಗಳನ್ನು ಮಾಡಿ, ನೀವು ಇವೊತ್ತು ಯಾವುದರಲ್ಲಿ ನೀವು ನಂಬರ್ ಒನ್ ಆಗಿದ್ದೀರಿ ಅಂದರೆ, ನಾಲ್ಕೂವರೆ ವರ್ಷಗಳಲ್ಲಿ ನೀವುಗಳು ಮಾಡಿದ ಸಾಧನೆ ಯಾವುವು? ನಾವು ಕೂಡ ನಮ್ಮ ಸರಕಾರದಲ್ಲಿ ಮಂತ್ರಿಗಳಾಗಿ ಕೆಲಸಕಾರ್ಯಗಳನ್ನು ಮಾಡಿದ್ದೇವೆ. ಈಗ ಎಲ್ಲಾ ಸರ್ಕಲ್‌ಗಳಲ್ಲಿ ಬ್ಯಾನರ್‌ಗಳು, ಯಾರಾದರೂ ಕೇಂದ್ರದಿಂದ ಬಂದರೆ ಅವರಿಗೆ ಬ್ಯಾನರ್‌ಗಳು, ಹುಟ್ಟಿದ ಹಬ್ಬಗಳಿಗೆ ಪೋಸ್ಟರ್‌ಗಳು, ಬ್ಯಾನರ್‌ಗಳು, ಯಾವುದೇ ಕಾರ್ಯಕ್ರಮಗಳಿಗೆ ಬ್ಯಾನರ್‌ಗಳು, ಅಕ್ಷರದಾಸೋಹಕ್ಕೆ ಬ್ಯಾನರ್, ಸ್ತ್ರೀಶಕ್ತಿ ಬ್ಯಾನರ್, ಇದಕ್ಕೆಲ್ಲಾ ನೀವು ಎಷ್ಟು ಖರ್ಚು ಮಾಡುತ್ತೀದ್ದೀರಿ? ಆಡಿಟ್‌ನವರು, ಸಿಎಜಿಯವರು ಈ ಬಗ್ಗೆ ದೊಡ್ಡ ಆಕ್ಷೇಪ ಮಾಡಿದ್ದಾರೆ. ಇವೆಲ್ಲವನ್ನೂ ಮಾಡಿ, ಸರಕಾರವು ಇಷ್ಟೊಂದು ಸಾಧನೆ ಮಾಡಿದೆ ಎಂದು ಹೇಳಿದರೆ, ಅದನ್ನೇ ಒಳಗಡೆ ನೋಡಿದರೆ ಎಲ್ಲಾ ಟೊಳ್ಳು. ಜನರು ನಿಮ್ಮನ್ನು ಅಷ್ಟು ಸುಲಭವಾಗಿ ನಂಬುವುದಿಲ್ಲ.

ಶ್ರೀ ಎಂ. ಮಹದೇವ್ (ಸಕ್ಕರೆ:ಪಶುಸಂಗೋಪನೆ ಸಚಿವರು): ಏನೋ ಸಂತೋಷಕ್ಕೆ ಸ್ವೀಟ್ ಗಿಫ್ಟ್ ಎಂದು ಕೊಟ್ಟಾಗ ಅದನ್ನೂ ನೀವು ಲಂಚ ಎಂದು ತಿಳಿದುಕೊಂಡರೆ ಹೇಗೆ?

ಅಧ್ಯಕ್ಷರು: ತಮಗೆ ಈಗ ಜ್ಞಾನೋದಯವಾಯಿತೆ?

ಶ್ರೀ ಬಿ. ಸೋಮಶೇಖರ್: ನೀವು ಯಾವ ಒಂದು ಇಲಾಖೆಯಲ್ಲಿನ ಯೋಜನೆಯಲ್ಲಿ ಆದಾಯವನ್ನು ತೋರಿಸಿದ್ದೀರಿ? ಪ್ರತಿಯೊಂದರಲ್ಲಿಯೂ ಗೊಂದಲ. ಪ್ರತಿ ಯೋಜನೆಯಲ್ಲಿಯೂ ಗೊಂದಲ. ಪಡಿತರ ಚೀಟಿಯ ವಿಚಾರದಲ್ಲಿಯೂ ಗೊಂದಲ. ಭಾಗ್ಯಜ್ಯೋತಿ ಯೋಜನೆಯಲ್ಲಿಯೂ ಗೊಂದಲ. ಕೆಪಿಟಿಸಿಎಲ್‌ನಲ್ಲಿಯೂ ಗೊಂದಲ. ಇವೊತ್ತು ಪವರ್‌ಸಬ್ಸಿಡಿಯಲ್ಲಿ ಸುಮಾರು 3500 ಕೋಟಿ ರೂಪಾಯಿಗಳು ಬಾಕಿ ಇದೆ. ಅಷ್ಟು ಹಣವನ್ನು ರಾಜ್ಯ ಸರಕಾರದಿಂದ ಅವರಿಗೆ ಕೊಡಬೇಕು. ಈ ವರ್ಷ ಕೇವಲ 80 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಹಾಗಾದರೆ ಕೆಪಿಟಿಸಿಎಲ್‌ವರು ಕೆಪಿಸಿಯವರಿಗೆ ಏನು ಕೊಡುತ್ತಾರೆ, ಹೊರ ರಾಜ್ಯಗಳಿಂದ ತರುತ್ತಿರುವ ವಿದ್ಯುತ್‌ಗೆ ಏನು ಹಣವನ್ನು ಕೊಡುತ್ತಾರೆ, ಹಾಗೆಯೇ ರೈತರಿಗೆ ಸುಮಾರು 600 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದೇವೆಂದು ಹೇಳಿದ್ದರೆ. ಬಹಳ ಸಂತೋಷದ ವಿಚಾರ. ಪಂಪ್‌ಸೆಟ್‌ಗಳ ವಿದ್ಯುತ್‌ಬಾಕಿ ಇರುವುದನ್ನು ಮನ್ನಾ ಮಾಡಿರುವುದು ಒಳ್ಳೆಯ ಕೆಲಸ.

ನಾನು ಅದನ್ನು ಸ್ವಾಗತ ಮಾಡುತ್ತೇನೆ. ನೀವೂ ಕೂಡ ಈ ಸಭೆಯಲ್ಲಿ ಬೇಡಿಕೆಯನ್ನು ಇಟ್ಟಿದ್ದೆವು. ಅದು ಸುಮಾರು ಒಟು 900 ಕೋಟಿ ರೂಗಳಷ್ಟಾಗುತ್ತದೆ. ಆದರೆ ಇಲ್ಲಿ ಒಂದು ವಿಷಯ, ಪಾಪ.... ಕಾನೂನಿಗೆ ಭಯಪಟ್ಟು, ಗೌರವ ಕೊಟ್ಟು, ಯಾರು ಹಣವನ್ನು ಕಷ್ಟದಿಂದ ಕಟ್ಟಿದ್ದಾರೆ, ಅವರಿಗೆ ಏನಾದರೂ reimbursement ಮಾಡುತ್ತೀರಾ? ಅಂತವರಿಗೂ ಏನು ಮಾಡುತ್ತೀರಿ ಎಂಬುದನ್ನು ಸರಕಾರದವರು ಹೇಳಬೇಕು. ಕಾನೂನಿಗೆ ತಲೆ ಬಾಗಿ ಹಣವನ್ನು ಕಟ್ಟಿದ್ದಾರಲ್ಲಾ. ಅಂತಹ ಒಳ್ಳೆಯ ಪ್ರಜೆಗಳಿಗೆ ನೀವು ಯಾವ ರೀತಿಯಲ್ಲಿ ದುಡ್ಡನ್ನು ವಾಪಸ್ ಕೊಡುತ್ತೀರಿ ಎಂಬುದನ್ನು ಹೇಳಬೇಕು. ಹಾಗೆಯೇ ತಾವು ದೀಪಕ್ ಪಾರೀಖ್ ಕಮಿಟಿಯನ್ನು ರಚನೆ ಮಾಡಿದ್ದೀರಿ. ESCROW ಸವಲತ್ತನ್ನು ಕೊಡಬೇಕೋ ಬೇಡವೋ ಎಂಬ ಬಗ್ಗೆ. ತಣ್ಣೀರು ಬಾವಿ ಯೋಜನೆಯಲ್ಲಿ ತಾವು ಏನು ರಚನೆ ಮಾಡಿದ್ದೀರಿ, ಅವರು ಏನು ವರದಿ ಕೊಟ್ಟರು? ಯಾವುದೇ ಒಂದು ಪ್ರೈವೇಟ್ ಕಂಪನಿಗಳಿಗೆ ESCROW ಕೊಡಬಾರದು ಎಂಬ ಒಂದು ಶಿಫಾರಸ್ಸು ಮಾಡಿದರು. ಆದರೆ ತಾವು ಮಾಡಿದ್ದೇನು? ತಣ್ಣೀರುಬಾವಿಗೆ ಮತ್ತು ಅದರ ಜೊತೆಗೆ ಬೇರೆ ಬೇರೆ ಕಂಪನಿಗಳಿಗೂ ನೀವು ESCROW ಸವಲತ್ತನ್ನು ಒದಗಿಸಿಕೊಟ್ಟಿದ್ದಿರಿ. ಅದರಿಂದ ಎಷ್ಟು ರೂಪಾಯಿಗಳು ನಷ್ಟವಾಗುತ್ತದೆ? ಕಮಿಟಿ ಶಿಫಾರಸ್ಸು ಮಾಡಿದ್ದು ಏನಾಯಿತು? ಇವೊತ್ತು ಅನೇಕ ಶಿಫಾರಸ್ಸುಗಳನ್ನು ಮಾಡಿದ್ದೀರಿ. ಟಾಸ್ಕ್‌ಫೋರ್ಸ್ ಕಮಿಟಿಗಳನ್ನು ಮಾಡಿದ್ದೀರಿ. ಅದು ರಾಮಸ್ವಾಮಿ ಕಮಿಟಿ ಇರಬಹುದು, ಹೆಲ್ತ್‌ಕಮಿಟಿ ಟಾಸ್ಕ್‌ಫೋರ್ಸ್ ಇರಬಹುದು, ಅಗ್ರಿಕಲ್ಚರ್ ಟಾಸ್ಕ್‌ಫೋರ್ಸ್ ಇರಬಹುದು, ಹೀಗೆ ಯಾವ ಟಾಸ್ಕ್‌ಫೋರ್ಸ್ ಕಮಿಟಿಯ ವರದಿಯನ್ನು ತಾವು ಅನುಷ್ಠಾನಕ್ಕೆ ತಂದಿದ್ದೀರಿ ಎಂಬುದನ್ನು ಹೇಳಬೇಕು. ಹಾಗೆಯೇ ಮೊಯಿಲಿಯವರ ಕಮಿಟಿಯವರೂ ಕೂಡ 1300 ಕೋಟಿ ರೂಪಾಯಿಗಳಷ್ಟು ಆದಾಯದಲ್ಲಿ ಸೋರಿಕೆ ಆಗುತ್ತಿದೆ ಎಂದು ಹೇಳಿದ್ದಾರೆ. ಆ ಕುರಿತು ನೀವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ಹಾಗೆಯೇ ಗ್ರಾಮಪಂಚಾಯಿತಿಗಳಿಗೆ ಒಂದು ಲಕ್ಷದಿಂದ ಐದು ಲಕ್ಷರೂಗಳವರೆಗೆ ಅನುದಾನವನ್ನು ಏರಿಸಿದ್ದೇವೆ ಎಂದು ಹೇಳಿದ್ದೀರಿ. ಹಾಗೆ ಹೇಳಿದ ಐದು ಲಕ್ಷರೂಗಳಲ್ಲಿ ಎಷ್ಟು ಲಕ್ಷರೂಗಳನ್ನು ನೀವು ಬಿಡುಗಡೆ ಮಾಡಿದ್ದೀರಿ? ಇವೊತ್ತು 800 ಕೋಟಿ ರೂಪಾಯಿಗಳನ್ನು ಜಿಲ್ಲಾ ಪಂಚಾಯತ್ ಅಕೌಂಟ್‌ಗಳಿಂದ ನೀವು ವಾಪಸ್ ತೆಗೆದುಕೊಂಡಿದ್ದೀರಲ್ಲಾ ಖರ್ಚು ಮಾಡದೆ ಆ ಹಣವನ್ನು ಏಕೆ ವಾಪಸ್ ತೆಗೆದುಕೊಂಡಿದ್ದೀರಿ? ಆ ಹಣವು ಅಲ್ಲಿಯೇ ಇದ್ದಿದ್ದರೆ ಒಂದಲ್ಲ ಒಂದು ಕಾರ್ಯಕ್ರಮಗಳಿಗೆ ಜಿಲ್ಲಾ ಪಂಚಾಯತಿಯವರು ಉಪಯೋಗಿಸಿಕೊಳ್ಳುತ್ತಿದ್ದರು. ಹಾಗಾಗಿ ಎಲ್ಲಾ ಆನ್ ಗೋಯಿಂಗ್ ವರ್ಕ್ಸ್‌ಗಳು ಸ್ಥಗಿತವಾಗಿವೆ. ಇವೊತ್ತು ಬಜೆಟ್ ಅಲೋಕೇಶನ್ ಇದ್ದರೆ ನೀವು ಎಷ್ಟು ಪರ್‌ಸೆಂಟ್ ಹಣವನ್ನು ಬಿಡುಗಡೆ ಮಾಡಿದ್ದೀರಿ? ನೀವು 40 ಪರ್‌ಸೆಂಟ್‌ನಷ್ಟನ್ನೂ ಕೂಡ ಬಿಡುಗಡೆ ಮಾಡಿಲ್ಲ. ಆದುದರಿಂದ ಇವೊತ್ತು ತಾವೇನು ಹೇಳಿದ್ದೀರಿ, ಒಂದು ಲಕ್ಷದಿಂದ ಐದು ಲಕ್ಷಗಳೆಂದು ಏನು ಹೇಳಿದೀರಿ ಅದೂ ಕೂಡ ಗಂಗಾಕಲ್ಯಾಣ ಯೋಜನೆಯ ಹಾಗೆ ಆಗಿದೆ. ಹೋದ ವರ್ಷದ ಕಾರ್ಯಕ್ರಮಗಳಿಗೆ ಹಣವಿಲ್ಲ, ಈ ವರ್ಷದಲ್ಲಿ ಹತ್ತು ಸಾವಿರಕ್ಕೆ ಏರಿಸಿದ್ದೇವೆ ಎಂದು ಹೇಳುವುದು ಕೇವಲ ಚುನಾವಣೆ ಘೋಷಣೆ ಎಂದು ಹೇಳಬೇಕಾಗುತ್ತದೆ. ಗ್ರಾಮಪಂಚಾಯಿತಿಗಳ ವಿಚಾರದಲ್ಲಿ ಇನ್ನೊಂದು ರಾಜಕಾರಣ ಮಾಡಿದ್ದೀರಿ. ಗ್ರಾಮಪಂಚಾಯಿತಿಗಳ ಚುನಾಯಿತ ಸದಸ್ಯರುಗಳ ಒಂದು ಸಮಾವೇಶವನ್ನು ಮಾಡಿ, ಧಾರವಾಡದ ಹತ್ತಿರದ ಸಮಾವೇಶಕ್ಕೆ ಒಬ್ಬ ಹರಿಜನ ಮಹಿಳೆಯನ್ನು

ಅಧ್ಯಕ್ಷೆ ಎಂದು ಮಾಡಿ, ಬಂದ ಎಲ್ಲರಿಗೂ ಟಿಎ, ಡಿಎ,ಗಳನ್ನು ಗ್ರಾಮಪಂಚಾಯಿತಿಯ ಹಣದಿಂದಲೇ ಕೊಟ್ಟು, ಸಮಾವೇಶವನ್ನು ಪಕ್ಷದ ವೇದಿಕೆಯಾಗಿ ನೀವು ಪರಿವರ್ತನೆ ಮಾಡಿಕೊಂಡಿದ್ದೀರಲ್ಲಾ, ಇದು ಯಾವ ನೀತಿ? ಇದು ಯಾವ ದೊಂಬರಾಟ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು): ಬಹಳ ಸಂತೋಷ. ನಾನು ಇದ್ದೆ, ನಾವು ಈ ಪ್ರಶ್ನೆಯನ್ನು ಎತ್ತಿದಾಗ, 1987ರಲ್ಲಿ ಕೀರ್ತಿಶೇಷರಾದಂಥ ರಾಮಕೃಷ್ಣ ಹೆಗಡೆಯವರು ಅಂತದ್ದೇ ಒಂದು ಸಮಾವೇಶವನ್ನು ಬೆಂಗಳೂರಿನಲ್ಲಿ ಮಾಡಿದರು. ಆಗ ರಾಜೀವ್ ಗಾಂಧಿಜಿಯವರು ಪ್ರಧಾನ ಮಂತ್ರಿಯಾಗಿದ್ದರು. ಅವರ ಸಚಿವ ಸಂಪುಟದಲ್ಲಿ ಪಿ.ವಿ. ನರಸಿಂಹರಾಯರು, Human Resources Development ಸಚಿವರಾಗಿದ್ದರು. ಅವರನ್ನು ಈ ಒಂದು ಸಮಾವೇಶಕ್ಕೆ ಕರೆಸಿ ದೊಡ್ಡ ಸಮಾವೇಶವನ್ನು ಮಾಡಿದರು. I may be wrong on year. ಆ ಸಮಾವೇಶದ ವಿಚಾರ ನನಗೆ ಬಹಳ ಸ್ಪಷ್ಟವಾಗಿ ನೆನಪಿದೆ. ಅದನ್ನು ಮೊನ್ನೆಯ ಸಮಾವೇಶದ ಭಾಷಣದಲ್ಲಿಯೂ ನಾನು ಹೇಳಿದ್ದೇನೆ. ಇಂತದ್ದೇ ಒಂದು ಸಮ್ಮೇಳನವನ್ನು ಈ ಪಂಚಾಯಿತಿ ರಾಜ್ಯ ವ್ಯವಸ್ಥೆಗೆ, ನಿರ್ಣಾಯಕವಾದಂಥ ತಿರುವನ್ನು ಕೊಡುವುದರಲ್ಲಿ ರಾಮಕೃಷ್ಣ ಹೆಗಡೆಯವರು ಆನಂತರ ಅದಕ್ಕೆ ಪೂರ್ಣ ಪ್ರಮಾಣದ ಚಿತ್ರ ರೂಪಿಸುವುದರಲ್ಲಿ ರಾಜೀವ್ ಗಾಂಧಿಯವರು ಸೇರಿ ಪ್ರಯತ್ನ ಪಟ್ಟರು. ಇಂತದ್ದೇ ಸಮಾವೇಶವನ್ನು ಮಾಡಿದ್ದರು. ಇವತ್ತು ಅವರನ್ನು ಅನುಕರಣೆ ಮಾಡಿ ಅಂತದ್ದೇ ಸಮಾವೇಶವನ್ನು ಮಾಡಿದ್ದೇವೆ ಎಂದು ಹೇಳಿದ್ದೇನೆ. ಆಗ ಅವರು ಟಿಎ, ಡಿಎ, ಕೊಟ್ಟಿದ್ದಾರೋ, ಏನೋ ಗೊತ್ತಿಲ್ಲ. ಆ ಬಗ್ಗೆ ಕಡತ ನೋಡಿ ನಿಮಗೆ ತಿಳಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್: ಆಗ 1987ರ ಸಮಾವೇಶದಲ್ಲಿ ಸರಕಾರದವರೇ ಬಸ್‌ಗಳನ್ನು ಏರ್ಪಾಡು ಮಾಡಿ, ಊಟ, ವಸತಿ, ಏರ್ಪಾಟು ಮಾಡಿ, ಎಲ್ಲಾ ಮೆಂಬರ್‌ಗಳನ್ನು ಕರೆದುಕೊಂಡು ಬಂದಿದ್ದರು. ಆಗ ನಾನು ಕೂಡ ಒಬ್ಬ ಸದಸ್ಯನಾಗಿದ್ದೆ. ನಾನು ಆ ಸಮಾವೇಶದಲ್ಲಿ ಭಾಗವಹಿಸಿದ್ದೆನು. ಅದು ಎಲ್ಲವೂ ಸರಕಾರಿ ಖರ್ಚಿನಲ್ಲಿಯೇ ಆಗಿತ್ತು.

ಶ್ರೀ ಬಿ. ಸೋಮಶೇಖರ್: ಮಾನ್ಯ ಅಧ್ಯಕ್ಷರೆ, 1987ರಲ್ಲಿ ಅಂಥ ಸಮಾವೇಶವು ನಡೆದಿರುವುದು ನಿಜ. ನಮ್ಮ ಸರಕಾರವು ಮಾನವ ಸಂಪನ್ಮೂಲ ಸಚಿವರನ್ನು ಆ ಸಮಾವೇಶಕ್ಕೆ ಕರೆಸಿದ್ದೇವೆ. ಏಕೆಂದರೆ ಆಗ ತಾನೆ ಆ ಒಂದು ಯೋಜನೆಯು, ವಿಕೇಂದ್ರಿಕರಣದ ಹೊಸ ಪದ್ಧತಿಯು ಬಂದಿತ್ತಲ್ಲಾ? ಆಗ ಮಾನವ ಸಂಪನ್ಮೂಲವನ್ನು ಹೇಗೆ ಚುನಾಯಿತ ಪ್ರತಿನಿಧಿಗಳು ಉಪಯೋಗಿಸಿಕೊಳ್ಳಬೇಕೆಂದು ಅಂದಿನ ಪಕ್ಷದ ಅಧ್ಯಕ್ಷರ ಮೂಲಕ ಸಂಪನ್ಮೂಲ ಸಚಿವರನ್ನು ಕರೆಸಿದ್ದೇವೆ. ಒಬ್ಬ ಪಕ್ಷದ ಅಧ್ಯಕ್ಷರನ್ನು ಕರೆಸಿರಲಿಲ್ಲ.

ಶ್ರೀ ಎಸ್.ಎಂ. ಕೃಷ್ಣ: ಒಬ್ಬ ಪಕ್ಷದ ಅಧ್ಯಕ್ಷರು, ಅದು ಇನ್ಸಿಡೆಂಟಲ್. ವಿರೋಧ ಪಕ್ಷದ ನಾಯಕರಿಗೆ ಏನು ಮರ್ಯಾದೆ ಕೊಡಬೇಕೋ, ಆ ಮರ್ಯಾದೆಯನ್ನು ಕೊಟ್ಟೆವು. ಮತ್ತು ಮಾನ್ಯ ಸೋನಿಯಾ ಗಾಂಧಿಯವರು ಎಷ್ಟು ಕಾಗದಗಳನ್ನು ನಮಗೆ ಬರೆದಿದ್ದಾರೆ, ಅದೂ ಆ ಪಂಚಾಯತ್‌ರಾಜ್ಯ ವ್ಯವಸ್ಥೆಯ ಬಗ್ಗೆ, ಆಗಿಂದಾಗ್ಗೆ ಇದರ ಬಗ್ಗೆ ನಮ್ಮ ಸರಕಾರಕ್ಕೆ ಪೂರ್ಣ ಬದ್ಧತೆ ಇರಬೇಕು, ಎನ್ನುತಕ್ಕಂಥಾದ್ದನ್ನು ಪ್ರತಿ ಮೂರು ತಿಂಗಳಿಗೆ ಒಂದೊಂದು ಸಾರಿ ಕಾಗದವನ್ನು ಬರೆದಿದ್ದಾರೆ. ಬೇಕಾದರೆ ಆ ಕಾಗದದ ನಕಲನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ಯಾರಿಗೆ ಈ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ, ಪೂರ್ಣವಾದಂಥ ನಿಷ್ಠೆ ಇದೆ. ಅಂಥವರನ್ನು ಕರೆಸುವುದರಲ್ಲಿ ನೀವು

ಅದರಲ್ಲಿ ತಪ್ಪುಗಳನ್ನು ಹುಡುಕಲು ಹೊರಟಿರತಕ್ಕಂತಾದ್ದು, ನಾವು ವಿರೋಧ ಪಕ್ಷದ ನಾಯಕರನ್ನು ಕರೆದು ಬಂದು ನೀವು ಭಾಷಣ ಮಾಡಿ ಎಂದು ಕೇಳಿದ್ದೆವು. ಅವರನ್ನು ಪರ್ಸನಲ್ ಆಗಿ ಕೋಳಿವಾಡರು, ಘೋರ್ಪಡೆಯವರು, ಆಹ್ವಾನಿಸಿದ್ದರು. ನಾನು ಅವರನ್ನು ಸಂಪರ್ಕ ಮಾಡಲಿಲ್ಲ. ಆದರೆ ಸಚಿವರುಗಳು ಅಫಿಶಿಯಲ್ ಆಗಿ ಹೋಗಿ ತಾವುಗಳು ದಯಮಾಡಿ ಬರಬೇಕು, ಎಂದು ಕೇಳಿಕೊಂಡಿದ್ದರು. ಮೇಲ್ಮನೆ ವಿರೋಧಪಕ್ಷದ ನಾಯಕರನ್ನು ಕರೆದಿದ್ದೆವು. ತಾವುಗಳು ದಯಮಾಡಿಸಬೇಕು, ಸಮಾವೇಶಕ್ಕೆ ಶೋಭೆ ಬರುತ್ತದೆ ಎಂದು ಕೇಳಿಕೊಂಡಿದ್ದೆವು. ಪಂಚಾಯತ್‌ರಾಜ್ ವ್ಯವಸ್ಥೆಯ ಬಗ್ಗೆ ಒಟ್ಟು ರಾಜ್ಯದಲ್ಲಿ ಎಂದು ಒಂದು ಸಂಘಟಿತ ಪ್ರಯತ್ನ ನಡೆಯುತ್ತಿದೆ ಎಂಬುದು ಜನರಿಗೆ ತಿಳಿಸಲ್ಪಡುತ್ತದೆ ಎಂದು ಹೇಳಿದ್ದೆ. ಆದರೆ ಅವರುಗಳು ಬರಲಿಲ್ಲ.

ಶ್ರೀ ಬಿ. ಸೋಮಶೇಖರ್: ನಾವು ಅಂದು ಅವರನ್ನು ಕರೆಸಿದ್ದು ಅವರು ಮಾನವ ಸಂಪನ್ಮೂಲ ಸಚಿವರು, ಅವರು ಅನುಭವಸ್ಥರು, 50 ವರ್ಷದ ರಾಜಕೀಯ ಅನುಭವವಿರುವವರು, ಪ್ರಧಾನಮಂತ್ರಿಗಳಾಗಿದ್ದವರು, ಅವರ ಅನುಭವಧಾರೆಯು ಸಮಾವೇಶಕ್ಕೆ ಇರಲೆಂದು ಆಶಯವಿತ್ತು. ತಾವುಗಳು ಶ್ರೀಮತಿ ಸೋನಿಯ ಗಾಂಧಿಯವರು ವಿರೋಧಪಕ್ಷದ ನಾಯಕಿಯವರಾಗಿದ್ದಾರೆ, ಅವರು ಈ ಒಂದು ಸ್ಥಳೀಯ ಸಮಸ್ಯೆಗಳ ಬಗ್ಗೆ ತಿಳಿದುಕೊಂಡಿದ್ದಾರೆ ಎಂದು ಹೇಳಿದ್ದೀರಿ.

2.00 ಪಿ.ಎಂ.

ಈ ಸ್ಥಳೀಯ ಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅವತ್ತು ನಾವು ಒಂದು ಪಕ್ಷದ ಮಂತ್ರಿ ಎಂದು ಕರೆಸಿರಲಿಲ್ಲ, ಆವತ್ತು ಕಾಂಗ್ರೆಸಿನ ಮಂತ್ರಿಗಳಾಗಿದ್ದರು, ನಮ್ಮದು ಜನತಾದಳದ ಸರ್ಕಾರವಿತ್ತು, ನೀವೂ ಯಾರೋ ಒಬ್ಬ ಮಂತ್ರಿಗಳನ್ನು ಕರೆಸಬಹುದಿತ್ತು, ಇವತ್ತಿನ ಕೇಂದ್ರ ಸರ್ಕಾರದ ಯಾರಾದರೂ ಒಬ್ಬ ಸಚಿವರನ್ನು ತಾವು ಕರೆಸಬಹುದಿತ್ತು.

ಶ್ರೀ ಎಸ್.ಎಂ. ಕೃಷ್ಣ: ನಾವು ಯಾವುದೋ ಮಂತ್ರಿ ಸ್ಟೇಟಸ್‌ರವರನ್ನು ಕರೆಸಿದ್ದೇವೆ.

ಶ್ರೀ ಬಿ. ಸೋಮಶೇಖರ್: ತಾವು ಅದನ್ನು justify ಮಾಡಿಕೊಂಡರೆ ನನ್ನದೇನೂ ಅಭ್ಯಂತರವಿಲ್ಲ.

SRI S.M. KRISHNA: Justify ಮಾಡುವುದಲ್ಲ. We believe it. We swear by it.

ಶ್ರೀ ಎಸ್.ಎಸ್. ಪಾಟೀಲ್: ವಿರೋಧ ಪಕ್ಷದ ನಾಯಕಿಯರನ್ನು ಕರೆಸಿದ್ದು ತಪ್ಪು ಎಂದು ನಾವು ಹೇಳುವುದಿಲ್ಲ, ಆದರೆ ಹೆಗಡೆಯವರು ಕರೆಸಿ ಮಾಡಿಸಿದಾಗ ಅವರೆಲ್ಲಾ ಹೊಸದಾಗಿ ಆರಿಸಿಬಂದಿದ್ದರು, ಮಾಡಿದರು, ಆದರೆ ಈಗ ನೀವು ಹೋಗುವ ಮುಂದೆ ಕರೆಸಿದಿರಿ, ವಿಧಾನಸಭೆ ಡಿಸಾಲ್ವ್ ಆಗುವ ಮುನ್ನ ಕರೆಸುತ್ತಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ: ಆಮೇಲೆ ನಿಮ್ಮದೂ ಡಿಸಾಲ್ವಾಯಿತು, question of months, you know. ಪಾಟೀಲರೇ, ಆಗ ರಾಜೀವ್‌ಗಾಂಧಿಯವರ ಮೇಲೆ ನಮ್ಮ local unit, Congress partyಯವರು ಕಳಿಸಬೇಡಿ ಎಂದು ಒತ್ತಾಯ ತಂದಿರತಕ್ಕಂಥದ್ದು ನನ್ನ personal knowledge. ಆದರೆ ರಾಜೀವಗಾಂಧಿಯವರು ಹೇಳಿದರು ಪಂಚಾಯಿತ್ ರಾಜ್ ವ್ಯವಸ್ಥೆ ವಿಚಾರದಲ್ಲಿ ಯಾರಿಗಾದರೂ ಶ್ರದ್ಧೆ ಇದ್ದರೆ ಅದು ಮುಂದುವರೆಯಬೇಕು ಅನ್ನುವ ಇಷ್ಟ, ಇರಾದೆ ಇದ್ದರೆ ಅದನ್ನು ನಾನು encourage ಮಾಡಬೇಕು ಎಂದು ನರಸಿಂಹರಾಯರಿಗೆ ನೀವು ಈ ಸಮ್ಮೇಳನಕ್ಕೆ ಹೋಗಲೇಬೇಕು ಎಂಬುದನ್ನು ಅವರು ಖಚಿತಪಡಿಸಿಕೊಂಡರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಹೇಳುತ್ತಿರುವುದೆಲ್ಲಾ ನಿಜವೇ, ಸ್ವತಃ ರಾಜೀವ್‌ಗಾಂಧಿಯವರಿಗೇ ರಾಮಕೃಷ್ಣ ಹೆಗಡೆಯವರು ಬರಬೇಕು ಅಂತ ಕರೆದರು, ಅದಾಗಲಿಲ್ಲ, ನರಸಿಂಹರಾಯರನ್ನು ಕಳಿಸುತ್ತೇವೆ ಅಂದರು, ನರಸಿಂಹರಾಯರು ಬರಬಾರದೆಂದು ಸ್ಥಳೀಯ ಕಾಂಗ್ರೆಸಿನವರು ಅವರ ಮೇಲೆ ಒತ್ತಾಯ ತಂದಿದ್ದರು, ಅದೆಲ್ಲಾ ನಿಜಾಂಶವೇ, ಅಲ್ಲದೆ ಅಲ್ಲಿಗೆ ಬಂದಿದ್ದ ಗ್ರಾಮಪಂಚಾಯಿತಿಗಳ ಪ್ರಧಾನರು, ಉಪಪ್ರಧಾನರು ಸದಸ್ಯರುಗಳೆಲ್ಲಾ ಬಂದಿದ್ದರು ಅವರಿಗೆ ಟಿಎ ಡಿಎ ಕೊಟ್ಟಿದ್ದೂ ನಿಜ, ರಾಜೀವಗಾಂಧಿಯವರನ್ನು ಎರಡು ವಿಚಾರದಲ್ಲಿ ನಾನು ಸಹಿತ ಹೇಳುತ್ತೇನೆ: ಒಂದು, ನಮ್ಮ ಸರ್ಕಾರ ರಾಜೀನಾಮೆ ಇತ್ತು ಅಸೆಂಬ್ಲಿ ಡಿಸಾಲ್ವ್ ಆಗಬೇಕೆಂದು ನಾವು ಹೇಳಿದಾಗ alright, you be the caretaker Chief Minister ಅಂತ ಹೇಳಿ caretaker Minister ಆಗಿ ಮೂರು ತಿಂಗಳು ನಮ್ಮ ಸರ್ಕಾರವನ್ನು ಮುಂದುವರೆಸಿದ್ದನ್ನು ನಾವು ಅಪ್ರೀಷಿಯೇಟ್ ಮಾಡಲೇಬೇಕಾಗುತ್ತದೆ. ಅದಾದಮೇಲೆ ನಾವೇನು ಕರ್ನಾಟಕದಲ್ಲಿ ಮಾಡಿದ್ದೆವು ಅದಕ್ಕೆ ಸಂವಿಧಾನ ತಿದ್ದುಪಡಿ ಮಾಡಿ ಗ್ರಾಮೀಣ ಸ್ವರಾಜ್ಯಕ್ಕೆ ಅವಕಾಶ ಮಾಡಿಕೊಟ್ಟಿದ್ದನ್ನು ನಾವು ಅಪ್ರೀಷಿಯೇಟ್ ಮಾಡುತ್ತೇವೆ we don't fall behind that. ಇದರಲ್ಲಿ ನಮ್ಮದೂ ಸೋಮಶೇಖರವರದ್ದೂ ಆಕ್ಷೇಪ ಏನೆಂದರೆ ಇಡೀ ವ್ಯವಸ್ಥೆಯನ್ನು ಕಾಂಗ್ರೆಸೀಕರಣಗೊಳಿಸಲು ಹೇಗೆ ವ್ಯವಸ್ಥೆ ಮಾಡಿದಿರಿ ಎಂಬುದು, ತಮಗೆ ಗೊತ್ತಿರುವಂತೆ ಎಲ್ಲಾ ಕಾರ್ಯಕ್ರಮಗಳನ್ನು ನೀವು ಕಾಂಗ್ರೆಸೀಕರಣ ಮಾಡುತ್ತಿದ್ದೀರಿ, ಸ್ತ್ರೀಶಕ್ತಿ ಕಾರ್ಯಕ್ರಮ, ನಾವ್ಯಾರು ವಿರೋಧವಿಲ್ಲ, ಆದರೆ ಅದನ್ನು ಕಾಂಗ್ರೆಸೀಕರಣಗೊಳಿಸುತ್ತಿದ್ದೀರಿ, ಅದೇ ರೀತಿ ಎಸ್‌ಎಸ್ ಪಾಟೀಲರು ಈಗ ಹೇಳಿದ್ದಕ್ಕೆ ನಿಮ್ಮ ಬಳಿ ಉತ್ತರವಿಲ್ಲ, ನೀವೂ ಚುನಾವಣೆಯಾಗಿ ಅಧಿಕಾರಕ್ಕೆ ಬಂದ ತಕ್ಷಣವೇ ಜಿಲ್ಲಾಪಂಚಾಯ್ತಿ ಚುನಾವಣೆಯಾದ ಮೇಲೆ ಗ್ರಾಮ ಪಂಚಾಯ್ತಿ ಚುನಾವಣೆಗಳಾದ ಮೇಲೆ ಅವರಿಗೆಲ್ಲಾ ಮೂರು ದಿನದ್ದಲ್ಲ ಒಂದು ವಾರಕ್ಕೆ ತರಬೇತಿಗೆ ಕರೆದಿದ್ದೇವೆ ಅಂದಿದ್ದರೆ ಜಗದೀಶ ಶೆಟ್ಟರಷ್ಟೇ ಅಲ್ಲ ನಾವೆಲ್ಲರೂ ಕರೆಯದೇ ಇದ್ದರೂ ಬರ್ತಾ ಇದ್ದೆವು. ಭಾಗವಹಿಸುತ್ತಿದ್ದೆವು, ಆದರೆ ನೀವು ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಿದ್ದೀರಿ ಅನ್ನುವುದೇ ನಮ್ಮ ಆರೋಪ.

ಶ್ರೀ ಎಸ್.ಎಂ. ಕೃಷ್ಣ: ಒಬ್ಬೊಬ್ಬರದ್ದನ್ನೂ ಈಗಲೇ ಮುಗಿಸಿ ಬಿಡೋಣ. ಡಿಸ್‌ಪೋಸ್ ಮಾಡೋಣ. ಅದನ್ನು ಪೆಂಡಿಂಗ್ ಇಡುವುದು ಬೇಡ. ಸಿಂಧ್ಯಾರು ಹೇಳಿದ್ದರ ಬಗ್ಗೆ ಇದನ್ನು ನಾವು 6 ತಿಂಗಳ ಕೆಳಗೆ ಮಾಡಬೇಕಾಗಿತ್ತು, ಬೇಕಾದರೆ ಅದರ correspondence ನಿಮಗೆ ತೋರಿಸುತ್ತೇನೆ, ಅದನ್ನ 8 ತಿಂಗಳ ಕೆಳಗೆ ಮಾಡಬೇಕು ಅಂತ ಪ್ರಸ್ತಾವನೆಯನ್ನು ನಾವೂ ಅವರೂ, ಇದನ್ನು ಮಾಡಿದರೆ ಪಂಚಾಯತ್ ಸ್ವರೂಪಕ್ಕೆ ಹೆಚ್ಚು ಶಕ್ತಿ ತಂದುಕೊಡುತ್ತದೆ ಇಂಥದೊಂದು ಪ್ರಾತಿನಿಧಿಕವಾದ ಸಮ್ಮೇಳನ ಮಾಡಿದರೆ ಒಳ್ಳೆಯದು ಎಂಬುದು, ಆದರೆ ಒಂದಲ್ಲ ಒಂದು ಕಾರಣದಿಂದ ನಾವು ಅದನ್ನು ಮುಂದಕ್ಕೆ ಹಾಕಿಕೊಳ್ಳುತ್ತಾ ಬಂದೆವು, ಆ ಘಳಿಗೆ ಕೂಡಿಬಂತು, ನಡೆಯಿತು, ಏನಕೇನ ಪ್ರಕಾರೇಣ, ನಮ್ಮ ಚುನಾವಣೆ ಇನ್ನೂ ಸೆಪ್ಟಂಬರ್‌ಗೆ ಬರಬೇಕಾಗಿದೆ, ನಮಗೇನು ಗೊತ್ತು ಈಗ ಲೋಕಸಭೆ ಚುನಾವಣೆ ಬರುತ್ತದೆ ಅಂತ, ನೀವುಗಳು ಚುನಾವಣೆ ತಂದು ಕೊಟ್ಟರೆ.. ಸಿಂಧ್ಯಾರವರೇ ನೀವು ಯೋಚಿಸಿ, ನಾವು ನಿರೀಕ್ಷೆ ಮಾಡಿರಲಿಲ್ಲ ಈ ಚುನಾವಣೆ ನೀವೂ ನಿರೀಕ್ಷೆ ಮಾಡಿರಲಿಲ್ಲ, ಅವರ ಈ ದೇಶದ ಮೇಲೆ ಚುನಾವಣೆಯನ್ನು force ಮಾಡುತ್ತಿದ್ದಾರೆ, ಸಂತೋಷ,

force ಮಾಡಿದ ಮೇಲೆ ನಾನೇನು ಮಾಡಲಿ? ನನ್ನದು ಸೆಪ್ಟೆಂಬರ್. ಆದ್ದರಿಂದ ನಾನು ಈ ಪಂಚಾಯತ್ ಸಮ್ಮೇಳನವನ್ನು ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಮಾಡಿದೆ ಅಂತ ನೀವೇನು ಹೇಳುತ್ತೀರಿ ಅದು ಅಷ್ಟು ಸಮಂಜಸವಲ್ಲ.

ಚೇರ್ಮನ್: ನನ್ನ ಅನಿಸಿಕೆ ಹೇಳಿಬಿಡುತ್ತೇನೆ, ವಾದ ಕೇಳಿದ ಮೇಲೆ ನನಗನ್ನಿಸುತ್ತದೆ ನಿಮ್ಮ ಮನಸ್ಸಿನಲ್ಲಿ ಇದು ಆಗಬಾರದಿತ್ತು ಒಂದು ಆಗಬಾರದ ಕೆಲಸ ಆಗಿಬಿಟ್ಟಿತು ಎಂದು ಆದರೆ ಪ್ರಥಮದಲ್ಲೇ ಮಾಡಿದ್ದಿದ್ದರೆ ಚಿಂತೆ ಇಲ್ಲ ಅಂತ್ಯದಲ್ಲಿ ಮಾಡಿದ್ದು ತಪ್ಪು ಇದು ನಿಮ್ಮ ವಾದ ಭಾವನೆಯೇ ಪಾಟೀಲರೇ?

ಶ್ರೀ ಎಸ್.ಎಸ್. ಪಾಟೀಲ್: ಕೊನೇ ಹಂತ ಆದರೂ ಮಾಡಲಿ ಮೊದಲನೇ ಹಂತ ಆದರೂ ಮಾಡಲಿ, ಡಿ.ಆರ್. ಪಾಟೀಲರು ಹೇಳಿದರು, ಹಿಂದೆ ಹೆಗಡೆಯವರು ಇದ್ದಾಗ ಮಾಡಿದರು ನಾವೆಲ್ಲಾ ಬಂದಿದ್ದೆವು ಅಂತ, ಹೆಗಡೆಯವರು ಮಾಡಿದಾಗ ನರಸಿಂಹರಾಯರು ಎಲ್ಲರನ್ನೂ ಕೂರಿಸಿಕೊಂಡು ತಾಸು ಎರಡು ಅದರ ಬಗ್ಗೆ ತಿಳಿವಳಿಕೆ ಕೊಟ್ಟಿದ್ದರು, ಇಲ್ಲಾನಾಗಿದ್ದು? ಜನರು ಅದನ್ನು ನೋಡಲೇ ಇಲ್ಲ, ಅಂಥಾ ವ್ಯವಸ್ಥೆ. ಪಾಪ ಹೋದವರು ಅರ್ಧಕ್ಕೆ ಹೊರಳಿಬಂದುಬಿಟ್ಟರು, ಇದು ವೇಸ್ಟಲ್ಲವಾ? ಸೋನಿಯಾಗಾಂಧಿಯವರು ನಿಂತು ಎರಡು ತಾಸು ಭಾಷಣ ಮಾಡಿ ಹೇಳಿ ಹೋಗಿದ್ದರೆ ನಾವು ಸಂತೋಷಪಡುತ್ತಿದ್ದೆವು. ಆದರೆ ವೇಸ್ಟಾಗಿ ಹೋಯಿತು, ಇದು ಬಹಳ ತಪ್ಪಾಗಿದೆ ಎಂಬುದು ನಮ್ಮ ಒಂದನೇ ವಾದ, ಆಮೇಲೆ ಮುಖ್ಯಮಂತ್ರಿಗಳು ನಡುಗಾಲ ಚುನಾವಣೆ ಇವರು ತಂದರು ಎಂದರು. ಅದರಲ್ಲಿ ನಿಮ್ಮದೂ ತಪ್ಪಿದೆ, ಏನೆಂದರೆ ಮೂರು ರಾಜ್ಯದಲ್ಲಿ ನೀವು ವಿಶ್ವಾಸ ಕಳೆದುಕೊಂಡು ಸೋತಿದ್ದಕ್ಕೆ ಅವರಿಗೆ ಹುರುಪು ಬಂತು. ಈಗ ಬಹಳ ಹುರುಪಿನಲ್ಲಿದ್ದುಬಿಟ್ಟಿದ್ದಾರೆ, ನಮ್ಮ ರೆಡ್ಡಿಯವರು ಮುಂದಿನ ಮಂತ್ರಿಗಳು ಅಂತ ಆಗಲೇ ಹೇಳಿಬಿಟ್ಟರು, ನಾವೇ ಸರ್ಕಾರಕ್ಕೆ ಬಂದುಬಿಡುತ್ತೇವೆ ಅಂತ.

ಶ್ರೀ ಎಸ್.ಎಂ. ಕೃಷ್ಣ: ನಾನು ಸುಬ್ಬಾರೆಡ್ಡಿಯವರನ್ನು ಕಳೆದ ಕೆಲವು ದಿನಗಳಿಂದ ನೋಡುತ್ತಿದ್ದೇನೆ, ಅವರು ಈ ಕುರ್ಚಿಯನ್ನು ನೋಡುತ್ತಾ ಇರ್ತಾರೆ.

ಶ್ರೀ ಎಸ್.ಎಸ್. ಪಾಟೀಲ್: ಆಮೇಲೆ ಒಂದು ನಮಗೆ ಸಂತೋಷ ಅಂದರೆ ಶ್ರೀಮತಿ ಸೋನಿಯಾಗಾಂಧಿಯವರ ಬಗ್ಗೆ ಅವರ ಪತ್ರಗಳ ಬಗ್ಗೆ ನಮಗೆ ಬಹಳ ಗೌರವ ಇದೆ, ಅದನ್ನು ನೀವು ಒಪ್ತೀರಾ ಅಂತ ತಿಳಿದುಕೊಂಡಿದ್ದೇನೆ. ನಾನಂತೂ ಒಪ್ಪಿಕೊಳ್ತೀನಿ, ಆದರೆ ದುರ್ದೈವದಿಂದ ಈಗ ಶ್ರೀಮತಿ ಸೋನಿಯಾಗಾಂಧಿಯವರು ಪತ್ರಗಳಿಗೆ ವಿರುದ್ಧವಾಗಿ ಸಹಕಾರಿ ಕಾಯಿದೆಗೆ ತಿದ್ದುಪಡಿ ತರುತ್ತಿದ್ದೀರಿ, ದಯವಿಟ್ಟು ನೀವಿದ್ದರೆ ನಾನು ಮಾತನಾಡುತ್ತೇನೆ. ಶ್ರೀಮತಿ ಸೋನಿಯಾಗಾಂಧಿಯವರ ಮನಸ್ಸಿನ ವಿರುದ್ಧ ಇಲ್ಲಿ ಸಹಕಾರಿ ಕಾಯಿದೆಗೆ ತರುತ್ತಿದ್ದೀರಿ. ಈಗಾಗಲೇ ಅಲ್ಲಿ ಮಂಡಿಸಿದ್ದೀರಿ, ಅವರ ಮನಸ್ಸಿನ ವಿರುದ್ಧ ಇದು ಮಾಡುತ್ತಿದ್ದೀರಿ.

ಶ್ರೀ ಎಸ್.ಎಸ್. ಕೃಷ್ಣ: ಅದರ ಬಗ್ಗೆ ನಮಗೆ ಮುಕ್ತವಾದ ಮನಸ್ಸಿದೆ. ನಿಮ್ಮ ವಿರೋಧ ಇದ್ದರೆ ಮತ್ತು ಶ್ರೀಮತಿ ಸೋನಿಯಾಗಾಂಧಿಯವರ ಯಾವುದೇ ರೀತಿಯಲ್ಲಿ ಈ ಪಂಚಾಯತ್ ವ್ಯವಸ್ಥೆಯನ್ನು ವೀಕ್ ಮಾಡಲಿಲ್ಲ ಅವರು she will not be....

ಶ್ರೀ ಎಸ್.ಎಸ್. ಪಾಟೀಲ್: ಸಹಕಾರಿ ಕಾಯಿದೆ. ಅವರೇನು ಪತ್ರ ಬರೆದಿದ್ದಾರೆ ಅದಕ್ಕೆ ವಿರುದ್ಧವಾಗಿ ಅಮೆಂಡ್‌ಮೆಂಟ್ ತರುತ್ತಾ ಇದ್ದೀರಿ.

ಶ್ರೀ ಎಸ್.ಎಂ. ಕೃಷ್ಣ: ನಾನಿನ್ನೂ ಪಂಚಾಯತ್‌ರಾಜ್‌ನಲ್ಲೇ ಇದ್ದೆ ನೀವು ಹೇಳುವುದು ಗೊತ್ತಿಲ್ಲ, ಅದನ್ನು ವಿಚಾರಿಸುತ್ತೇನೆ.

ಶ್ರೀ ಬಿ. ಸೋಮಶೇಖರ್: ಮುಖ್ಯಮಂತ್ರಿಗಳು ಎಲ್ಲವನ್ನೂ ಸಮರ್ಥನೆ ಮಾಡಿಕೊಂಡು ಹೋಗುತ್ತಿದ್ದಾರೆ ನನ್ನದೇನೂ ಅಭ್ಯಂತರವಿಲ್ಲ ಸಂತೋಷ. ಏಕೆಂದರೆ ಅವರು ಬಹಳ ಹಿರಿಯರು ಅನುಭವಶಾಲಿಗಳು, ಕಾಂಗ್ರೆಸಿನವರನ್ನೇ ಕರೆಸಬೇಕು ಅಂತಿದ್ದಿದ್ದರೆ ನನ್ನ ಅನಿಸಿಕೆ ಮಣಿಶಂಕರ ಅಯ್ಯರ್‌ರವರನ್ನು ಕರೆಸಬಹುದಿತ್ತು ಈ ವಿಚಾರದಲ್ಲಿ ಆಗ ನಾವು ಪ್ರಶ್ನೆ ಮಾಡಲು ಆಗುತ್ತಿರಲಿಲ್ಲ, ಅಥವಾ ಈಗಿನ HRD ಮಿನಿಸ್ಟರನ್ನಾದರೂ ಕರೆಸಬಹುದಿತ್ತು, ನೀವು ಕರೆಸಿದ್ದಿರಿ ನಾವು ಕರೆಸಿದೆವು ಅಂತ ಹೇಳಬಹುದಿತ್ತು, ಆದರೆ ಅದನ್ನು ಬಿಟ್ಟು ವಿರೋಧ ಪಕ್ಷದ ನಾಯಕಿ ಅಂತ ಕರೆಸಿದಿರಿ ಅದಕ್ಕೇ, ಆಮೇಲೆ ಟಿವಿ ಡಿವಿ ಎಲ್ಲಾ ಕೊಟ್ಟು ಮಾಡಿದ್ದೀರಲ್ಲಾ.

ಶ್ರೀ ಎಸ್.ಎಂ. ಕೃಷ್ಣ: ಸೋಮಶೇಖರರಿಗೆ ಬೇಜಾರು ಮಾಡಲು ಇಷ್ಟಪಡುವುದಿಲ್ಲ. ನಿಮ್ಮ ದಾಖಲೆಗೆ ಮಣಿ ಶಂಕರ ಅಯ್ಯರರನ್ನು ನಾವು ಖಾಸತಿ ಮಟ್ಟದಲ್ಲಿ ಕರೆಸಿದ್ದೆವು, ಒಂದು ದಿವಸ ಪೂರಾ ಬೆಳಿಗ್ಗೆ 9--30 ಗಂಟೆಗೆ ನಾವು ಹೋದವರು ರಾತ್ರಿ 9 ಗಂಟೆಯವರೆಗೆ ಈ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಅತ್ಯಂತ ತೀವ್ರತರವಾದ ಗಂಭೀರವಾದ ಚರ್ಚೆಯನ್ನು ಚೌಡಯ್ಯ ಸ್ಮಾರಕ ಹಾಲ್‌ನಲ್ಲಿ ಮಾಡಿದೆವು. ಹೊರಗಡೆ ಕೂಡ ನಾವು ಟೆಲಿವಿಷನ್ ಇಟ್ಟು ಮಾಡಿದೆವು. ಏಕೆಂದರೆ it was over crowded. ಆಗ ನಮಗೆ ಈ ಚಿಂತನೆ ಬಂತು. ಏನು ಆ ಚಿಂತನೆ, ಮಣಿಶಂಕರ್ ಅಯ್ಯರ್‌ರವರು ಆ ಚಿಂತನೆಯನ್ನು ನಮ್ಮ ಮೇಲೆ ಹಾಕಿದರು. ಇಡೀ ರಾಜ್ಯದಲ್ಲೇ ಅದನ್ನು ಕರೆಯಿರಿ ಎಂದು ಹೇಳಿ. ಮಣಿಶಂಕರ್ ಅಯ್ಯರ್‌ರವರು ಆವತ್ತು ಕಾರಣಾಂತರಗಳಿಂದ ಅಲ್ಲಿಗೆ ಬರಲಿಕ್ಕೆ ಆಗಲಿಲ್ಲ. ಅವರಿಗೆ ಬೇರೆ ಯಾವುದೋ ಒಂದು ಮಹತ್ತರವಾದ ಕೆಲಸವಿದ್ದುದರಿಂದ ಅವರಿಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ ಅಷ್ಟೇನೇ.

ಶ್ರೀ ಡಿ.ಆರ್. ಪಾಟೀಲ್: ದೆಹಲಿ ಮಟ್ಟದಲ್ಲಿ ಕೆಲಸ ಮಾಡುವಂಥ ಯಾವ ರಾಜಕೀಯ ನಾಯಕರಿಗೂ ಈ ಪಂಚಾಯತ್ decentralisation ಬಗ್ಗೆ ಸೋನಿಯಾಗಾಂಧಿಯವರಿಗೆ ಇರುವಷ್ಟು ಕಳಕಳಿ ಯಾರಿಗೂ ಇಲ್ಲ, including Prime Minister I tell you.

ಶ್ರೀ ಆರಗ ಜ್ಞಾನೇಂದ್ರ: ನಿಮಗೆ ನೀವೇ ಸರ್ಟಿಫಿಕೇಟನ್ನು ಕೊಟ್ಟುಕೊಂಡುಬಿಟ್ಟರೆ ಹೇಗೆ?

ಶ್ರೀ ಡಿ.ಆರ್. ಪಾಟೀಲ್: ನೀವು ಏನು ಮಾಡಿದ್ದೀರಿ ಎಂದು ಹೇಳಿ. Decentralisation ಬಗ್ಗೆ ನೀವೇನು ಮಾಡಿದ್ದೀರಿ ಎಂದು ಹೇಳಿ. ನೀವು ಏನು ಮಾಡಿದ್ದೀರಿ ಹೇಳಿ ಸ್ವಾಮಿ.

ಛೇರ್ಮನ್: ಈಗ ಸದನವನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸೇರಲಾಗುತ್ತದೆ.

(ಸದನವು 2 ಗಂಟೆ 11 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಭೋಜನ ವಿರಾಮದ ನಂತರ ಪುನಃ 3.40ಕ್ಕೆ ಪ್ರಾರಂಭವಾಯಿತು)

(ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

7. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಅನುಮೋದನೆಗೆ ತೆಗೆದುಕೊಳ್ಳುವ ಬಗ್ಗೆ